# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 28 ಶನಿವಾರ 2025

₹4

46

ಸಂಪುಟ: 46 | ಸಂಚಿಕೆ: 72 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




Promotional Feature

# ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ಏಳು ಸುತ್ತಿನ ಕೋಟೆ ಭೇದಿಸಿ ಪ್ರಾಬಲ್ಯ ಉಳಿಸಿಕೊಂಡ ಜಿ.ಡಿ.ಹರೀಶ್‌ಗೌಡ

ಈ ಬಾರಿ ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸರ್ಕಾರ ಹಾಗೂ ಶಾಸಕರು ಅಧಿಕಾರದ ಗದ್ದುಗೆ ಏರಲು ನಡೆಸಿದ ಪ್ರಯತ್ನ ವಿಫಲವಾಗಿ ಅತಂತ್ರ ಸ್ಥಿತಿಯಲ್ಲಿದ್ದು ಸರ್ಕಾರಕ್ಕೆ ಮುಜುಗರವಾಗಿದೆ. ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಹಿಡಿತ ಹೊಂದಿರುವ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡ ಅವರು ಜಯಗಳಿಸಿದ್ದಾರೆ.

ಬ್ಯಾಂಕಿನ ಆಡಳಿತ ಮಂಡಳಿಯ 17 ಕ್ಷೇತ್ರಗಳಿದ್ದು, ನಾಲ್ಕು ಕ್ಷೇತ್ರಗಳಿಗೆ ಚುನಾವಣೆ ನಡೆದಿರುವುದಿಲ್ಲ. ಉಳಿದ 13 ಕ್ಷೇತ್ರಗಳಲ್ಲಿ ಯಳಂದೂರು ಕ್ಷೇತ್ರದ ಜಯರಾಮ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಉಳಿದ 12 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಬೆಂಬಲಿತರು 5, ಜೆಡಿಎಸ್ ಬೆಂಬಲಿತರು 3 ಹಾಗೂ ಉಳಿದ ಇನ್ನೆರಡು ಕ್ಷೇತ್ರಗಳಲ್ಲಿ ಅತ್ಯಧಿಕ ಮತಗಳನ್ನು ಪಡೆದು ಗೆದ್ದರೂ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಫಲಿತಾಂಶ ಘೋಷಣೆ ಆಗದ ಹಿನ್ನೆಲೆಯಲ್ಲಿ ವಿಜೇತ ಅಭ್ಯರ್ಥಿಗಳಿಗೆ ವಿಜಯದ ಸಂಭ್ರಮಕ್ಕೆ ಅಡ್ಡಿಯಾಗಿದೆ. ಕೊಳ್ಳೇಗಾಲ- ಹನೂರು ಕ್ಷೇತ್ರದಲ್ಲಿ ಇಬ್ಬರು ಅಭ್ಯರ್ಥಿಗಳು ತಲಾ ಒಂಭತ್ತು ಮತಗಳನ್ನು ಪಡೆದರೆ, ಎಚ್.ಡಿ. ಕೋಟೆಯಲ್ಲೂ ಸಹ ತಲಾ ಎಂಟು ಮತಗಳನ್ನು ಪಡೆ ದಿದ್ದು, ಈ ಕ್ಷೇತ್ರಗಳ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಯಾವುದೇ ಫಲಿತಾಂಶ ಪ್ರಕಟವಾಗಿರುವುದಿಲ್ಲ.

ಕಳೆದ ಒಂದೂವರೆ ವರ್ಷದಿಂದ ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಅವಧಿ ಪೂರ್ಣಗೊಂಡಿದ್ದರೂ ಚುನಾವಣೆ ನಡೆಸದೆ ಆಡಳಿತಾಧಿಕಾರಿಯ ನೇಮಕ ಮಾಡಿ ಹಿಂಬಾಗಿಲ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯುವ ನಿಟ್ಟಿನಲ್ಲಿ ಕಾಂಗ್ರೆಸ್ ಇನ್ನಿಲ್ಲದ ಪ್ರಯತ್ನ ನಡೆಸಿತ್ತು. ಸ್ವತಃ ಆಡಳಿತ ರೂಢ ಸರ್ಕಾರ, ಶಾಸಕರು ಸೇರಿದಂತೆ ಇಡೀ ಕಾಂಗ್ರೆಸ್ ಪಾಳಯವೇ ಚುನಾವಣೆಯ ಗೆಲುವಿಗಾಗಿ ಶತಪ್ರಯತ್ನ ನಡೆಸಿದ್ದರು.

- ಫಲಿಸದ ಕೈ ತಂತ್ರ ರಿಸಲ್ಟ್ ಅತಂತ್ರ ಜಿ.ಡಿ.ಹರೀಶ್ ಗೌಡಗೆ ಜಯ; ಸರ್ಕಾರಕ್ಕೆ ಮುಖಭಂಗ
- ಸಹಕಾರ ಕ್ಷೇತ್ರದಲ್ಲಿ ಸ್ವಯಂ ಸಾಮರ್ಥ್ಯ ಸಾಬೀತು
- ಘಟಾನುಘಟಿ ನಾಯಕರಿಗೆ ಮೌನವಾಗಿಯೇ ಠಕ್ಕರ್
- ಐದು ವರ್ಷಗಳ ಅಭಿವೃದ್ಧಿ ಪರ್ವಕ್ಕೆ ಬೆಂಬಲ ಕೊಟ್ಟ ಮತದಾರರು
- ಏಕಾಂಗಿ ಸಮರ ವೀರನ ಹೋರಾಟಕ್ಕೆ ದಕ್ಕಿದ ಗೌರವ ಸ್ಥಾನಗಳು



## ಸರ್ಕಾರ ವರ್ಸಸ್ ಹರೀಶ್ ಗೌಡ

ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ್ದ ಕಾಂಗ್ರೆಸ್ಸಿಗರು, ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಪ್ರಾಬಲ್ಯ ಸಾಧಿಸಿರುವ ಎಂಸಿಡಿಸಿಸಿ ಬ್ಯಾಂಕಿನ ನಿಕಟ ಪೂರ್ವ ಅಧ್ಯಕ್ಷರು ಹಾಗೂ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರೂ ಆಗಿರುವ ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ. ಹರೀಶ್‌ಗೌಡ ಅವರನ್ನು ಮಣಿಸಲು ತಂತ್ರಗಾರಿಕೆ ನಡೆಸಿದ್ದರು. ಆದರೆ ಕಾಂಗ್ರೆಸ್ಸಿಗರು ನಡೆಸಿದ ಈ ಎಲ್ಲ ಪ್ರಯತ್ನಗಳು ವಿಫಲವಾಗುವ ಮೂಲಕ ಚುನಾವಣೆಯ ಫಲಿತಾಂಶ ಅತಂತ್ರವಾಗಿದೆ.

ಆಡಳಿತರೂಢ ಕಾಂಗ್ರೆಸ್ ಸರ್ಕಾರದ ಜಿಲ್ಲೆಯ ಶಾಸಕರುಗಳು ಜಿ.ಡಿ. ಹರೀಶ್ ಗೌಡ ಅವರನ್ನು ಎಂಸಿಡಿಸಿಸಿ ಬ್ಯಾಂಕಿನ ಅಧಿಕಾರದಿಂದ ದೂರ ಉಳಿಸಲು, ಆಡಳಿತ ಮಂಡಳಿ ಚುನಾವಣೆಯನ್ನು ಮುಂದೂಡಿದ್ದರು. ಈ ಸಂಬಂಧ ನ್ಯಾಯಾಲಯದ ಮೆಟ್ಟಿಲೇರಿದ್ದ ಶಾಸಕ ಜಿ.ಡಿ. ಹರೀಶ್ ಗೌಡ ಅವರು ಕಾನೂನು ಹೋರಾಟದಲ್ಲಿ ಗೆಲುವು ಸಾಧಿಸಿ, ಚುನಾವಣೆ ನಡೆಯುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು.

ಆದರೂ ಹಿಂಬಾಗಿಲಿನಿಂದ ತಮ್ಮ ತಂತ್ರಗಾರಿಕೆ ಮುಂದುವರಿಸಿದ ಸರ್ಕಾರ ಹೊಸದಾಗಿ ನೋಂದಾಣಿಯಾಗಿರುವ ಸಂಘಗಳಿಗೆ ಪ್ರತಿ ಕ್ಷೇತ್ರಕ್ಕೆ ತಲಾ 3–4 ಸಂಘಗಳು ಸೇರಿದಂತೆ ಒಟ್ಟು 32 ಸಂಘಗಳಿಗೆ ಮತದಾನದ ಹಕ್ಕು ನೀಡುವ ಮೂಲಕ ತಮಗೆ ಲಾಭ ಮಾಡಿಕೊಂಡಿತ್ತು. ಪರಿಣಾಮ ಮೈಸೂರಿನಲ್ಲಿ ಕೆಂಚಪ್ಪ ಮತ್ತು ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿ ಅವರು ಒಂದು ಮತಗಳಿಂದ ಗೆದ್ದರೆ, ಕೊಳ್ಳೇಗಾಲದಲ್ಲಿ ನರೇಂದ್ರ ಮತ್ತು ಎಚ್.ಡಿ.ಕೋಟೆಯಲ್ಲಿ ಅನಿಲ್ ಅವರು ಸಮಬಲ ಪಡೆದುಕೊಂಡಿದೆ. ಕೆ.ಆರ್.ನಗರದಲ್ಲಿ ನಾಲ್ಕು ಮತಗಳಿಂದ ಗೆದ್ದಿದೆ. ಇದಲ್ಲದೇ ತಾಲೂಕು ಹಾಗೂ ಜಿಲ್ಲಾ ಮಟ್ಟದ ಮೇಲ್ಪಟ್ಟ ಕ್ಷೇತ್ರ ಮತ್ತು ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ಕ್ಷೇತ್ರಗಳಲ್ಲೂ, ರಾತ್ರೋ ರಾತ್ರಿ ಹೊಸ ಸಂಘಗಳನ್ನು ಸೇರ್ಪಡೆ ಮಾಡಿದ್ದರ ಪರಿಣಾಮ ಬೀರಿದೆ.

## ಗೆಲುವಿನ ವಿಜಯೋತ್ಸವ

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಜೆಡಿಎಸ್ ಮತ್ತು ಬಿಜೆಪಿ ಬೆಂಬಲಿತರು ಜಿ.ಡಿ. ಹರೀಶ್‌ಗೌಡ ಅವರಿಗೆ ಜೈಕಾರ ಕೂಗಿ ಸಂಭ್ರಮಿಸಿದರು. ಉಭಯ ಪಕ್ಷಗಳ ಕಾರ್ಯಕರ್ತರು ಮೈಸೂರಿನ ವಿನೋಬಾ ರಸ್ತೆಯ ನಂಜರಾಜ ಬಹುದ್ದೂರ್ ಕಲ್ಯಾಣ ಮಂಟಪದ ಮತ ಎಣಿಕೆ ಕೇಂದ್ರದಿಂದ ಶಾಸಕ ಜಿ.ಡಿ. ಹರೀಶ್‌ಗೌಡ ಅವರನ್ನು ಹೆಗಲ ಮೇಲೆ ಹೊತ್ತು ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸುವ ಮೂಲಕ ಗೆಲುವಿನ ಸಂಭ್ರಮಾಚರಣೆ ನಡೆಸಿದರು. ಮತ್ತೊಂದೆಡೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್ ಅಭ್ಯರ್ಥಿಗಳ ಬೆಂಬಲಿಗರು ಜೈಕಾರಗಳನ್ನು ಹಾಕಿ ಸಂಭ್ರಮಿಸಿದರು.

## ಗೆದ್ದು ಬೀಗಿದವರು

| | |
|---|---|
| ಹುಣಸೂರು ಕ್ಷೇತ್ರ | : ಶಾಸಕ ಜಿ.ಡಿ.ಹರೀಶ್ ಗೌಡ |
| ಗುಂಡ್ಲುಪೇಟೆ ಕ್ಷೇತ್ರ | : ಶಾಸಕ ಗಣೇಶ್ ಪ್ರಸಾದ್ |
| ಚಾಮರಾಜನಗರ ಕ್ಷೇತ್ರ | : ಶಾಸಕ ಪುಟ್ಟರಂಗಶೆಟ್ಟಿ |
| ಪಿರಿಯಾಪಟ್ಟಣ ಕ್ಷೇತ್ರ | : ಲೋಕೇಶ್ |
| ಕೆ.ಆರ್.ನಗರ ಕ್ಷೇತ್ರ | : ದೊಡ್ಡಸ್ವಾಮೇಗೌಡ |
| ತಿ. ನರಸೀಪುರ ಕ್ಷೇತ್ರ | : ರಾಮೇಗೌಡ |
| ನಂಜನಗೂಡು ಕ್ಷೇತ್ರ | : ಸದಾನಂದ |
| ಮೈಸೂರು ಕ್ಷೇತ್ರ | : ಎಂ. ಕೆಂಚಪ್ಪ |
| ಯಳಂದೂರು ಕ್ಷೇತ್ರ | : ಜಯರಾಮ್(ಅವಿರೋಧ) |

## ಗೆದ್ದರು ಫಲಿತಾಂಶ ಪ್ರಕಟವಾಗಿಲ್ಲ

- ಪಟ್ಟಣ ಸಹಕಾರ ಬ್ಯಾಂಕ್‌ಗಳು ಮತ್ತು ಗೃಹ ನಿರ್ಮಾಣ ಸಹಕಾರ ಸಂಘ ಎಸ್‌ಬಿಎಂ ಮಂಜು
- ತಾಲೂಕು ಹಾಗೂ ಜಿಲ್ಲಾಮಟ್ಟ ಮೇಲ್ಪಟ್ಟ ಸಹಕಾರ ಸಂಘ ಟಿ. ರಾಮೇಗೌಡ

## ಸೋಲುಂಡ ಪ್ರಮುಖರು

ಹಲವಾರು ಬಾರಿ ಡಿಸಿಸಿ ಬ್ಯಾಂಕ್ ಪ್ರವೇಶಿಸಿದ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ. ಬಸವೇಗೌಡ ಮತ್ತು ಎಂಎಲ್‌ಸಿ ಎಚ್. ವಿಶ್ವನಾಥ್ ಪುತ್ರ ಅಮಿತ್ ದೇವರಹಟ್ಟಿ ಅವರು ಸೋಲು ಅನುಭವಿಸಿದ್ದಾರೆ.

## ರಾಜೀವ್, ಚಂದ್ರಶೇಖರ್‌ಗೆ ಹಿನ್ನಡೆ

ಕಾಂಗ್ರೆಸ್ ಮುಖಂಡ, ಮುಡಾದ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಅವರಿಗೆ ಮಾಜಿ ಸಚಿವ ಜಿ.ಟಿ.ದೇವೇಗೌಡರು ಸಾಥ್ ನೀಡಿದ್ದರು ಸಹ ಅವರು ಭಾರೀ ಮತಗಳ ಹಿನ್ನಡೆ ಅನುಭವಿದ್ದಾರೆ. ಅಲ್ಲದೆ ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಳಿ ಅಧ್ಯಕ್ಷ ಚಂದ್ರಶೇಖರ್‌ಗೂ ಹಿನ್ನಡೆಯಾಗಿದೆ.



> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಸಕಾಲದಲ್ಲಿ ಚುನಾವಣೆ ನಡೆಸದೆ ಸಹಕಾರಿ ನಿಯಮಗಳನ್ನೇ ಗಾಳಿಗೆ ತೂರಿ, ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿ ಕೈ ತಂತ್ರ ನಡೆಸಿ, ಬ್ಯಾಂಕಿನ ಚುಕ್ಕಾಣಿ ಹಿಡಿಯಲು ಮುಂದಾಗಿರುವುದು ದುರ್ದೈವದ ಸಂಗತಿಯಾಗಿದೆ. ಇದಕ್ಕೆ ಸಹಕಾರಿಗಳು ಈ ಚುನಾವಣೆಯ ಫಲಿತಾಂಶದ ಮೂಲಕ ತಕ್ಕ ಉತ್ತರ ನೀಡಿದ್ದಾರೆ.
>
> ◀ ಜಿ.ಡಿ.ಹರೀಶ್ ಗೌಡ
> ಶಾಸಕರು ಹಾಗೂ ನಿಕಟಪೂರ್ವ ಅಧ್ಯಕ್ಷ, ಎಂಸಿಡಿಸಿಸಿ ಬ್ಯಾಂಕ್

## ನ್ಯಾಯಾಲಯದ ಸಮರದಲ್ಲಿ ಜಯ

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವಧಿ ಮುಗಿದ ಮೇಲೆ ಚುನಾವಣೆ ನಡೆಸಬೇಕೆಂದು ಬರೀ ಭಾಷಣಕ್ಕಾಗಿ ಸೀಮಿತವಾಗಿದೆಯೇ ಹೊರತು ಅದನ್ನು ಅನುಷ್ಠಾನಕ್ಕೆ ತರುವುದಿಲ್ಲ ಎನ್ನುವುದಕ್ಕೆ ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ಉದಾಹರಣೆಯಾಗಿದೆ. ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸುವಂತೆ ಜಿ.ಡಿ. ಹರೀಶ್ ಗೌಡರು ಸರ್ಕಾರದ ಮೇಲೆ ಒತ್ತಡ ಹೇರಿದ್ದರು.

ಜಿ.ಡಿ. ಹರೀಶ್‌ಗೌಡ ಅವರ ಅವಧಿ 22-11-2023ಕ್ಕೆ ಅಂತ್ಯಗೊಂಡ ಹಿನ್ನೆಲೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಗೆ ರಾಜ್ಯದ ಕಾಂಗ್ರೆಸ್ ಸರ್ಕಾರ ಚುನಾವಣೆ ನಡೆಸುವ ಬದಲಿಗೆ ನಿವೃತ್ತ ಅಧಿಕಾರಿಯನ್ನು ಬ್ಯಾಂಕಿನ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ, ಸಹಕಾರಿ ಕ್ಷೇತ್ರದ ತತ್ವಗಳಿಗೆ ತದ್ವಿರುದ್ಧವಾಗಿ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ ಕುಂಟು ನೆಪವೊಡ್ಡಿ ಚುನಾವಣೆ ಮುಂದೂಡಿತ್ತು. ಸರ್ಕಾರದ ಈ ನಡೆಯನ್ನು ಪ್ರಶ್ನಿಸಿದ ಸಹಕಾರಿಗಳು ಕೋರ್ಟಿನ ಮೆಟ್ಟಿಲೇರಿದ್ದರು. ಇದರ ಪರಿಣಾಮ ಕೋರ್ಟ್ ಚುನಾವಣೆ ನಡೆಸಲು ಸೂಚನೆ ನೀಡಿದರೂ ಸಹ ಇದನ್ನು ಪರಿಗಣಿಸದ ಸರ್ಕಾರ ನ್ಯಾಯಾಲಯಕ್ಕೆ ನೆಪಗಳನ್ನೇ ದಾಖಲೆಯನ್ನಾಗಿ ನೀಡಿ ಚುನಾವಣೆಯನ್ನು ಮುಂದೂಡಿಸಿತ್ತು. ರಾಜ್ಯದ ಎಲ್ಲ ಡಿಸಿಸಿ ಬ್ಯಾಂಕ್‌ಗಳ ಅವಧಿ ಮುಗಿದ ಕೂಡಲೇ ಚುನಾವಣೆ ನಡೆಸಿರುವ ಸರ್ಕಾರ ಮುಖ್ಯಮಂತ್ರಿಗಳ ತವರು ಕ್ಷೇತ್ರದ ವ್ಯಾಪ್ತಿಗೆ ಸೇರಿರುವ ಎಂಸಿಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿಯ ಅವಧಿ ಮುಕ್ತಾಯ ಗೊಂಡು ಒಂದೂವರೆ ವರ್ಷವಾದರೂ ಏಕೆ ಚುನಾವಣೆ ನಡೆಸಿಲ್ಲ ಎಂಬ ಕೂಗು ಹೆಚ್ಚಾಗುತ್ತಿದ್ದಂತೆ ರಾಜ್ಯಸರ್ಕಾರ ಕೊನೆಗೂ ಹೈಕೋರ್ಟ್ ಆದೇಶದಂತೆ ಚುನಾವಣೆ ನಡೆಸಲು ತೀರ್ಮಾನವಾದರೂ ಬೈಲಾದಲ್ಲಿ ಕೆಲವು ಅಂಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಿಕೊಂಡಿದ್ದರಿಂದ ಮತ್ತೆ ನ್ಯಾಯಾಲಯದಲ್ಲಿ ಹೋರಾಟ ಮಾಡುವ ಸನ್ನಿವೇಶ ನಿರ್ಮಾಣವಾಯಿತು.

ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳ ಚುನಾವಣೆಯಲ್ಲಿ ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಿಂದ ಇಬ್ಬರು ಪ್ರತಿನಿಧಿ, ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಿಂದ ಒಬ್ಬರು ಪ್ರತಿನಿಧಿ ಆಯ್ಕೆ ಮಾಡುವ ಕ್ಷೇತ್ರಗಳಿಗೆ ಚುನಾವಣೆ ನಡೆಸಲು ತಡೆಯಾಜ್ಞೆ ಸಿಕ್ಕಿದೆ. ಉಳಿದ ಕ್ಷೇತ್ರಗಳಿಗೆ ನಡೆದ ಚುನಾವಣೆಯು ಒಂದು ರೀತಿಯಲ್ಲಿ ಸಾರ್ವತ್ರಿಕ ಚುನಾವಣೆಯನ್ನು ಮೀರಿಸಿದಂತೆ ಪೈಪೋಟಿ ನಡೆದಿದ್ದು ಸಹಕಾರ ಕ್ಷೇತ್ರದ ವಲಯದಲ್ಲಿ ವ್ಯಾಪಕ ಚರ್ಚೆಗಳನ್ನು ಹುಟ್ಟುಹಾಕುವಂತೆ ಮಾಡಿದೆ.

## ಸಮಬಲದ ಕಾದಾಟ

ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿಗೆ ನಡೆದ ಚುನಾವಣೆ ಜಿದ್ದಾಜಿದ್ದಿನ ಕದನವಾಗಿತ್ತು. ಸರ್ಕಾರ ಹಿಂಬಾಗಿಲಿನಿಂದ ಹೊಸ ಸಂಘಗಳಿಗೆ ಬೈಲಾ ಮತ್ತು ನಿಯಮಗಳನ್ನೆ ಗಾಳಿಗೆ ತೂರಿ ಚುನಾವಣೆಯ ಸಮೀಪದಲ್ಲಿ ಮತ ಹಾಕಲು ಅವಕಾಶ ನೀಡಿದ್ದರಿಂದ ಇದಕ್ಕೆ ಪೂರಕವೆಂಬಂತೆ ಮೈಸೂರಿನಲ್ಲಿ ಕೆಂಚಪ್ಪ, ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿ ತಲಾ ಒಂದೊಂದು ಮತ ಪಡೆದು ಗೆದ್ದರೆ, ಎಚ್.ಡಿ. ಕೋಟೆಯಲ್ಲಿ ಶಾಸಕ ಅನಿಲ್ ಮತ್ತು ಪ್ರಕಾಶ್ ತಲಾ 8 ಮತ ಮತ್ತು ಕೊಳ್ಳೇಗಾಲದಲ್ಲಿ ಮಾಜಿ ಶಾಸಕ ನರೇಂದ್ರ ಮತ್ತು ಮಲ್ಲೇಶ್ ಅವರು ತಲಾ 9 ಮತಗಳ ಸಮಬಲದ ಫಲಿತಾಂಶ ಬಂದಿದೆ.

# ಸಚಿವ ಹೆಚ್.ಸಿ. ಮಹದೇವಪ್ಪರಿಂದ ಹಿಂದೂ ಧಾರ್ಮಿಕ ಭಾವನೆಗೆ ಧಕ್ಕೆ ಆರೋಪ; ಪೊಲೀಸ್ ಆಯುಕ್ತರಿಗೆ ದೂರು


ಹೆಚ್.ಸಿ. ಮಹದೇವಪ್ಪ


ಅರುಣ್‌ಕುಮಾರ್

ಮೈಸೂರು, ಜೂ.27– ಮಲೆ ಮಹದೇಶ್ವರ ಬೆಟ್ಟದ ದೇವಸ್ಥಾನದಲ್ಲಿ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿರುವ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ವಿರುದ್ಧ ಕಾನೂನಿನನ್ವಯ ಕ್ರಮ ಕೈಗೊಳ್ಳಬೇಕು ಎಂದು ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಕಳೆದ ಏಪ್ರಿಲ್ 24ರಂದು ಮಲೆ ಮಹದೇಶ್ವರಬೆಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ವೇಳೆ ದೇವಸ್ಥಾನಕ್ಕೆ ಮುಖ್ಯಮಂತ್ರಿಗಳ ಜೊತೆ ಡಾ.ಹೆಚ್.ಸಿ. ಮಹದೇವಪ್ಪ ತೆರಳಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವರ ತೀರ್ಥ ಸ್ವೀಕರಿಸಿದ ನಂತರ ಡಾ. ಹೆಚ್.ಸಿ. ಮಹದೇವಪ್ಪ ಉದ್ದೇಶಪೂರ್ವಕವಾಗಿ ತೀರ್ಥ ಸ್ವೀಕರಿಸಲು ನಿರಾಕರಿಸುವ ಮೂಲಕ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಮಲೆ ಮಹದೇಶ್ವರರು ಪವಾಡ ಪುರುಷರಾಗಿದ್ದು, ಮಹದೇಶ್ವರಬೆಟ್ಟಕ್ಕೆ ರಾಜ್ಯ ಮಾತ್ರವಲ್ಲದೇ ದೇಶಾದ್ಯಂತ ಲಕ್ಷಾಂತರ ಭಕ್ತರು ಭೇಟಿ ನೀಡಿ ದರ್ಶನ ಪಡೆಯುತ್ತಾರೆ. ಎಲ್ಲರೂ ಮಹದೇಶ್ವರರ ಮೇಲೆ ಭಾವನಾತ್ಮಕ ನಂಬಿಕೆ ಇಟ್ಟುಕೊಂಡಿದ್ದಾರೆ. ತೀರ್ಥ ಸ್ವೀಕರಿಸುವುದನ್ನು ನಿರಾಕರಿಸಿದರೆ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ ಎಂಬುದರ ಬಗ್ಗೆ ತಿಳಿದಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಮಹದೇವಪ್ಪ ಅವರು ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿರುವುದರಿಂದ ಬಿಎನ್‌ಎಸ್ ಸೆಕ್ಷನ್ 299ರಡಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕೆಂದು ಅರುಣ್‌ಕುಮಾರ್ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

# ಮೊದಲು ಸರ್ಕಾರಿ ಕಚೇರಿಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಿ ಬಳಿಕವಷ್ಟೇ ಗ್ರಾಹಕರಿಗೆ ಕಡ್ಡಾಯಗೊಳಿಸಿ



## ಸ್ಮಾರ್ಟ್ ಮೀಟರ್ ಕಡ್ಡಾಯಕ್ಕೆ ಗ್ರಾಹಕರಿಂದ ತೀವ್ರ ವಿರೋಧ


ಮೈಸೂರು ವಿಜಯನಗರ 2ನೇ ಹಂತದ ಸೆಸ್ಕ್ ಕಾರ್ಪೋರೇಟ್ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಸಭೆಯಲ್ಲಿ ಸ್ಮಾರ್ಟ್ ಮೀಟರ್ ಕಡ್ಡಾಯ ವಿರೋಧಿಸಿ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಜಿಲ್ಲಾ ಸಮಿತಿ ಪದಾಧಿಕಾರಿಗಳು ಸೆಸ್ಕ್ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು, ಜೂ. 27(ಆರ್‌ಕೆ)– ಮೊದಲು ಸೆಸ್ಕ್ ಸೇರಿದಂತೆ ಸರ್ಕಾರಿ ಕಚೇರಿಗಳಿಗೆ ಸ್ಮಾರ್ಟ್ ಮೀಟರ್ ಕಡ್ಡಾಯಗೊಳಿಸಿ ಅದರ ಸಾಧಕ–ಬಾಧಕಗಳನ್ನು ನೋಡಿಕೊಂಡು ನಂತರವಷ್ಟೇ ಗ್ರಾಹಕರಿಗೆ ಕಡ್ಡಾಯ ಮಾಡಿ ಎಂದು ವಿದ್ಯುತ್ ಗ್ರಾಹಕರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧಿಕಾರಿಗಳಿಗೆ ತಿಳಿಸಿದ್ದಾರೆ.

2025ರ ಜುಲೈ 1ರಿಂದ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಬಯಸುವವರು ಕಡ್ಡಾಯವಾಗಿ ತಮ್ಮ ಕಟ್ಟಡಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಬೇಕೆಂದು ಸರ್ಕಾರ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಸೆಸ್ಕ್ ಅಧಿಕಾರಿಗಳು ಇಂದು ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಕಾರ್ಪೊರೇಟ್ ಕಚೇರಿ ಸಭಾಂಗಣದಲ್ಲಿ ಇಂದು ಸಭೆ ಕರೆಯಲಾಗಿತ್ತು.

ಸೆಸ್ಕ್ ತಾಂತ್ರಿಕ ನಿರ್ದೇಶಕ ಡಿಜೆ ದಿವಾಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಧಾನ ವ್ಯವಸ್ಥಾಪಕಿ ಶರಣಮ್ಮ, ಚೀಫ್ ಇಂಜಿನಿಯರ್ ಮೃತ್ಯುಂಜಯ, ಪ್ರಧಾನ ವ್ಯವಸ್ಥಾಪಕ (ಐಟಿ ಅಂಡ್ ಐಎಂಎಸ್) ರಾಮಸ್ವಾಮಿ ಹಾಗೂ ಇತರರು ಉಪಸ್ಥಿತರಿದ್ದು, ಜುಲೈ 1ರಿಂದ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಬಯಸುವ ಗ್ರಾಹಕರು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಸಿದ್ಧಪಡಿಸಿರುವ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು.

ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ವಿದ್ಯುತ್ ಗ್ರಾಹಕರು, ಯಾವುದೇ ಒಂದು ಹೊಸ ವ್ಯವಸ್ಥೆ ಜಾರಿಗೆ ತರುವ ಮೊದಲು ಗ್ರಾಹಕರಿಗೆ ಮಾಹಿತಿ ನೀಡಿ, ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿ, ಮನವರಿಕೆ ಮಾಡಿಕೊಟ್ಟ ನಂತರವಷ್ಟೇ ಜಾರಿಗೊಳಿಸಬೇಕು, ಹೊಸ ಸ್ಮಾರ್ಟ್ ಮೀಟರ್ ಈಗಿರುವ ಮೀಟರ್‌ಗಿಂತ ಆಕಾರದಲ್ಲಿ ದೊಡ್ಡದಾಗಿದೆ. ಅಲ್ಲದೇ ಅದರ ಮೂರರಷ್ಟು ಬೆಲೆ ಇದೆ ಎಂದರು.

ಸ್ಮಾರ್ಟ್ ಮೀಟರ್ ಅಳವಡಿಸಿದ ನಂತರ ಅದು ರಾತ್ರೋರಾತ್ರಿ ಕೆಟ್ಟು ಹೋದರೆ ಅಥವಾ ಆರಂಭದಿಂದಲೂ ಚಾಲೂ ಆಗದಿದ್ದರೆ ಅದಕ್ಕೆ ಯಾರು ಜವಾಬ್ದಾರರು? ತಾವು ನಿಗದಿಪಡಿಸಿದ ಕಂಪನಿಯಲ್ಲೇ ಪಾವತಿಸಿ ಖರೀದಿಸಬೇಕೆನ್ನುವುದು ಸರಿಯಲ್ಲ ಎಂದು ಗ್ರಾಹಕರು ತಿಳಿಸಿದರು.

ಮೊದಲು ಸರ್ಕಾರಿ ಕಚೇರಿ, ಸಂಸ್ಥೆಗಳಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸಿ. ಬಳಿಕ ಯಾವುದೇ ತೊಂದರೆ ಇಲ್ಲ, ಅದು ಗ್ರಾಹಕ ಸ್ನೇಹಿಯಾಗಿದೆ ಎಂಬುದು ದೃಢಪಟ್ಟಲ್ಲಿ ಕೈಗಾರಿಕೆಗಳಿಗೆ, ವಾಣಿಜ್ಯ ಸಂಪರ್ಕಗಳಿಗೆ ಕಡ್ಡಾಯ ಮಾಡಿ, ನಂತರ ಗೃಹ ಬಳಕೆ ವಿದ್ಯುತ್ ಗ್ರಾಹಕರಿಗೆ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳುವಂತೆ ಹೇಳುವುದು ಸೂಕ್ತ ಎಂಬ ಅಭಿಪ್ರಾಯ ಕೇಳಿಬಂದಿತು.

ಇದೇ ವೇಳೆ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು, ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದು, ಸ್ಮಾರ್ಟ್ ಮೀಟರ್ ಗಾತ್ರವು, ಹಾಲಿ ಇರುವ ಮೀಟರ್‌ಗಿಂತ ಮೂರು ಪಟ್ಟು ದೊಡ್ಡದಾಗಿರುವುದರಿಂದ ಈಗಾಗಲೇ ನಿರ್ಮಿಸಿರುವ ಕಟ್ಟಡಗಳಿಗೆ ಹಾಲಿ ಮಾಪಕದ ಗಾತ್ರಕ್ಕೆ ಜಾಗ ಬಿಟ್ಟು ಬೋರ್ಡ್ ಅಳವಡಿಸಿರುವುದರಿಂದ ಅಂತಹ ಗ್ರಾಹಕರಿಗೆ ತೊಂದರೆಯಾಗುತ್ತದೆ ಎಂದು ತಿಳಿಸಿದ್ದಾರೆ.

ಈ ಎಲ್ಲಾ ಸಮಸ್ಯೆ ಇರುವುದರಿಂದ ಜುಲೈ ತಿಂಗಳಿನಿಂದ ನೋಂದಾಯಿಸುವ ಅರ್ಜಿದಾರರಿಗೆ ಮಾತ್ರ ಸ್ಮಾರ್ಟ್ ಮೀಟರ್ ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕು ಅಥವಾ ಮೂರು ತಿಂಗಳ ಕಾಲ ಮುಂದೂಡಬೇಕೆಂದು ಸಂಘದ ಅಧ್ಯಕ್ಷ ಹೆಚ್.ಜೆ. ರಾಘವೇಂದ್ರ, ಗೌರವ ಕಾರ್ಯಾಧ್ಯಕ್ಷ ಎಸ್. ಸಿದ್ದೇಶ, ಪದಾಧಿಕಾರಿಗಳಾದ ಎಂ.ಎಸ್. ಮಂಜುನಾಥ್, ಡಿ.ಎಞ. ಶಶಿಧರ, ಬಿ.ಎಂ. ಗಿರೀಶ್‌ಕುಮಾರ್ ಇತರರು ಒತ್ತಾಯಿಸಿದರು.

# ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಅಣ್ಣಾಮಲೈ



ಚೆನ್ನೈ, ಜೂ.27– ತಮಿಳುನಾಡು ಬಿಜೆಪಿಯ ಮಾಜಿ ಅಧ್ಯಕ್ಷ ಹಾಗೂ ಮಾಜಿ ಐಪಿಎಸ್ ಅಧಿಕಾರಿ ಕೆ. ಅಣ್ಣಾಮಲೈ ಅವರನ್ನು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದೆ.

2021ರಲ್ಲಿ ತಮಿಳುನಾಡು ಬಿಜೆಪಿ ಅಧ್ಯಕ್ಷರಾಗಿ ನೇಮಕಗೊಂಡ ಅಣ್ಣಾಮಲೈ ನಾಯಕತ್ವದಲ್ಲಿ, 2019ರ ಲೋಕಸಭೆ ಚುನಾವಣೆಯಲ್ಲಿ ಕೇವಲ 3% ಇದ್ದ ಬಿಜೆಪಿಯ ಮತಗಳಿಕೆ 2024ರಲ್ಲಿ 11%ಕ್ಕೆ ಏರಿಕೆ ಕಂಡಿತು ಇದು ಅವರ ಸಂಘಟನಾ ಸಾಮರ್ಥ್ಯವನ್ನು ಎತ್ತಿ ತೋರಿಸಿದೆ.

ತಮಿಳುನಾಡಿನಲ್ಲಿ ಪಕ್ಷದ ಉಪಸ್ಥಿತಿಯನ್ನು ವಿಸ್ತರಿಸಿದ ಅವರ ಆಕ್ರಮಣಕಾರಿ ರಾಜಕೀಯ ಶೈಲಿ ಮತ್ತು ಜನಪರ ದೃಷ್ಟಿಕೋನವು ಯುವಕರನ್ನು ಬಿಜೆಪಿಯತ್ತ ಆಕರ್ಷಿಸುವಲ್ಲಿ ಕಾರಣವಾಯಿತು. ಅವರು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೀತಿಗಳನ್ನು ಗ್ರಾಮೀಣ ಮಟ್ಟಕ್ಕೆ ಕೊಂಡೊಯ್ದು ಕೀರ್ತಿಗೆ ಪಾತ್ರರಾದರು.


ಅಣ್ಣಾಮಲೈ ಅವರ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಾತ್ರವು 2026ರ ತಮಿಳುನಾಡು ವಿಧಾನಸಭೆ ಚುನಾವಣೆಗೆ ಬಿಜೆಪಿ–ಎಐಎಡಿಎಂಕೆ ಮೈತ್ರಿಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಅಮಿತ್ ಶಾ ಅವರು ಎಐಎಡಿಎಂಕೆ ನೇತೃತ್ವದ ಎನ್‌ಡಿಎ 2026ರಲ್ಲಿ ತಮಿಳುನಾಡಿನಲ್ಲಿ ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಣ್ಣಾಮಲೈ ಅವರ ಸಂಘಟನಾ ಕೌಶಲ್ಯವು ಪಕ್ಷದ ರಾಷ್ಟ್ರೀಯ ಚೌಕಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಶಾ ಒತ್ತಿ ಹೇಳಿದ್ದಾರೆ.

## ಹುಟ್ಟುಹಬ್ಬದ ಶುಭ ಹಾರೈಕೆ



ಮೈಸೂರಿನ ಕುವೆಂಪುನಗರ ಜೋಡಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ನಾಗರಿಕ ವೇದಿಕೆ ವತಿಯಿಂದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯನ್ನು ಆಚರಿಸಲಾಯಿತು. ಇದೇ ವೇಳೆ ಕೆ.ಜಿ.ಕೊಪ್ಪಲು ಮುಖಂಡ ಹಾಗೂ ಉದ್ಯಮಿ ಪಿ.ನಾಗೇಂದ್ರರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಕುಮಾರ್, ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಖಜಾಂಚಿ ಎಲ್.ಚಂದ್ರು, ಚಾಮುಂಡೇಶ್ವರಿ ದೇವಸ್ಥಾನದ ಅಧ್ಯಕ್ಷ ಗಿರೀಶ್.ಡಿ.ಗೌಡ, ಭೈರವ ಗ್ರೂಪ್ ಮಾಲೀಕ ಬಿ.ಮಾದೇವ್, ಬಿ.ಬಂದೀಗೌಡ, ರಾಜಕುಮಾರ್, ದತ್ತು, ಸಿ.ರವಿ, ಚೆಲುವಪ್ಪ, ಎನ್‌ಐ ಶ್ರೀನಿವಾಸ್, ದೇವಪ್ಪ, ಶಿವಲಿಂಗು, ಸಂಬಣ್ಣ ಇನ್ನಿತರರು ಉಪಸ್ಥಿತರಿದ್ದರು.

# ಹಿಂದುಳಿದ ವರ್ಗಗಳ ಆಯೋಗಕ್ಕೆ ವಕೀಲ ಶಿವಣ್ಣಗೌಡ ಸೇರಿ ಐವರ ನಾಮನಿರ್ದೇಶನ


ಶಿವಣ್ಣಗೌಡ

ಬೆಂಗಳೂರು, ಜೂ.27– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಸದಸ್ಯರನ್ನಾಗಿ ಮೈಸೂರಿನ ವಕೀಲ ಶಿವಣ್ಣಗೌಡ ಸೇರಿದಂತೆ ನಾಲ್ವರನ್ನು ನಾಮನಿರ್ದೇಶನ ಮಾಡಲಾಗಿದೆ.

ಮೈಸೂರಿನ ಟಿ.ಕೆ.ಲೇಔಟ್ ನಿವಾಸಿಯಾದ ವಕೀಲ ಶಿವಣ್ಣಗೌಡ ಅವರೊಂದಿಗೆ ಧಾರವಾಡದ ನಿವೃತ್ತ ಪ್ರಾಂಶುಪಾಲ ಡಾ.ಸಿ.ಎಂ.ಕುಂದಗೋಳ, ಕಲಬುರ್ಗಿಯ ವಕೀಲ ಚಂದ್ರಪ್ಪ, ಬೆಂಗಳೂರು ದಕ್ಷಿಣ ಜಿಲ್ಲೆಯ ನಿವೃತ್ತ ಅರಣ್ಯಾಧಿಕಾರಿ ಡಾ.ಜಿ.ಎನ್.ಶ್ರೀಕಂಠಯ್ಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀಮತಿ ಪ್ರತಿಭಾ ಕುಳಾಯಿ ಅವರನ್ನು ನಾಮನಿರ್ದೇಶನ ಮಾಡಿ, ಸರ್ಕಾರ ಇಂದು ಆದೇಶಿಸಿದೆ.

# ಮೈಸೂರು ರೈಲು ನಿಲ್ದಾಣದಲ್ಲಿ 'ಮಾರ್ಗದರ್ಶಕ' ಡಿಜಿಟಲ್ ನೇವಿಗೇಷನ್ ವ್ಯವಸ್ಥೆ ಆರಂಭ



ಮೈಸೂರು, ಜೂ. 27 (ಆರ್‌ಕೆ)– ಪ್ರಯಾಣಿಕರ ಅನುಕೂಲಕ್ಕಾಗಿ ನೈರುತ್ಯ ರೈಲ್ವೆಯು ಮೈಸೂರು ರೈಲು ನಿಲ್ದಾಣದಲ್ಲಿ 'ಮಾರ್ಗದರ್ಶಕ' ಸ್ಮಾರ್ಟ್ ಡಿಜಿಟಲ್ ನೇವಿಗೇಷನ್ ವ್ಯವಸ್ಥೆ ಆರಂಭಿಸಿದೆ.

ಪ್ರಯಾಣಿಕ ಸ್ನೇಹಿ ಈ ವ್ಯವಸ್ಥೆಯನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಶುಕ್ರವಾರ ಉದ್ಘಾಟಿಸಿದರು. ಸ್ಮಾರ್ಟ್ ನಿಲ್ದಾಣ ಯೋಜನೆ ಭಾಗವಾಗಿ ರೈಲು ನಿಲ್ದಾಣದಲ್ಲಿ ಕ್ಯೂಆರ್ ಕೋಡ್ ಆಧಾರಿತ ಡಿಜಿಟಲ್ ನಕ್ಷೆ ಹಾಗೂ ನೇವಿಗೇಷನ್ ಸೌಲಭ್ಯವು ಆಧುನಿಕ ಮತ್ತು ಬಳಕೆದಾರ ಸ್ನೇಹಿಯಾಗಿದೆ. ಗೂಗಲ್ ಮ್ಯಾಪ್ ಬಳಸುವಂತೆ ಪ್ರಯಾಣಿಕರು ಸುಲಭವಾಗಿ ರೈಲು ನಿಲ್ದಾಣದ ಒಳಾಂಗಣದಲ್ಲಿ ಸಂಚರಿಸಬಹುದಾಗಿದೆ.

ಈ ಸೌಲಭ್ಯ ದಿನದ 24 ಗಂಟೆಯೂ ಲಭ್ಯವಿದ್ದು, ಮಾಹಿತಿಗಾಗಿ ಯಾರನ್ನೂ ಕೇಳುವ ಅಗತ್ಯವಿಲ್ಲ. ನೀವಿರುವ ಸ್ಥಳದಿಂದ ಫ್ಲಾಟ್ ಫಾರಂಗಳು, ಮೆಟ್ಟಿಲುಗಳು, ಕುಡಿಯುವ ನೀರಿನ ಕೇಂದ್ರ, ಶೌಚಾಲಯ, ಆಹಾರ ಮಳಿಗೆಗಳಿಗೆ ಹೋಗಲು ಮಾರ್ಗವನ್ನು ತಿಳಿಸುತ್ತದೆ. ನೀವು ಬಯಸುವ ಭಾಷೆಯಲ್ಲಿ ನಿಲ್ದಾಣದಾದ್ಯಂತ ಇರಿಸಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ನಿಮ್ಮ ಮೊಬೈಲ್‌ನಲ್ಲೇ ನಕ್ಷೆ ನೋಡಬಹುದು.

# ಜೂ.30, ಪುರಾಣಿಕ್ ಶ್ರದ್ಧಾಂಜಲಿ ಸಭೆ

ಮೈಸೂರು, ಜೂ.27(ಆರ್‌ಕೆ)– ಗುರುವಾರ ನಿಧನರಾದ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ನಿರ್ದೇಶಕ ರಘುವೀರ ಪುರಾಣಿಕ್ ಅವರ ಶ್ರದ್ಧಾಂಜಲಿ ಸಭೆಯನ್ನು ಜೂ.30(ಸೋಮವಾರ)ರಂದು ಬೆಳಗ್ಗೆ 11 ಗಂಟೆಗೆ ಕೃಷ್ಣಮೂರ್ತಿಪುರಂನ ಸಂಘದ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಪದಾಧಿಕಾರಿಗಳು, ಹೋಟೆಲ್ ಮಾಲೀಕರು ಭಾಗವಹಿಸಿ ಅಗಲಿದ ಹಿರಿಯರಿಗೆ ಶ್ರದ್ಧಾಂಜಲಿ ಸಲ್ಲಿಸುವಂತೆ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ ಅವರು ತಿಳಿಸಿದ್ದಾರೆ.


# ನಿಧನ

## ರಘುವೀರ್ ಪುರಾಣಿಕ್



ಮೈಸೂರು, ಜೂ. 27 – ಮೈಸೂರಿನ ವಿಷ್ಣುಪ್ರಿಯ ಹೋಟೆಲ್ ಮಾಲೀಕರು, ಮೈಸೂರು ಹೋಟೇಲ್ ಮಾಲೀಕರ ಪತ್ತಿನ ಸಹಕಾರ ಸೊಸೈಟಿ ನಿರ್ದೇಶಕರು ಆದ ಸಿದ್ಧಾರ್ಥ ನಗರದ ನಿವಾಸಿ ರಘುವೀರ್ ಪುರಾಣಿಕ್ (74) ಗುರುವಾರ ನಿಧನರಾದರು. ಮೃತರು ಪತ್ನಿ ಮಲ್ಲಿಕಾ ಪುರಾಣಿಕ್, ಪುತ್ರ ರೂಪೇಶ್, ಪುತ್ರಿ ರಕ್ಷಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**28.06.2025 ಶನಿವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025**
**ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,**
**ತಿಥಿ: ತದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಸಾಧಕ ಮಹಿಳೆಯರಿಗೆ ಪದ್ಮಭೂಷಣ ಯಶೋಧರಮ್ಮ ದಾಸಪ್ಪ ಪ್ರಶಸ್ತಿ ಹಾಗೂ ಸಾಧಕ ಕೃಷಿ ವಿಜ್ಞಾನಿಗಳಿಗೆ, ಕೃಷಿ ಸಾಧಕರಿಗೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕೃಷಿ ಸಚಿವ ಚೆಲುವರಾಯಸ್ವಾಮಿ, ಸಾನ್ನಿಧ್ಯ : ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಶ್ರೀ ಸಿದ್ದರಾಮ ಚೈತನ್ಯ ಸ್ವಾಮೀಜಿ, ಅಧ್ಯಕ್ಷತೆ: ವೇದಿಕೆ ರಾಜ್ಯಾಧ್ಯಕ್ಷ ಶ್ರೀಮತಿ ಹೆಚ್.ಎಲ್. ಯಮುನಾ, ಶಿಕ್ಷಣ ತಜ್ಞ ರಘು ಆರ್. ಕೌಟಿಲ್ಯ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳು : ಶಾಸಕ ಕೆ.ಹರೀಶ್‌ಗೌಡ, ಶ್ರೀಧರ್ ರಾಜ್ ಅರಸು, ಡಾ. ಎಸ್.ಪಿ. ಯೋಗಣ್ಣ, ಹೆಚ್.ಎಲ್. ವಸಂತಕುಮಾರ್, ಎಂ. ನಂದೀಶ್, ಮಡ್ಡೀಕೆರೆ ಗೋಪಾಲ್, ರಾಮಕೃಷ್ಣೇಗೌಡ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ಪ್ರತಿಭಾ ಪುರಸ್ಕಾರ, ಅಧ್ಯಕ್ಷತೆ : ಪ್ರೌಢಶಾಲೆ ಮುಖ್ಯ ಶಿಕ್ಷಕ ರಾಜಶೇಖರ ಶೆಟ್ಟಿ, ಅಭಿನಂದನಾ ಭಾಷಣ : ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಪ್ರತಿಭಾ ಪುರಸ್ಕಾರ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಸಿದ್ದರಾಮಯ್ಯ, ಉಪಸ್ಥಿತರು : ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಶಕ್ತಿನಗರ, ಬೆಳಗ್ಗೆ 9.30ಕ್ಕೆ

■ **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಮಕ್ಕಳಿಗಾಗಿ ಸ್ವರ್ಣಪ್ರಾಶನ ಕಾರ್ಯಕ್ರಮ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 9.30 ರಿಂದ.

■ **ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ :** ಟರ್ನಿಂಗ್ ಪೇಜಸ್ ಅಂಡ್ ಬಿಯಾಂಡ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು : ವಿಶ್ರಾಂತ ಕುಲಪತಿ ಡಾ. ಬಿ.ಜಿ. ಸಂಗಮೇಶ್ವರ, ಅಧ್ಯಕ್ಷತೆ : ಇನ್‌ಫಾರ್ಮೆಟಿಕ್ಸ್ ಇಂಡಿಯಾ ಲಿಮಿಟೆಡ್ ಅಧ್ಯಕ್ಷ ಎನ್.ವಿ. ಸತ್ಯನಾರಾಯಣ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ, ದಕ್ಷಿಣಾಮೂರ್ತಿ ಹೋಮ, ಸ್ಥಳ: ಚಾರಿಟಬಲ್ ಟ್ರಸ್ಟ್ ಆವರಣ, ವಾಣಿ ವಿಲಾಸ ಮೊಹಲ್ಲಾ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಧಾರವಾಡ ಐಐಐಟಿ ನಿರ್ದೇಶಕ ಡಾ. ಮಹದೇವಪ್ರಸಾದ್, ಐಐಎಸ್‌ಸಿ ಪ್ರಾಧ್ಯಾಪಕ ಡಾ. ಗೋಪಾಲನ್ ಜಗದೀಶ್, ಅಧ್ಯಕ್ಷತೆ : ಎಟಿಎಂಇ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಎಲ್. ಅರುಣ್‌ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಸ್ನಾತಕೋತ್ತರ ವಿದ್ಯಾರ್ಥಿಗಳ ವೇದಿಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ. ಶೆಣೈ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶೀಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಆಸ್ಪತ್ರೆ:** ವಿಶ್ವ ರಕ್ತದಾನಿಗಳ ದಿನಾಚರಣೆ, ಮುಖ್ಯ ಅತಿಥಿಗಳು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ, ಅತಿಥಿಗಳು : ಜೆಎಸ್‌ಎಸ್ ಯೂನಿವರ್ಸಿಟಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ಅಧ್ಯಕ್ಷತೆ : ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ. ಸಿ.ಪಿ. ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಎಂ.ಜಿ. ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯೋತ್ಸವ, ಉದ್ಘಾಟನೆ : ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷ ಡಾ. ಸಿ.ರೇಣುಕಾಂಬ, ಉಪಸ್ಥಿತರು : ಡಾ. ಪುರುಷೋತ್ತಮ್, ಆಯೂಬ್ ಖಾನ್, ಕೆ.ಪಿ. ನಾಗರಾಜು, ಎಸ್. ಬಾಲಕೃಷ್ಣ, ನಾಲಾಬೀದಿ ರವಿ, ಸ್ಥಳ: ಸ್ವಾತಂತ್ರ್ಯ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ಡಾ. ಯತೀಂದ್ರ ಸಿದ್ದರಾಮಯ್ಯ ಹುಟ್ಟುಹಬ್ಬದ ಅಂಗವಾಗಿ ಸಹಪಂಕ್ತಿ ಭೋಜನಾ, ಮಕ್ಕಳಿಗೆ ಶಾಲಾ ಬ್ಯಾಗ್ ವಿತರಣೆ, ಉಪಸ್ಥಿತರು : ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ, ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಪ್ರೊ. ಕೆ.ಎಸ್. ಭಗವಾನ್, ಜನಾರ್ಧನ್, ಡಾ.ಬಿ.ಜೆ. ವಿಜಯಕುಮಾರ್, ಶಾಸಕ ಕೆ. ಹರೀಶ್‌ಗೌಡ, ಸ್ಥಳ: ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಮಧ್ಯಾಹ್ನ 12ಕ್ಕೆ.

■ **ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು :** ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರ ಕಥೆಗಳ ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಡಾ. ಪ್ರಭು ಬಿಸ್ಲಹಳ್ಳಿ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳು : ಪ್ರೊ. ಎಸ್. ಚಂದ್ರಕಿರಣ್ ಕುಳವಾಡಿ, ಸ್ಥಳ: ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು ಆವರಣ, ಮಧ್ಯಾಹ್ನ 12ಕ್ಕೆ.

■ **ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ :** ಜಗನ್ನಾಥ, ಬಾಲಭದ್ರ, ದೇವಿ ಸುಭದ್ರ, ಸುದರ್ಶನ ಮತ್ತು ಚಕ್ರರಾಜ ರಥಯಾತ್ರೆ, ಶ್ರೀ ಗುಂಡಿಚಾ ಜಾತ್ರಾ, ಸ್ಥಳ: ವಿದ್ಯಾರಣ್ಯಪುರಂ ಸೆಂಟ್ರಲ್ ಲೈಬ್ರರಿ ಪಾರ್ಕ್, ಮಧ್ಯಾಹ್ನ 2 ರಿಂದ.

■ **ಸುಯೋಗ್ ಆಸ್ಪತ್ರೆ :** ಲಿವರ್ ಮತ್ತು ಪ್ರತಿರೋಪಣಾ ಕ್ಲಿನಿಕ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಎಚ್.ಡಿ. ರಂಗನಾಥ್, ಡಾ. ಜತೀಂದರ್ ಅರೋರಾ, ಅಧ್ಯಕ್ಷತೆ : ಡಾ. ಎಸ್.ಪಿ. ಯೋಗಣ್ಣ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಸಿ. ಅಪ್ಪಾಜಿಗೌಡ, ಶ್ರೀಮತಿ ಸುಧಾ ಯೋಗಣ್ಣ, ಎ.ಜಿ. ಸುಧೀರ್, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 886, ಕಥೆ ಹೇಳುವವರು: ಶ್ರೀಮತಿ ಸುನೀತ ಬೆಟ್ಕೆರೂರ್, ನಿವೃತ್ತ ಶಿಕ್ಷಕರು ಹಾಗೂ ಸಂದರ್ಶಕ ಶಿಕ್ಷಕರು, ವನಿತಾ ಸದನ, ಮೈಸೂರು. ಸ್ಥಳ: ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ರಾಗಾ ಸಂಗೀತ ಅಕಾಡೆಮಿ :** 103ನೇ ಸಂಗೀತ ಕಾರ್ಯಕ್ರಮ, ವಿದ್ವಾನ್ ಅಮಿತ್ ನಾಡಿಗ್ ಅವರಿಂದ ಕೊಳಲು ವಾದನ, ವಿದ್ವಾನ್ ಕೇಶವ್ ಮೋಹನ್‌ಕುಮಾರ್–ವಯೋಲಿನ್, ವಿದ್ವಾನ್ ಅನಿರುದ್ಧ್ ಭಟ್–ಮೃದಂಗ, ವಿದ್ವಾನ್ ಆರ್. ಕಾರ್ತಿಕ್–ಖಂಜೀರಾ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣ ಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷದ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ :** 33ನೇ ವರ್ಷದ ಜಾತ್ರಾ ಮಹೋತ್ಸವ, ಅಮ್ಮನವರ ಜೋಡಿ ಹೂವಿನ ಕರಗ ಮಹೋತ್ಸವ, ಸಂಜೆ 6 ಗಂಟೆಗೆ ಕೊತ್ವಾಲ್ ರಾಮಯ್ಯ ಬೀದಿ ರಾಮಮಂದಿರದಿಂದ ಅಮ್ಮನವರ ಕರಗಕ್ಕೆ ಶ್ರೀ ವಿದ್ಯಾಶಂಕರಾನಂದ ಸರಸ್ವತಿ ಗುರೂಜಿಯವರಿಂದ ಪುಷ್ಪಾರ್ಚನೆ ಮೂಲಕ ಕರಗ ಉತ್ಸವಕ್ಕೆ ಚಾಲನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ, ಕೊತ್ವಾಲ್ ರಾಮಯ್ಯ ರಸ್ತೆ.

■ **ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ :** ಪದಗ್ರಹಣ ಸಮಾರಂಭ, ಪದವಿ ಪ್ರಧಾನ : ಮೇಜರ್ ಡೋನರ್ ರೋ. ಹೆಚ್.ಆರ್. ಕೇಶವ್, ಪದವಿ ಸ್ವೀಕಾರ : ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ತಂಡದ ಅಧ್ಯಕ್ಷ ರೋ. ಎನ್.ಎಸ್. ಮಹದೇವಸ್ವಾಮಿ, ಮುಖ್ಯ ಅತಿಥಿಗಳು : ಪಿ.ಕೆ. ರಾಮಕೃಷ್ಣ, ಡಾ. ರಾಘವೇಂದ್ರ ಪ್ರಸಾದ್, ಕೆ.ಎಸ್. ಕುಮಾರ್, ಸ್ಥಳ: ಹೋಟೆಲ್ ಪ್ರೆಸಿಡೆಂಟ್, ಸಂಜೆ 6.30ಕ್ಕೆ


■ **ಕಲ್ಪವೃಕ್ಷ ಟ್ರಸ್ಟ್ :** ಅಂತರಂಗ ಬಹಿರಂಗ ತಂಡದಿಂದ ಪೊಲಿಯರ್ ವಿರಚಿತ ಹಾಸ್ಯ ನಾಟಕ ಅನುಮಾನದ ಅವಾಂತರ, ನಿರ್ದೇಶನ : ಎಸ್. ವಿಕಾಸ್, ಅನುವಾದ : ಎಂ. ರಾಮರಾವ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ –ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ಭಟ್, ಮತ್ತೂರು ಕುಮಾರ ಸ್ವಾಮಿ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 9.05 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಧುರೈ ಜಿ.ಎಸ್. ಮಣಿ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಗೀತೆಗಳು, 3.30 ಮಕ್ಕಳ ಮಂಟಪ ಕೇತುಪುರ ಸರ್ಕಾರಿ ಪ್ರೌಢಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ಪ್ರಹಸನ ಅಪ್ಪಣೆ ಮಹಾಪ್ರಭು, ನಿರ್ದೇಶನ–ಶಂಕರ್ ಎಸ್. ಭಟ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಕೆ.ಆರ್.ಪೇಟೆ ತಾಲೂಕು ಕಾಳೇಗೌಡನ ಕೊಪ್ಪಲು ಗ್ರಾಮದ ಕೃಷಿಕ ದಂಪತಿ ಬಿ.ವಿ.ವಜ್ರೇಶ್ ಮತ್ತು ಎಂ. ತೇಜಸ್ವಿನಿ, ಪ್ರಸ್ತುತಿ: ಎನ್. ಕೇಶವ ಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ –ಹಿಮಾಂಶು ವಿಶ್ವರೂಪ್ – ವೈಯೋಲಿನ್ ವಾದನ




# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 28 ಶನಿವಾರ 2025

46

ಸಂಪುಟ: 46 | ಸಂಚಿಕೆ: 72 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*


₹4




## ಡಿ.ಕೆ.ಶಿವಕುಮಾರ್ ನಾಡಪ್ರಭುವಾಗಲಿ!

### ನಿಶ್ಚಲಾನಂದ ಸ್ವಾಮೀಜಿ ಹಾರೈಕೆ

ಬೆಂಗಳೂರು, ಜೂ.27– ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಭಾರಿ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೇ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ನಿಶ್ಚಲಾನಂದ ಸ್ವಾಮೀಜಿ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಾಡಪ್ರಭುವಾಗಲಿ ಎಂದು ಹಾರೈಸುವ ಮೂಲಕ ಡಿಕೆಶಿ ಮುಂದಿನ ಮುಖ್ಯಮಂತ್ರಿಯಾಗಬೇಕೆಂದು ಪರೋಕ್ಷವಾಗಿ ನುಡಿದಿದ್ದಾರೆ



ಇಂದು ಡಾ. ಬಾಬು ಜಗಜೀವನ ರಾಂ ಭವನದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಸ್ವಾಮೀಜಿ, ಡಿ.ಕೆ. ಶಿವಕುಮಾರ್ ನಾಡಪ್ರಭುವಾಗಲಿ ಎಂಬುದು ನಮ್ಮೆಲ್ಲರ ಆಶಯ. ರಾಜ್ಯವನ್ನು ಮುನ್ನಡೆಸುವ ಶಕ್ತಿ ಡಿ.ಕೆ.ಶಿವಕುಮಾರ್ ಅವರಿಗೆ ಸಿಗಲಿ. ಡಿ.ಕೆ.ಶಿವಕುಮಾರ್ ಅವರು ಛಲ ಬಿಡದೇ ಯಾವುದೇ ಕೆಲಸವನ್ನು ಮಾಡಿ ತೋರಿಸುವಂತಹವರು. ಅಂತಹ ನಾಯಕ ನಾಡಪ್ರಭುವಾಗಲಿ ಎಂಬುದು ನಮ್ಮೆಲ್ಲರ ಆಶಯ ಎಂದರು.




# ಮೊದಲ ಆಷಾಢ ಶುಕ್ರವಾರ: ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ




ಆಷಾಢ ಮಾಸದ ಮೊದಲ ಶುಕ್ರವಾರದ ಪೂಜಾ ಮಹೋತ್ಸವದಲ್ಲಿ ಅಪಾರ ಭಕ್ತ ಗಣ.

- ತರಹೇವಾರಿ ಹೂವುಗಳಿಂದ ಅಲಂಕಾರ; ಕಂಗೊಳಿಸಿದ ದೇವಾಲಯ
- ಸರದಿ ಸಾಲಲ್ಲಿ ನಿಂತು ದೇವಿ ದರ್ಶನ
- ಮುತ್ತೈದೆಯರಿಗೆ ಮಡಿಲಕ್ಕಿ ವಿತರಣೆ

ಮೈಸೂರು, ಜೂ.27(ಎಂಟಿವೈ)– ಶಕ್ತಿದೇವತೆಯ ಆರಾಧನೆಯ ಆಷಾಢ ಮಾಸದ ಮೊದಲ ಶುಕ್ರವಾರ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆ ಭಕ್ತರು ದೇವಿ ದರ್ಶನ ಪಡೆದು, ಸಂಭ್ರಮಿಸಿದರು. ರಾಜ್ಯದ ವಿವಿಧೆಡೆಯಿಂದ ಮುಂಜಾನೆಯೇ ಆಗಮಿಸಿದ್ದ ಭಕ್ತರು, ಲಲಿತಮಹಲ್ ಪ್ಯಾಲೇಸ್ ಮೈದಾನದ ಪಾರ್ಕಿಂಗ್‌ನಲ್ಲಿ ತಮ್ಮ ವಾಹನ ನಿಲ್ಲಿಸಿ, ಸಾರಿಗೆ ಬಸ್‌ನಲ್ಲಿ ಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆದು, ಪುಳಕಿತರಾದರು.

**ತುಂತುರು ಮಳೆಯಲ್ಲಿ ಮಿಂದೆದ್ದ ಭಕ್ತರ ದಂಡು:** ಕೊರೆಯುವ ಚಳಿ, ಮಂಜು ಮುಸುಕಿದ ವಾತಾವರಣ, ತುಂತುರು ಮಳೆ ನಡುವೆಯೂ ಭಕ್ತರು ದೇವಿ ದರ್ಶನಕ್ಕಾಗಿ ಕಾತುರರಾದರು. ಕೆಲವರು ಕಳೆದ ರಾತ್ರಿಯೇ ಚಾಮುಂಡಿಬೆಟ್ಟಕ್ಕೆ ಆಗಮಿಸಿ ▸ 6ನೇ ಪುಟಕ್ಕೆ

### ಲಕ್ಷ್ಮೀ ಅಲಂಕಾರದಲ್ಲಿ ಕಂಗೊಳಿಸಿದ ನಾಡದೇವಿ

ಮೊದಲ ಆಷಾಢ ಶುಕ್ರವಾರದಲ್ಲಿ ಚಾಮುಂಡೇಶ್ವರಿಗೆ ಲಕ್ಷ್ಮೀ ಅಲಂಕಾರ ಮಾಡಲಾಗಿತ್ತು. ಸ್ವರ್ಣ ಬಣ್ಣದ ರೇಷ್ಮೆ ಸೀರೆ, ಆಭರಣಗಳ ಅಲಂಕಾರದಲ್ಲಿ ದೇವಿ ಕಂಗೊಳಿಸಿದಳು. ಅಲ್ಲದೆ ದೇವಾಲಯದ ಪ್ರಾಂಗಣದಲ್ಲಿ ಹೂವಿನ ಲೋಕವನ್ನು ಸೃಷ್ಟಿಸಲಾಗಿತ್ತು. ಮುಖ್ಯದ್ವಾರದಲ್ಲಿ ಹೂವಿನಿಂದಲೇ 'ಸುಸ್ವಾಗತ' ಆಕರ್ಷಕ ಅಲಂಕಾರ ಮಾಡಲಾಗಿತ್ತು. ನಂತರ ವಿವಿಧ ಬಣ್ಣದ ಹೂವುಗಳಿಂದ ದೇವಾಲಯ ಅಲಂಕಾರ ಭಕ್ತರ ಮನಸೂರೆಗೊಂಡಿತು. ಗರುಡ ಕಂಬದ ಬಳಿ ಗಂಡಭೇರುಂಡ ರಾಜಲಾಂಛನವನ್ನು ಹೂವಿನಿಂದಲೇ ಮೂಡಿಸಲಾಗಿತ್ತು. ಗರ್ಭಗುಡಿಯ ಪ್ರಾಂಗಣ ಬಾಗಿಲ ಮೇಲೆ 'ಅಮ್ಮ' ಎಂದು ಹೂವಿನಿಂದಲೇ ರೂಪಿಸಲಾಗಿತ್ತು.

# ಶಾಸಕರಿಗೆ ತಲಾ 50 ಕೋಟಿ!

- ಇಂತಹದ್ದೆ ಕಾಮಗಾರಿಗೆ ಬಳಸುವಂತೆ ಮಾರ್ಗಸೂಚಿ
- ಬಿಜೆಪಿ–ಜೆಡಿಎಸ್ ಶಾಸಕರಿಗೆ ಕಡಿಮೆ 'ಪ್ರಸಾದ'

ಬೆಂಗಳೂರು, ಜೂ.27(ಕೆಎಂಶಿ)– ಕಾಂಗ್ರೆಸ್ ಶಾಸಕರು ಆಡಳಿತಶಾಹಿ ವಿರುದ್ಧ ತಿರುಗಿಬಿದ್ದ ಹಿನ್ನೆಲೆಯಲ್ಲಿ ಪ್ರತೀ ವಿಧಾನಸಭಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ತಲಾ 50 ಕೋಟಿ ರೂ.ಗಳನ್ನು ಹಣಕಾಸು ಇಲಾಖೆ ಬಿಡುಗಡೆಗೊಳಿಸಿದೆ.

ಆಡಳಿತ ಪಕ್ಷದ ಸದಸ್ಯರಿಗೆ ಈ ಮೊತ್ತ ದೊರೆತಿದ್ದು, ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಶಾಸಕರಿಗೆ ಅನುದಾನ ನೀಡಿಕೆ ಪ್ರಮಾಣ ಕಡಿಮೆ ಮಾಡಿದೆ.

ಶಾಸಕರು, ಸಚಿವರ ಮುಂದೆ ಅರ್ಜಿ ಸಲ್ಲಿಸಿ ಹಣ ಬಿಡುಗಡೆ ಮಾಡಿಸಿಕೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇರವಾಗಿ ಶಾಸಕರ ನಿಧಿಗೆ ಹಣ ಸಂದಾಯ ಮಾಡಿಸಿದ್ದಾರೆ.

ಅಭಿವೃದ್ಧಿ ವಿಚಾರದಲ್ಲಿ ಸಚಿವರುಗಳ ವಿರುದ್ಧವೇ ಶಾಸಕರು ಆರೋಪ ಮಾಡಿದ ಹಿನ್ನೆಲೆಯಲ್ಲಿ ಎಚ್ಚೆತ್ತ ಮುಖ್ಯಮಂತ್ರಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ಹಣ ಯಾವ ರೀತಿ ವೆಚ್ಚವಾಗಬೇಕೆಂಬುದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ, ಶಾಸಕರಿಗೆ ಮಾಹಿತಿ ನೀಡಿದ್ದು, ಈ ನಿಯಮದಡಿಯೇ ವೆಚ್ಚ ಮಾಡಬೇಕಿದೆ.

ಬಿಡುಗಡೆಯಾದ ಹಣದಲ್ಲಿ ಶೇಕಡ 50ರಷ್ಟನ್ನು ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೂ, ಶೇಕಡ 25ರಷ್ಟನ್ನು ಪಂಚಾಯತ್ ಇಲಾಖಾ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ವ್ಯಯ ಮಾಡಬೇಕು. ಉಳಿದ ಶೇಕಡ 25ರಷ್ಟು ಹಣವನ್ನು ಕ್ಷೇತ್ರದಲ್ಲಿ ಶಾಸಕರ ಶಿಫಾರಸಿನ ಕಾಮಗಾರಿಗಳಿಗೆ ವಿನಿಯೋಗಿಸಬಹುದಾಗಿದೆ. ಶಾಸಕರ ಶಿಫಾರಸಿನ ಮೇರೆಗೆ ಸಂಬಂಧಪಟ್ಟ ಇಲಾಖೆಗಳು ಕಾಮಗಾರಿ ಕೈಗೊಳ್ಳಬೇಕು. ಅಭಿವೃದ್ಧಿ ಕೈಗೊಳ್ಳುವ ಮುನ್ನ ಜಿಲ್ಲಾಧಿಕಾರಿಗಳ ಅನುಮತಿ ಕಡ್ಡಾಯ.

ನಗರಪಾಲಿಕೆಗಳ ವ್ಯಾಪ್ತಿಯ ಶಾಸಕರಿಗೆ ಹಣ ಬಿಡುಗಡೆ ಸಂಬಂಧ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ. ಆದರೆ, ಗ್ರಾಮೀಣ ಭಾಗದ ಸದಸ್ಯರಿಗೆ ಹಣ ಬಿಡುಗಡೆ ಜೊತೆಗೆ ವೆಚ್ಚದ ಮಾರ್ಗಸೂಚಿಗಳನ್ನೂ ▸ 6ನೇ ಪುಟಕ್ಕೆ

### ಸೋಮವಾರ ಕೆಆರ್‌ಎಸ್, ಕಬಿನಿಗೆ ಸಿಎಂ ಸಿದ್ದರಾಮಯ್ಯ ಬಾಗಿನ ಅರ್ಪಣೆ



ಬೆಂಗಳೂರು, ಜೂ.27(ಕೆಎಂಶಿ)– ಕೃಷ್ಣರಾಜ ಸಾಗರ ಅಣೆಕಟ್ಟೆ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ (ಜೂ.30) ಜಲಾಶಯಕ್ಕೆ ಬಾಗಿನ ಅರ್ಪಣೆ ಮಾಡಲಿದ್ದಾರೆ. ಜಲಸಂಪನ್ಮೂಲ ಖಾತೆ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಂದು ಬೆಳಗ್ಗೆ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಕೆಆರ್‌ಎಸ್ ಅಣೆಕಟ್ಟೆಗೆ ಬಾಗಿನ ಅರ್ಪಿಸಿದ ನಂತರ ಕಬಿನಿ ಜಲಾಶಯದಲ್ಲೂ ಪೂಜೆ ಸಲ್ಲಿಸಲಿದ್ದಾರೆ. ಎಂಭತ್ತೈದು ವರ್ಷಗಳ ನಂತರ ಕೆಆರ್‌ಎಸ್ ಅಣೆಕಟ್ಟೆ ಜೂನ್ ತಿಂಗಳಲ್ಲೇ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ಬಾಗಿನ ಅರ್ಪಿಸುತ್ತಿದ್ದಾರೆ.

## ಹುಲಿಗಳ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ

### ವಿಷ ಪ್ರಾಶನ ಸಂಬಂಧ ಇಬ್ಬರು ವಶಕ್ಕೆ

ಹನೂರು, ಜೂ.27(ಎಂಟಿವೈ)– ಮಲೆಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದಲ್ಲಿ ಐದು ಹುಲಿಗಳ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಖಡಕ್ಕಾಗಿ ಹೇಳಿದ್ದಾರೆ.



ಈ ಮಧ್ಯೆ ಹುಲಿಗಳಿಗೆ ವಿಷ ಪ್ರಾಶನ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಹುಲಿಗಳು ಮೃತಪಟ್ಟ ಸ್ಥಳಕ್ಕೆ ಶುಕ್ರವಾರ ಬೆಳಗ್ಗೆ ಭೇಟಿ ನೀಡಿ, ಮಾಹಿತಿ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಐದು ಹುಲಿಗಳು ಒಂದೇ ಸ್ಥಳದಲ್ಲಿ ಮೃತಪಟ್ಟಿರುವುದು ತೀವ್ರ ನೋವು ತಂದಿದೆ. ವನ್ಯಜೀವಿ ಲೋಕಕ್ಕೆ ಅಪಾರ ನಷ್ಟವಾಗಿದೆ. ತನಿಖಾಧಿಕಾರಿಗಳು, ತಜ್ಞರು ಹುಲಿಗಳ ಸಾವಿಗೆ ವಿಷ ಪ್ರಾಶನವೇ ಕಾರಣ ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಇದೊಂದು ಅಪರಾಧವಾಗಿದ್ದು, ಈ ಕುಕೃತ್ಯಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ರಾಜ್ಯ ಸರ್ಕಾರ ವನ್ಯಜೀವಿ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಂಡಿರುವುದರಿಂದಲೇ ರಾಜ್ಯ ಹುಲಿಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ಐದು ಹುಲಿಗಳು ಒಂದೇ ಬಾರಿಗೆ ಸಾವಿಗೀಡಾಗಿರುವುದು ಅತ್ಯಂತ ನೋವಿನ ಹಾಗೂ ಹೃದಯ ವಿದ್ರಾವಕ ಘಟನೆಯಾಗಿದ್ದು, ಅತೀವ ನೋವು ತಂದಿದೆ ಎಂದರು.

ಹುಲಿಗಳ ಅಸಹಜ ಸಾವಿನ ವಿಷಯ ತಿಳಿದ ಕೂಡಲೇ ಉನ್ನತ ಮಟ್ಟದ ತನಿಖೆಗೆ ಆದೇಶ ನೀಡಲಾಗಿದೆ. ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರ ▸ 6ನೇ ಪುಟಕ್ಕೆ



## ನಕ್ಕರೆ ಅದೇ ಸ್ವರ್ಗ

ರಾತ್ರಿ ಮಲಗುವಾಗ ಬೆಳಗ್ಗೆ ಎದ್ದೇಳ್ತೇವೆ ಅನ್ನೋ ಯಾವುದೇ ನಂಬಿಕೆ ಇರಲ್ಲ.
ಆದ್ರೂ; ಅಕ್ಕಿ, ಉದ್ದಿನ ಬೇಳೆನ ನೀರಲ್ಲಿ ನೆನೆಸಿ ಇಡ್ತೇವೆ.
ಬದುಕಿದ್ರೆ ಇಡ್ಲಿ, ಇಲ್ಲದಿದ್ರೆ ವಡೆ!

ಮೈಸೂರು ಮಿತ್ರ
ಶನಿವಾರ, 28 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತ ವಾಹಿನಿ..........

ಕೆಲವೊಮ್ಮೆ ನಮ್ಮ ನಗುವನ್ನೇ ಕಿತ್ತುಕೊಂಡವರು ಬಂದು ನೀನು ಖುಷಿಯಾಗಿರು ಅನ್ನುತ್ತಾರೆ. ಮರವನ್ನೇ ಕಡಿದು ಬುಡಕ್ಕೆ ನೀರು ಹಾಕಿದರೆ ಏನು ಫಲ!

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹುಚ್ಚು ಹೊಳೆ ಬರುವಾಗ ಹೂವಿನ ತೋಟ ಅಡ್ಡವೇ?

## ನಿಮ್ಮ ಪತ್ರಗಳು

### ಕನ್ನಡ ಕಡ್ಡಾಯವೆಂಬ ವಿಡಂಬನೆ!

ಮಾನ್ಯರೆ,

ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳೂ ಪೂರ್ಣ ಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿರುವುದು (26.6.25.ಮೈಸೂರು ಮಿತ್ರ) ವರದಿಯಾಗಿದೆ. 1981–1982ರಲ್ಲಿ ರಾಜ್ಯವ್ಯಾಪಿ ನಡೆದ ಗೋಕಾಕ್ ಚಳುವಳಿಯಿಂದ ಹಿಡಿದು 1983 ಮತ್ತು 1985ರಲ್ಲಿ ಅಧಿಕಾರಕ್ಕೆ ಬಂದ ರಾಮಕೃಷ್ಣ ಹೆಗಡೆಯವರ ಸರ್ಕಾರದಿಂದ ಈಗಿನ ಸಿದ್ದರಾಮಯ್ಯನವರ ಸರ್ಕಾರದವರೆಗೆ ಅಧಿಕಾರಕ್ಕೆ ಬಂದ ಸರ್ಕಾರಗಳೆಲ್ಲವೂ ಈ ರೀತಿಯ ಸುತ್ತೋಲೆ ಹೊರಡಿಸುವುದು ಅಂದಿನಿಂದ ಇಂದಿನವರೆಗೆ ಪದ್ಧತಿಯಂತೆ ನಡೆದು ಬಂದಿದೆಯಷ್ಟೇ! ಆದರೆ ಆಡಳಿತದಲ್ಲಿ ಕನ್ನಡ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿರುವುದಿಲ್ಲ. 1985ರಲ್ಲಿ ನಾನು ಸರ್ಕಾರಿ ಕೆಲಸಕ್ಕೆ ಸೇರಿದಾಗ ಸರ್ಕಾರದಿಂದ ಬರುವ ಪತ್ರಗಳು, ಸುತ್ತೋಲೆಗಳು, ಆದೇಶದ ಪತ್ರಗಳು ಎಲ್ಲವೂ ಇಂಗ್ಲೀಷ್‌ನಲ್ಲಿಯೇ ಬರುತ್ತಿದ್ದವು.

ಅಂತೆಯೇ ಕಚೇರಿಯಿಂದ ಮೇಲಿನ ಕಚೇರಿ, ಕಚೇರಿಗಳಿಗೆ ಪತ್ರ ಬರೆಯುವುದು, ರಜೆ ಪತ್ರ ಬರೆಯುವುದು ಎಲ್ಲಾ ಪತ್ರ ವ್ಯವಹಾರವೂ ಇಂಗ್ಲೀಷ್‌ನಲ್ಲಿಯೇ ನಡೆಯುತ್ತಿದ್ದವು. 1986ರಲ್ಲಿ ರಾಮಕೃಷ್ಣ ಹೆಗಡೆಯವರ ಸರ್ಕಾರ, ಸಿಎಲ್ ಪತ್ರ ಸೇರಿದಂತೆ ಸರ್ಕಾರದ ಎಲ್ಲಾ ಪತ್ರವ್ಯವಹಾರಗಳನ್ನು ಕನ್ನಡದಲ್ಲೇ ನಡೆಸಬೇಕು ಎಂದು ಸುತ್ತೋಲೆ ಹೊರಡಿಸಿತು. ಕೆಲವು ಸಂದರ್ಭ ಹೊರತುಪಡಿಸಿ, ಆಗಿನಿಂದ ಕಚೇರಿಗಳಲ್ಲಿ ಕನ್ನಡ ಬಳಕೆ ಆರಂಭವಾಯಿತು. ಆದರೂ ಸರ್ಕಾರದ ಉನ್ನತ ಇಲಾಖೆಗಳ ಮಟ್ಟದಲ್ಲಿ ಇಂಗ್ಲೀಷ್ ಪತ್ರ ವ್ಯವಹಾರವೇ ಇತ್ತು. ಅದು ಇಂದಿನವರೆಗೂ ಮುಂದುವರಿದಿರುವುದು ವಿಷಾದನೀಯ.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಪತ್ರ ವ್ಯವಹಾರಗಳಿಗೆ ಮಾತ್ರ ಸೀಮಿತವೇ? ಏಕೆಂದರೆ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇತ್ತೀಚಿನ ದಿನಗಳಲ್ಲಿ ಮಾಧ್ಯಮಗಳಲ್ಲಿ ಪ್ರತಿಕ್ರಿಯೆ ನೀಡುವಾಗ ಅತಿಯಾಗಿ ಇಂಗ್ಲೀಷ್ ಬಳಕೆ ಮಾಡುತ್ತಿರುವುದು ಕಂಡು ಬರುತ್ತಿದೆ. ಅವರು ಆಕ್ಸ್‌ಫರ್ಡ್‌ನಲ್ಲಿಯೇ ಓದಿರಬಹುದು ಇಲ್ಲವೇ ಕಲಿತಿರಬಹುದು. ಆದರೆ ಕರ್ನಾಟಕದಲ್ಲಿ ಕನ್ನಡ ಜನರ ಬಗ್ಗೆ ಮಾತನಾಡುವಾಗ ಸ್ಪಷ್ಟವಾದ, ಸ್ವಚ್ಛವಾದ ಕನ್ನಡದಲ್ಲೇ ಮಾತನಾಡುವ ಅವಶ್ಯಕತೆ ಇದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ಚಾಮುಂಡೇಶ್ವರಿ ದರ್ಶನ ದುಬಾರಿ

ಮಾನ್ಯರೆ,

ಕರ್ನಾಟಕ ರಾಜ್ಯದಲ್ಲಿ ಹೆಸರುವಾಸಿಯಾದ ಜಿಲ್ಲೆ ಅಂದರೆ ನಮ್ಮ ಮೈಸೂರು ಜಿಲ್ಲೆ. ಈ ಜಿಲ್ಲೆಯಲ್ಲಿ ಅನೇಕ ದೇವಾಲಯಗಳು, ಹಾಗೆ ವನಸಿರಿ ಸಂಪತ್ತು, ಹಲವು ಜಲಾಶಯಗಳು ಇವೆ. ಇದರಲ್ಲಿ ಪ್ರಮುಖವಾಗಿ ಚಾಮುಂಡೇಶ್ವರಿ ದೇವಾಲಯವು ಒಂದು. ಇನ್ನೇನು ಇದೇ ಶುಕ್ರವಾರ (ಜೂ.27) ಆಷಾಢಮಾಸ ಶುರುವಾಗಿದೆ. ಅದರೆ ರಾಜ್ಯ ಸರ್ಕಾರ, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಜುಲೈ 4, 11, 18ರಂದು ವಿಶೇಷ ಪೂಜಾ ದರ್ಶನಕ್ಕೆ ವ್ಯವಸ್ಥೆ ಮಾಡಿದೆ. ಜು.17ರಂದು ಚಾಮುಂಡೇಶ್ವರಿ ಅಮ್ಮನವರ ವರ್ಧಂತ್ಯುತ್ಸವ ನಡೆಯಲಿದ್ದು, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ದೇವರ ದರ್ಶನಕ್ಕೆ ಸರ್ವ ಸಿದ್ಧತೆ ಮಾಡಲಾಗಿದೆ. ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ಇದೇ ಮೊದಲ ಬಾರಿಗೆ ವಿಶೇಷ ಪ್ಯಾಕೇಜ್ ರೂ.2000 ನಿಗದಿ ಮಾಡಿದ್ದಾರೆ. ಇದರಿಂದ ಭಕ್ತಾದಿಗಳಿಗೆ ಹೊರೆಯಾಗುತ್ತದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಚಾಮುಂಡಿಬೆಟ್ಟ ಕ್ಷೇತ್ರ ಪ್ರಾಧಿಕಾರದವರು ಪ್ರವೇಶ ದರವನ್ನು ಕಡಿಮೆ ಮಾಡಿದರೆ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲವಾಗುತ್ತದೆ.

–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್.ಡಿ. ಕೋಟೆ ತಾ.

### ಮೈಸೂರು ವ್ಯಾಪ್ತಿ ಅರಣ್ಯ ಇಲಾಖೆ ಇದೆಯಾ...!?





ಮಾನ್ಯರೆ,

ನಾನು ಮೈಸೂರಲ್ಲಿ 35 ವರ್ಷದಿಂದ ವಾಸವಿದ್ದೇನೆ. ಮೈಸೂರು ಪ್ರಸಿದ್ಧಿ ಪಡೆದಿದ್ದೆ ವನಸಿರಿಯಿಂದ. ಇಲ್ಲಿನ ಗಿಡ–ಮರ, ಉದ್ಯಾನ, ತಂಪಾದ ವಾತಾವರಣಕ್ಕೆ ಜನ ಮಾರು ಹೋದರು. ಆದರೆ ಅಭಿವೃದ್ಧಿ ಹೆಸರಲ್ಲಿ ಈಗಾಗಲೇ ಎರಡು, ಮೂರು ತಲೆಮಾರಿನ ಮರಗಳ ಮಾರಣ ಹೋಮ ನಡೆದು ಹೋಯಿತು. ಈಗ ಐದಾರು ವರ್ಷದಿಂದ ಹಾಕಿದ ಮರಗಳನ್ನು 'ಅಂದದ' ಹೆಸರಲ್ಲಿ ಕಗ್ಗೊಲೆ ಮಾಡಲಾಗುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಮೈಸೂರು ಗೋಕುಲಂ ಮೂರನೇ ಹಂತದಲ್ಲಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪಕ್ಕದ ರಸ್ತೆಯ ಫುಟ್‌ಪಾತ್‌ಗೆ ಟೈಲ್ಸ್ ಹಾಕಲಾಗಿದೆ. ಈ ವೇಳೆ ಫುಟ್‌ಪಾತ್‌ನಲ್ಲಿದ್ದ ಮರಗಳ ಬುಡದಲ್ಲಿ ಮಳೆ ನೀರು ಹಿಂಗಲೂ ಅವಕಾಶವಾಗದಂತೆ ಟೈಲ್ಸ್ ಅಳವಡಿಸಿದ ಪರಿಣಾಮ ಮೂರು ಮರಗಳು ಒಣಗಿ ಹೋಗಿ, ಅವುಗಳು ಆರು ತಿಂಗಳಿಂದ ತಮಗೊದಗಿ ಬಂದ 'ದುಸ್ಥಿತಿ' ಸಾರುವಂತೆ ನಿಂತಿವೆ. ಇನ್ನು ಇಲ್ಲಿದ್ದ ಕೆಲ ಮರಗಳನ್ನು ಕಡಿದು ಹಾಕಿರುವುದಕ್ಕೆ ಸಾಕ್ಷಿಯಾಗಿ ಬುಡಗಳು ಕಾಣುತ್ತಿವೆ. ಹೀಗೆಯೇ ಗೋಕುಲಂ ಮುಖ್ಯ ರಸ್ತೆಯಲ್ಲಿನ ಕಬ್ಸ್ ಕಾಫಿ ಷಾಪ್ ಪಕ್ಕದ ಹೋಟೇಲ್ ಮುಂದೆಯೂ ಎರಡು ಮರ ಒಣಗಿ ನಿಂತಿವೆ. ಇವೆಲ್ಲಾ ನಗರ ಪ್ರದೇಶದಲ್ಲಿ ಕಾರ್ಯನಿರತ ಅರಣ್ಯ ಇಲಾಖೆ ಸಿಬ್ಬಂದಿಗೆ ಕಾಣಿಸುವುದಿಲ್ಲವೇ? ದಾನಿಗಳು ಗಿಡ ನೆಟ್ಟು ರಕ್ಷಿಸಿ ಬೆಳೆಸಿದ ಮರಗಳನ್ನು ಸಂರಕ್ಷಣೆ ಮಾಡದ ಅರಣ್ಯ ಇಲಾಖೆ ಇರುವುದಾದರೂ ಏಕೆ? ಅರಣ್ಯ ಸಚಿವರೇ ಇದಕ್ಕೆ ಉತ್ತರಿಸಬೇಕಷ್ಟೆ!

– ರಾಮಚಂದ್ರ, ವಿಜಯನಗರ, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

# ಸೌಟು ಹಿಡಿವ ಕೈ ಶಸ್ತ್ರಾಸ್ತ್ರ ಹಿಡಿಯಲೂ ಸೈ...!

**"ಪ್ರಸ್ತುತ ರಾಷ್ಟ್ರೀಯ ರಕ್ಷಣಾ ಅಕಾಡೆಮಿ(ಎನ್‌ಡಿಎ)ಯಲ್ಲಿನ ಒಟ್ಟು ಸೀಟುಗಳಲ್ಲಿ ಶೇ.10ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡಲಾಗಿದ್ದು, ಈ ಸ್ಥಾನಗಳನ್ನು ಮುಕ್ತ ಹಾಗೂ ಸ್ಪರ್ಧಾತ್ಮಕ ನೆಲೆಯಲ್ಲಿ ಭರ್ತಿ ಮಾಡಲಾಗುತ್ತಿದೆ. ಕೇಂದ್ರ ಸರಕಾರದ ರಕ್ಷಣಾ ರಾಜ್ಯ ಸಚಿವರಾದ ಸಂಜಯ್ ಸೇಥ್‌ರವರು ಸಂಸತ್ತಿಗೆ ನೀಡಿದ ಮಾಹಿತಿಯಲ್ಲಿ 2022 ರಿಂದ ಇದುವರೆಗೆ 126 ಮಹಿಳೆಯರು ಎನ್‌ಡಿಎಗೆ ಪ್ರವೇಶ ಪಡೆದಿದ್ದಾರೆ. ಪ್ರಸ್ತುತ ಸೇನೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಲಾಗುತ್ತಿದ್ದು, ಲಿಂಗ ಸಮಾನತೆ ತರಲಾಗಿದೆ ಎಂದು ಹೇಳಲಾಗುತ್ತಿದೆ. ಭಾರತದ ಮೂರು ಪಡೆಗಳಲ್ಲಿ ಈಗ ವೈದ್ಯಕೀಯ ವಿಭಾಗದಲ್ಲಿ ಮೆಡಿಕಲ್ ಆಫೀಸರ್‌ಗಳು ಮಹಿಳೆಯರೇ ಆಗಿದ್ದಾರೆ.**



ಭಾರತವು ಆಪರೇಷನ್ (ಓಪಿ) ಸಿಂಧೂರದ ಮೂಲಕ ಭಾರತದಲ್ಲಿ ತಾಯಂದಿರ ಹಣೆಯಲ್ಲಿ ಶೋಭಿಸುವ ಸಿಂಧೂರದ ಪಾವಿತ್ರ್ಯ, ಮೌಲ್ಯ, ಮಹತ್ವವನ್ನು ಜಗತ್ತಿಗೆ ಪರಿಚಯಿಸಿದೆ. ಭಾರತದ ಹೆಣ್ಣು ಮಕ್ಕಳ ಕುಂಕುಮ ಭಾಗ್ಯ ಕಸಿದುಕೊಂಡಿದ್ದಕ್ಕೆ ಪ್ರತೀಕಾರದ ರೂಪದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ಕಾರ್ಯಾಚರಣೆಯ ಎಲ್ಲ ಮಾಹಿತಿಗಳನ್ನು ಮಹಿಳಾ ಅಧಿಕಾರಿಗಳಿಂದಲೇ ನೀಡಲಾಯಿತು. ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿಯವರೊಂದಿಗೆ ಕರ್ನಲ್ ಸೋಫಿಯಾ ಖುರೇಷಿ ಮತ್ತು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಅವರು ಓಪಿ ಸಿಂಧೂರ್‌ನ ವಿವರಗಳನ್ನು ಅತ್ಯಂತ ಪ್ರಬುದ್ಧತೆ ಹಾಗೂ ಸ್ಪಷ್ಟತೆಯೊಂದಿಗೆ ಜಗತ್ತಿಗೆ ನೀಡಿದರು. ಈ ರೀತಿ ಸರಕಾರವು ದೇಶದಲ್ಲಿ ಮಾತೃಶಕ್ತಿಗೆ ಇರುವ ಪ್ರಾಧಾನ್ಯತೆ ಹಾಗೂ ಸಾಮರ್ಥ್ಯವನ್ನು ಪ್ರಸ್ತುತಪಡಿಸಿದೆ.

ಪಹಲ್ಗಾಮ್ ಭಯೋತ್ಪಾದಕ ಕೃತ್ಯದ ನಂತರ ಪಾಕ್ ಸೇನೆ ಅಂತರರಾಷ್ಟ್ರೀಯ ಗಡಿರೇಖೆ ಯುದ್ಧಕ್ಕೂ ಜಮ್ಮು ವಲಯದಲ್ಲಿ ನಿರಂತರವಾಗಿ ಶೆಲ್ ಮಾರ್ಟರ್ ಹಾಗೂ ಗುಂಡಿನ ದಾಳಿ ನಡೆಸುತ್ತಾ ಮರೆಯಲ್ಲಿ ಅನೇಕ ಭಯೋತ್ಪಾದಕರು ಭಾರತ ದೇಶಕ್ಕೆ ನುಸುಳುವ ಯತ್ನದಲ್ಲಿರುವುದನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಗಮನಿಸಿತ್ತು. ಈ ವೇಳೆ ಭಾರತದ ಯೋಧರು ಪ್ರತಿದಾಳಿ ನಡೆಸುತ್ತಿದ್ದರು. ಭಾರತೀಯ ಯೋಧರ ದಾಳಿಗೆ ಪಾಕ್‌ನ ಅನೇಕ ನೆಲೆಗಳು ನೆಲಸಮವಾದವು. ನಿರಂತರ ಗುಂಡಿನ ದಾಳಿಯ ಕಾರಣ ಮಹಿಳಾ ಯೋಧರನ್ನು ಬೆಟಾಲಿಯನ್ ಕೇಂದ್ರಕ್ಕೆ ವರ್ಗಾಯಿಸುವ ಅವಕಾಶವಿತ್ತು. ಆದರೆ ಸಹಾಯಕ ಕಮಾಂಡೆಂಟ್ ನೇಹಾ ಭಂಡಾರಿಯವರ ಕಮಾಂಡ್‌ನಲ್ಲಿದ್ದ ಸುಮಾರು ಇಪ್ಪತ್ತರಷ್ಟು ಮಹಿಳಾ ಗಡಿ ರಕ್ಷಕಿಯರು ಮುಂಚೂಣಿ ಪ್ರದೇಶದಲ್ಲೇ ಉಳಿದು ಯುದ್ಧವನ್ನೇ ಆಯ್ಕೆ ಮಾಡಿಕೊಂಡರು. ಜಮ್ಮು ವಲಯದ ಸಾಂಬಾ, ಆರ್.ಎಸ್.ಪುರ ಮತ್ತು ಅಖ್ನೂರ್ ವಲಯದ ಪಹಲ್ವಾಗ್ ಪ್ರದೇಶದಲ್ಲಿ ನೇಹಾ ಭಂಡಾರಿಯವರು ಆರು ಮಹಿಳಾ ಕಾನ್ಸ್‌ಟೇಬಲ್‌ಗಳೊಂದಿಗೆ ಬಿಎಸ್‌ಎಫ್‌ನ ಮುಂಚೂಣಿ ಪಡೆಯನ್ನು ಪಾಕಿಸ್ತಾನದ ಚೌಕಿಯಿಂದ ಕೇವಲ 150 ಮೀಟರ್ ದೂರದಲ್ಲಿ ಮುನ್ನಡೆಸಿ ತಮ್ಮ ಪರಾಕ್ರಮವನ್ನು ಸಾಬೀತುಪಡಿಸಿದರು. ಗಡಿಯಲ್ಲಿ ಏಕಾಏಕಿ ಗುಂಡಿನ ದಾಳಿ ನಡೆಸುತ್ತಿದ್ದ ಪಾಕ್‌ನ ಮೂರು ಚೌಕಿಗಳನ್ನು ನಾಶಪಡಿಸಿದರು. ಪುರುಷ ಸೈನಿಕರಿಗೆ ಸರಿಸಮನಾಗಿ ಮಹಿಳೆಯರು ದೇಶಕ್ಕಾಗಿ ತಮ್ಮ ಕೆಚ್ಚು ಪರಾಕ್ರಮ ತೋರಿದರು. ಓಪಿ ಸಿಂಧೂರ ಕಾರ್ಯಾಚರಣೆಯಲ್ಲಿ ಬಿಎಸ್‌ಎಫ್ 76 ಪಾಕಿಸ್ತಾನಿ ಔಟ್‌ಪೋಸ್ಟ್‌ಗಳು, 42 ಫಾರ್ವರ್ಡ್ ಡಿಫೆನ್ಸ್ ಸ್ಥಾನಗಳು ಹಾಗೂ ಮೂರು ಉಗ್ರರ ಲಾಂಚ್‌ಪ್ಯಾಡ್‌ಗಳನ್ನು ನಾಶಪಡಿಸಿದರು. ಈ ಕಾರ್ಯಾಚರಣೆ ಭಾರತೀಯ ಮಹಿಳಾ ಸೈನಿಕರ ಅಸಾಮಾನ್ಯ ಸಾಮರ್ಥ್ಯವನ್ನು ಪರಿಚಯಿಸಿದೆ. ಬಿಎಸ್‌ಎಫ್‌ನ ಇನ್ಸ್‌ಪೆಕ್ಟರ್ ಜನರಲ್ ಶಶಾಂಕ್ ಆನಂದರು ಈ ಮಹಿಳೆಯರು ಭಾರತೀಯ ಗಡಿ ಭದ್ರತಾ ಪಡೆಗೆ ಹೆಮ್ಮೆ ಎಂದು ಶ್ಲಾಘಿಸಿದ್ದರು.

ಭಾರತದ ಇತಿಹಾಸದ ಪುಟಗಳಲ್ಲೂ ಅನೇಕ ವೀರಾಂಗನೆಯರು ತಮ್ಮ ಸಾಹಸ, ಕೆಚ್ಚು ಪರಾಕ್ರಮಗಳಿಂದ ಶಾಶ್ವತ ಸ್ಥಾನ ಗಳಿಸಿದ್ದಾರೆ. ಕೆಲವರು ಬ್ರಿಟಿಷರ ವಿರುದ್ಧ ಹೋರಾಡಿದರೆ, ಇನ್ನು ಕೆಲವರು ದೇಶದಲ್ಲಿ ಸ್ತ್ರೀಯರ ವಿರುದ್ಧ ನಡೆಯುತ್ತಿದ್ದ ಅನಾಚಾರಗಳ ವಿರುದ್ಧ ಹೋರಾಡಿದರು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತದ ವೀರ ನಾರಿಯರ ಕ್ಷಾತ್ರ ತೇಜಸ್ಸು ಹೋರಾಡುವ ಸಾಮರ್ಥ್ಯ, ರಣರಂಗದಲ್ಲಿ ಸೇನೆಯನ್ನು ಮುನ್ನಡೆಸುವ ರೀತಿಯಿಂದ ಬ್ರಿಟಿಷರು ಭಯಭೀತರಾಗಿದ್ದರು. ಇವರು ಭಾರತೀಯ ರಾಷ್ಟ್ರೀಯವಾದಿ ಚಳವಳಿಯ ಐಕಾನ್ ಆಗಿದ್ದರು.

ಝಾನ್ಸಿರಾಣಿ ಲಕ್ಷ್ಮಿಬಾಯಿ (1828–1858). ಇವರ ಪ್ರತಿರೂಪದಂತಿದ್ದ ಹಾಗೂ ಲಕ್ಷ್ಮಿಬಾಯಿ ಅತ್ಯಾಪ್ತ ಯೋಧೆ, ಸಲಹೆಗಾರ್ತಿಯೂ ಆಗಿದ್ದ ಜಲ್ಕಾರಿಬ್ಯಾ (1830–1858), ನವಾಬ್ ಆಫ್ ಅವಧನ ವಝಿದ್ ಆಲಿ–ಷಾರ ಮಹಿಳಾ ಬೆಟಾಲಿಯನ್‌ನ ಸಮರಾಂಗಿಣಿ ಉದಾದೇವಿ ಪಾಸಿ (1827–1857). ರಾಮಘಡದ ರಾಣಿ ಅವಂತಿ ಬ್ಯಾಲೋಧಿ (1831–1858). ಇವರೆಲ್ಲರೂ ಅತ್ಯಂತ ಚಿಕ್ಕ ವಯಸ್ಸಿನಲ್ಲೆ ಬ್ರಿಟಿಷರ ವಿರುದ್ಧ ಅಪ್ರತಿಮ ಹೋರಾಟ ನಡೆಸಿ ಸ್ವಾತಂತ್ರ್ಯ ದೇವಿಯ ಪದತಲದಲ್ಲಿ ಸರ್ವೋಚ್ಚ ಬಲಿದಾನ ಮಾಡಿ ಅಮರರಾದರು.

ಕರ್ನಾಟಕದಲ್ಲಿ ಹದಿನಾರನೇ ಶತಮಾನದ ದ್ವಿತೀಯಾರ್ಧದಲ್ಲಿ ದಕ್ಷಿಣ ಕನ್ನಡಜಿಲ್ಲೆಯ ಉಳ್ಳಾಲದ ರಾಣಿ ಅಬ್ಬಕ್ಕ ಪೋರ್ಚುಗೀಸರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು. ನಾಲ್ಕು ದಶಕಗಳ ಕಾಲ ಇವರು ಪೋರ್ಚುಗೀಸರ ದಾಳಿ ಹಿಮ್ಮೆಟ್ಟಿಸಿದರು. ಇವರ ಅಪ್ರತಿಮ ಧೈರ್ಯ ಸಾಹಸಕ್ಕಾಗಿ ಅಭಯ ರಾಣಿ (ನಿರ್ಭೀತ ರಾಣಿ) ಎಂದು ಕರೆಯಲ್ಪಟ್ಟರು. ಇವರನ್ನು ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ (ಮಹಿಳಾ) ಎಂದು ಪರಿಗಣಿಸಲಾಗುತ್ತದೆ.

ಕರ್ನಾಟಕದಲ್ಲಿ ರಾಣಿ ಚೆನ್ನ ಭೈರಾದೇವಿ, 19ನೇ ಶತಮಾನದಲ್ಲಿ ಬ್ರಿಟಿಷರೊಂದಿಗೆ ಹೋರಾಡಿದ ಕಿತ್ತೂರು ರಾಣಿ ಚೆನ್ನಮ್ಮ, ಬೆಳವಾಡಿ ಮಲ್ಲಮ್ಮ, ಒನಕೆ ಓಬವ್ವ ಮೊದಲಾದವರನ್ನು ಮಹಿಳಾ ಯೋಧರೆಂದು ಗೌರವಿಸಲಾಗುತ್ತಿದೆ. 20ನೇ ಶತಮಾನದಲ್ಲಿ ಅನೇಕ ಮಹಿಳೆಯರು ಕ್ರಾಂತಿಕಾರಿಗಳಾಗಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಇವರಲ್ಲಿ ನೇತಾಜಿ ಸಹವರ್ತಿ ಕ್ಯಾ. ಲಕ್ಷ್ಮಿ ಸೆಹಗಲ್, ನೀರಾ ಆರ್ಯ, ಕಲ್ಪನಾ ದತ್ತ, ಪ್ರೀತಿ ಲತಾ ವಡ್ಡೇದಾರ್, ದುರ್ಗಾಬಾಬಿ ಹಾಗೂ ನಾಗಲ್ಯಾಂಡ್‌ನ ರಾಣಿ ಗಾಯ್ದಿನ್ಲಿಯಾ ಮೊದಲಾದ ಮಹಿಳೆಯರು ದೇಶದ ಸ್ವಾತಂತ್ರ್ಯಕ್ಕಾಗಿ ಅಪ್ರತಿಮ ಹೋರಾಟ ನಡೆಸಿದರು.

ಇತ್ತೀಚಿನ ವರ್ಷಗಳಲ್ಲಿ ಭಾರತೀಯ ಸೇನೆಯ ಮೂರು ವಿಭಾಗಗಳಲ್ಲಿ ಪುರುಷ ಸೈನಿಕರಿಗೆ ಸರಿಸಮವಾಗಿ ಮಹಿಳೆಯರು ತಮ್ಮ ಸಾಮರ್ಥ್ಯ ತೋರಲಾರಂಭಿಸಿದ್ದಾರೆ. ಆದರೆ ಭಾರತೀಯ ಸೇನಾ ಪಡೆಗಳಲ್ಲಿ ಸೇರ್ಪಡೆಯಾಗಲು ಮಹಿಳೆಯರು ಸುದೀರ್ಘ ಕಾಲ ಸಂಘರ್ಷ ನಡೆಸಿದರು. ಮುನ್ನೂರು ವರ್ಷಗಳ ಹಿಂದೆ ಬ್ರಿಟಿಷ್ ಅಧಿಕಾರಿ ವಾರನ್ ಹೇಸ್ಟಿಂಗ್ಸ್ ಕಾಲದಲ್ಲಿ ಭಾರತೀಯ ಸೇನೆಯ ವಿಭಾಗದಲ್ಲಿ ವೈದ್ಯಕೀಯ ಸೇವೆ ಸಲ್ಲಿಸುವುದರೊಂದಿಗೆ ಆರಂಭವಾಯಿತು. ಡಾ. ಪುನೀತಾ ಆರೋರಾ ಸೇನೆಯಲ್ಲಿ ವೈದ್ಯೆಯಾಗಿ ಲೆಫ್ಟಿನೆಂಟ್ ಜನರಲ್ ಗೌರವ ಪಡೆದರೆ ಡಾ. ಪದ್ಮಾವತಿ ಬಂದೋಪಾಧ್ಯಾಯ ವಾಯುಪಡೆಯಲ್ಲಿ ಏರ್ ಮಾರ್ಷಲ್ ಗೌರವ ಪಡೆದರು. 1943 ರಲ್ಲಿ ನೇತಾಜಿಯವರ ಆಜಾದ್ ಹಿಂದ್ ಫೌಜ್‌ನಲ್ಲಿ ಮಹಿಳಾ ಸೈನಿಕರ ರಾಣಿ ಝಾನ್ಸಿ ರೆಜಿಮೆಂಟ್ ಆರಂಭವಾಯಿತು. ಈ ರೆಜಿಮೆಂಟ್‌ನ ಮಹಿಳೆಯರು ಪ್ರಥಮ ಬಾರಿ ಯುದ್ಧ ಭೂಮಿಯಲ್ಲಿ ಹೋರಾಡಿದರು. ಸ್ವಾತಂತ್ರ್ಯ ನಂತರ ಸುದೀರ್ಘ ಅವಧಿಗೆ ಸೇನೆಯಲ್ಲಿ ಸ್ತ್ರೀಯರಿಗೆ ಕೇವಲ ಸಹಾಯಕರಾಗಿ ಸೇವೆ ಸಲ್ಲಿಸುವ ಅವಕಾಶ ನೀಡಲಾಯಿತು. 1992ರಲ್ಲಿ ನರಸಿಂಹ ರಾಯರು ಪ್ರಧಾನಿಯಾದಾಗ ಸೇನೆಯಲ್ಲಿ ಸಮರೋದ್ದೇಶಕ್ಕಾಗಿ ಸ್ತ್ರೀಯರನ್ನು ನೇಮಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಆಗ ಐವತ್ತು ಮಹಿಳಾ ಸೇನಾಧಿಕಾರಿಗಳ ಹುದ್ದೆಗೆ 1803 ಸ್ತ್ರೀಯರು ಅರ್ಜಿ ಸಲ್ಲಿಸಿದರು. ಭೂ ಸೇನೆಯ ಮೊದಲ ಮಹಿಳಾ ಅಧಿಕಾರಿಯೆಂಬ ಗೌರವಕ್ಕೆ ಪಾತ್ರರಾದ ಪ್ರಿಯಾಝಿಂಗನ್ 2002ರಲ್ಲಿ ಮೇಜರ್ ಆಗಿ ನಿವೃತ್ತರಾದರು. ಭೂ ಸೇನೆಯ ನಂತರ ನೌಕಾಪಡೆಯು 2016ರವರೆಗೆ 350 ಮಹಿಳೆಯರಿಗೆ ಅಧಿಕಾರಿಸ್ತರದ ಹುದ್ದೆ ನೀಡಿದೆ.

ಭಾರತೀಯ ವಾಯು ಸೇನೆಯಲ್ಲಿ ಮಹಿಳೆಯರಿಗೆ ಕೇವಲ ಸಾರಿಗೆ ವಿಮಾನ, ಹೆಲಿಕಾಪ್ಟರ್‌ಗಳಲ್ಲಿ ಸೇವೆಯ ಅವಕಾಶವಿತ್ತು. ಪ್ರಥಮವಾಗಿ ಜೂನ್ 18, 2016 ರಂದು ಭಾರತೀಯ ವಾಯುಸೇನೆಯು ಫ್ಲೈಯಿಂಗ್ ಆಫೀಸರ್‌ಗಳಾದ ಅವನಿ ಚತುರ್ವೇದಿ, ಭಾವನಾ ಕಾಂತ, ಮೋಹನಾ ಸಿಂಗ್‌ರನ್ನು ಯುದ್ಧ ವಿಮಾನಗಳ ಪೈಲೆಟ್‌ಗಳಾಗಿ ನೇಮಿಸಿತು. ಶಿವಾಂಗಿ ಸಿಂಗ್, ರಫೇಲ್ ಯುದ್ಧ ವಿಮಾನ ಚಲಾಯಿಸಿದ ದೇಶದ ಮೊದಲ ಮಹಿಳಾ ಪೈಲೆಟ್ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಉಳಿದಂತೆ ಗುಂಜನಾ ಸಕ್ಸೇನಾ, ಶ್ರೀವಿದ್ಯಾರಾಜನ್, ಶಾಲಿಜಾ ದಾಮಿ ಯುದ್ಧ ವಿಮಾನಗಳ ಪೈಲೆಟ್‌ಗಳಾಗಿದ್ದಾರೆ. ಇವರಲ್ಲಿ ಗುಂಜನಾ ಮತ್ತು ಶ್ರೀ ವಿದ್ಯಾ ಅವರು ಕಾರ್ಗಿಲ್ ಯುದ್ಧದಲ್ಲಿ ಹಾರಾಟ ನಡೆಸಿದರೆ, ಶಾಲಿಜಾರವರು ಮುಂಚೂಣಿ ದಾಳಿ ಘಟಕದ ಪೈಲೆಟ್ ಮತ್ತು ಮೊದಲ ಫ್ಲೈಟ್ ಕಮಾಂಡರ್ ಆದ ಮಹಿಳೆ ಎನಿಸಿದ್ದಾರೆ. ಮಾವ್ಯಾ ಸುದಾನ್ ಜಮ್ಮು ಕಾಶ್ಮೀರದ ಪ್ರಥಮ ಮಹಿಳಾ ಫೈಟರ್ ಪೈಲಟ್ ಎಂಬ ಹೆಗ್ಗಳಿಕೆ ಗಳಿಸಿದ್ದಾರೆ. ನೌಕಾಪಡೆಯಲ್ಲಿ ಮಹಿಳೆಯರಿಗೆ ಮಿಗ್–29 ರಂತಹ ಯುದ್ಧ ವಿಮಾನ ಹಾರಿಸುವ ಅವಕಾಶವಿರಲಿಲ್ಲ. 90ರ ದಶಕದಲ್ಲಿ ಒಂದು ವರ್ಷದ ಅವಧಿಗೆ ಮಹಿಳೆಯರನ್ನು ಯುದ್ಧ ನೌಕೆಗಳಲ್ಲಿ ನಿಯೋಜಿಸಲಾಗಿತ್ತು. ಆದರೆ, ವಸತಿ, ಶೌಚಾಲಯ ಮೊದಲಾದ ಸಮಸ್ಯೆಗಳಿಂದಾಗಿ ಇವರನ್ನು ನೌಕಾಪಡೆಯ ಕಾರ್ಯಾಲಯಗಳಿಗೆ ವರ್ಗಾಯಿಸಲಾಯಿತು. ಹೊಸ ಸಮರ ನೌಕೆಗಳಲ್ಲಿ ಮಹಿಳೆಯರಿಗೆ ಎಲ್ಲಾ ರೀತಿಯ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಪ್ರಸ್ತುತ ನೌಕಾ ಪಡೆಯಲ್ಲಿ ಮಹಿಳೆಯರು ಕಣ್ಗಾವಲು ವಿಮಾನಗಳಲ್ಲಿ ಪೈಲಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2020ರ ಫೆಬ್ರವರಿಯಲ್ಲಿ ಸುಪ್ರೀಂಕೋರ್ಟ್ ಆದೇಶದ ನಂತರ ಸೇನೆಯ ಎಲ್ಲಾ ವಿಭಾಗಗಳೀಗ ಮಹಿಳೆಯರಿಗೆ ಮುಕ್ತವಾಗಿವೆ.

ಪ್ರಸ್ತುತ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಯಲ್ಲಿನ ಒಟ್ಟು ಸೀಟುಗಳಲ್ಲಿ ಶೇ.10 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡಲಾಗಿದ್ದು, ಈ ಸ್ಥಾನಗಳನ್ನು ಮುಕ್ತ ಹಾಗೂ ಸ್ಪರ್ಧಾತ್ಮಕ ನೆಲೆಯಲ್ಲಿ ಭರ್ತಿ ಮಾಡಲಾಗುತ್ತಿದೆ. ಕೇಂದ್ರ ಸರಕಾರದ ರಕ್ಷಣಾ ರಾಜ್ಯ ಸಚಿವರಾದ ಸಂಜಯ್ ಸೇಥ್‌ರವರು ಸಂಸತ್ತಿಗೆ ನೀಡಿದ ಮಾಹಿತಿಯಲ್ಲಿ 2022 ರಿಂದ ಇದುವರೆಗೆ 126 ಮಹಿಳೆಯರು ಎನ್‌ಡಿಎಗೆ ಪ್ರವೇಶ ಪಡೆದಿದ್ದಾರೆ. ಪ್ರಸ್ತುತ ಸೇನೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಲಾಗುತ್ತಿದ್ದು, ಲಿಂಗ ಸಮಾನತೆ ತರಲಾಗಿದೆ ಎಂದು ಹೇಳಲಾಗುತ್ತಿದೆ. ಭಾರತದ ಮೂರು ಪಡೆಗಳಲ್ಲಿ ಈಗ ವೈದ್ಯಕೀಯ ವಿಭಾಗದಲ್ಲಿ ಮೆಡಿಕಲ್ ಆಫೀಸರ್‌ಗಳು ಮಹಿಳೆಯರೇ ಆಗಿದ್ದಾರೆ.

2023 ಆಗಸ್ಟ್‌ನಲ್ಲಿ ಕೇಂದ್ರದ ರಕ್ಷಣಾ ರಾಜ್ಯಮಂತ್ರಿ ಅಜಯ್ ಭಟ್ ರವರು ಸಂಸತ್ತಿಗೆ ಸೇನೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಬಗ್ಗೆ ಕುತೂಹಲಕರ ಅಂಕಿ ಅಂಶಗಳನ್ನು ನೀಡಿದ್ದರು. ಸೇನೆಯ ಮೂರು ವಿಭಾಗಗಳಲ್ಲಿ ಜನವರಿ 1, 2023 ರಲ್ಲಿದ್ದಂತೆ 11414 ಮಹಿಳೆಯರು ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಭೂ ಸೇನೆಯಲ್ಲಿ 7054 ಮಹಿಳೆಯರಿದ್ದು ಇವರಲ್ಲಿ 1733 ಮಹಿಳೆಯರು ಅಧಿಕಾರಿಗಳಾಗಿದ್ದಾರೆ. ವಾಯು ಪಡೆಯಲ್ಲಿ 1654 ಮಹಿಳಾ ಅಧಿಕಾರಿಗಳಿದ್ದು, 155 ಮಂದಿ ಅಗ್ನಿವೀರ ವರ್ಗದಲ್ಲಿದ್ದಾರೆ. ನೌಕಾಪಡೆಯಲ್ಲಿ 580 ಮಹಿಳಾ ಅಧಿಕಾರಿಗಳಿದ್ದು, 727 ಮಹಿಳಾ ಸೈಲರ್‌ಗಳಿದ್ದಾರೆ. ಸೇನೆಯಲ್ಲಿ 1212 ಮಹಿಳೆಯರು ವೈದ್ಯಕೀಯ ವಿಭಾಗದಲ್ಲಿದ್ದರೆ 168 ಮಹಿಳಾ ಡೆಂಟಿಸ್ಟ್‌ಗಳಿದ್ದಾರೆ. ಸೇನಾ ಆಸ್ಪತ್ರೆಗಳಲ್ಲಿ 3841 ಮಹಿಳೆಯರು ನರ್ಸ್‌ಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನೌಕಾಪಡೆಯಲ್ಲಿ 151 ಮಹಿಳಾ ವೈದ್ಯಾಧಿಕಾರಿಗಳು, ಹತ್ತು ಡೆಂಟಿಸ್ಟ್‌ಗಳು ಹಾಗೂ 380 ಮಂದಿ ನರ್ಸಿಂಗ್‌ನಲ್ಲಿದ್ದಾರೆ. ವಾಯು ಪಡೆಯಲ್ಲಿ 274 ವೈದ್ಯಕೀಯ ಅಧಿಕಾರಿಗಳು, ಐವರು ಡೆಂಟಿಸ್ಟ್‌ಗಳು ಹಾಗೂ 425 ಮಹಿಳೆಯರು ಮಿಲಿಟರಿ ನರ್ಸಿಂಗ್ ಸೇವೆಯಲ್ಲಿದ್ದಾರೆ.

ರಣರಂಗದಲ್ಲಿ ಫಿರಂಗಿಗಳಿಗೆ (Artillery) ಭಾರಿ ತೂಕದ ಮದ್ದು ಗುಂಡು ತುಂಬುವ ಕೆಲಸ ಸ್ತ್ರೀಯರಿಗೆ ತ್ರಾಸದಾಯಕ ಎಂಬ ಕಾರಣಕ್ಕಾಗಿ ಈ ರೆಜಿಮೆಂಟ್‌ನಲ್ಲಿ ಅವಕಾಶವಿರಲಿಲ್ಲ. ದೇಶದ ಭೂಸೇನೆಯಲ್ಲಿರುವ ಸುಮಾರು 300 ಆರ್ಟಿಲರಿ ರೆಜಿಮೆಂಟ್‌ಗಳಲ್ಲಿ 5000 ಅಧಿಕಾರಿಗಳಿದ್ದಾರೆ. ಈಗ ಮಹಿಳೆಯರೂ ಈ ರೆಜಿಮೆಂಟ್‌ನಲ್ಲಿದ್ದಾರೆ. ಆರ್ಟಿಲರಿಯಲ್ಲಿರುವ ಮಹಿಳಾ ಅಧಿಕಾರಿಗಳು 2023ರಿಂದ ಬೋಫೋರ್ಸ್ ಫಿರಂಗಿಗಳು, ಕೆ–9 ವಜ್ರ ಟ್ಯಾಂಕರ್‌ಗಳಲ್ಲೂ ಕಾರ್ಯ ನಿರ್ವಹಿಸುತ್ತಿದ್ದಾರೆ. 2001–2005ರ ಅವಧಿಯಲ್ಲಿ ನಡೆದ ಅಧ್ಯಯನದಲ್ಲಿ ಪುರುಷರಿಗಿಂತ ಮಹಿಳಾ ಅಧಿಕಾರಿಗಳು ಹೆಚ್ಚು ಪ್ರಾಮಾಣಿಕ, ಶಿಸ್ತು ಹಾಗೂ ಕರ್ತವ್ಯ ನಿಷ್ಠರಾಗಿದ್ದಾರೆ ಎಂಬ ಕುತೂಹಲಕರ ಮಾಹಿತಿ ಬಂದಿತ್ತು.

**ಸೇನೆಯಲ್ಲಿ ಮಹಿಳೆಯರ ಸಮಸ್ಯೆಗಳು:** ಸೇನೆಯಲ್ಲಿ ಪುರುಷರಿಗೆ ಸರಿಸಮಾನವಾಗಿ ಮಹಿಳಾ ಸೈನಿಕರು ಕರ್ತವ್ಯ ನಿರ್ವಹಿಸುವುದನ್ನು ಸಾಬೀತು ಪಡಿಸಿದ್ದಾರೆ. ಆದರೆ ಮಹಿಳೆಯರು ಕರ್ತವ್ಯ ನಿರ್ವಹಿಸುವಾಗ ಸಾಕಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿದೆ. ಪುರುಷ ಪ್ರಧಾನವಾದ ಮಿಲಿಟರಿಯಲ್ಲಿ ಮಹಿಳೆಯರು ಕೆಲವೊಮ್ಮೆ ಪುರುಷ ಅಧಿಕಾರಿಗಳಿಂದ ಲೈಂಗಿಕವಾಗಿ, ಮಾನಸಿಕವಾಗಿ ಹಿಂಸೆ ಅನುಭವಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ. ರಣರಂಗದಲ್ಲಿ ಪುರುಷರಂತೆ ಎಲ್ಲೆಂದರಲ್ಲಿ ಮಹಿಳಾ ಸೈನಿಕರಿಗೆ ನಿದ್ದೆ ಮಾಡಲು ಸಾಧ್ಯವಾಗುವುದಿಲ್ಲ. ಏಕೆಂದರೆ ಇಂತಹ ಸಂದರ್ಭಗಳಲ್ಲಿ ವೈರಿಗಳಿಗೆ ಸಿಕ್ಕಿಬಿದ್ದಲ್ಲಿ ಪರಿಣಾಮ ಘೋರವಾಗಿರುತ್ತದೆ. ಈ ರೀತಿಯ ಘಟನೆಗಳಾದಲ್ಲಿ ಯುದ್ಧದ ಫಲಿತಾಂಶದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದೆಂಬ ಭಾವನೆ ಸೇನಾ ವಲಯದಲ್ಲಿದೆ. ಈ ಕಾರಣದಿಂದ ಅಮೇರಿಕ ಸೇನೆಯ ಇನ್‌ಫೆಂಟ್ರಿ ಹಾಗೂ ವಿಶೇಷ ಕಮಾಂಡೋ ವಿಭಾಗಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಿಲ್ಲ. ಫ್ರಾನ್ಸ್ ದೇಶದಲ್ಲಿ ಸುದೀರ್ಘ ಯುದ್ಧ ಎದುರಾದಲ್ಲಿ ಮಹಿಳೆಯನ್ನು ನಿಯೋಜಿಸಲಾಗುವುದಿಲ್ಲ. ಸ್ಪೈನ್, ಪೋರ್ಚುಗಲ್ ಮೊದಲಾದ ಕೆಲವು ಯುರೋಪ್ ದೇಶಗಳಲ್ಲಿ ಸ್ತ್ರೀಯರನ್ನು ಯುದ್ಧ ಭೂಮಿಯಿಂದ ದೂರವಿಡಲಾಗಿದೆ. ಆದರೆ ಭಾರತೀಯ ಮಹಿಳೆಯರು ಸೇನೆಯಲ್ಲಿ ಸೇವೆ ಸಲ್ಲಿಸಲು ಅನೇಕ ಸವಾಲುಗಳಿದ್ದರೂ ಸೇನೆ ಸೇರುವ ಉತ್ಸಾಹದಲ್ಲಿದ್ದಾರೆ. ಮನೆಗಳಲ್ಲಿ ಸೌಟು ಹಿಡಿವ ಕೈಗಳು ದೇಶ ರಕ್ಷಣೆಗಾಗಿ ಶಸ್ತ್ರಗಳನ್ನು ಹಿಡಿಯಲು ಸಿದ್ಧ ಎಂದು ಸಂದೇಶ ನೀಡಿದ್ದಾರೆ. ಕುಟುಂಬ ಪರಿವಾರ ಸಾಕಿ ಸಲಹುವುದು ಮಾತ್ರವಲ್ಲ ದೇಶದ ಗಡಿಗಳನ್ನು ರಕ್ಷಿಸಲು ಹೋರಾಡುವುದಕ್ಕೂ ನಾವು ಸಿದ್ಧ ಎಂದು ಭಾರತೀಯ ಮಹಿಳೆಯರು ಸಾಬೀತು ಪಡಿಸುತ್ತಿದ್ದಾರೆ.

# ನಿವೃತ್ತ ಸ್ಕ್ವಾಡ್ರನ್ ಲೀಡರ್, ಲೇಖಕಿ ಪರಿಧೇ ಸಿಂಗ್ ರಚಿತ 'ದಿ ಪಥ್' ಕೃತಿ ಬಿಡುಗಡೆ

## ತಂತ್ರಜ್ಞಾನದಲ್ಲೇ ಮುಳುಗಿರುವ ಯುವ ಪೀಳಿಗೆಗೆ ಓದು, ಬರವಣಿಗೆ ಮಹತ್ವ ತಿಳಿಸುವ ಅನಿವಾರ್ಯತೆ: ಪ್ರೊ.ಇಂದಿರಾ

ಮೈಸೂರು, ಜೂ.27(ಎಂಕೆ)– ಭಾರತೀಯ ವಾಯು ಸೇನೆಯ ನಿವೃತ್ತ ಸ್ಕ್ವಾಡ್ರನ್ ಲೀಡರ್ ಹಾಗೂ ಲೇಖಕಿ ಪರಿಧೇ ಸಿಂಗ್ ರಚಿತ 'ದಿ ಪಥ್(The Path)' ಕೃತಿಯನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದ್ಯಮಿ ಅಶ್ವಿನಿ ರಂಜನ್ ಕೃತಿ ಬಿಡುಗಡೆ ಮಾಡಿದರು. ಇದೇ ವೇಳೆ ಮೊದಲ ಪ್ರತಿಯನ್ನು ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಅವರಿಗೆ ನೀಡಲಾಯಿತು.




ನಿವೃತ್ತ ಸ್ಕ್ವಾಡ್ರನ್ ಲೀಡರ್ ಹಾಗೂ ಲೇಖಕಿ ಪರಿಧೇ ಸಿಂಗ್ ರಚಿತ 'ದಿ ಪಥ್' ಕೃತಿಯನ್ನು ಶುಕ್ರವಾರ ಉದ್ಯಮಿ ಅಶ್ವಿನಿ ರಂಜನ್ ಲೋಕಾರ್ಪಣೆಗೊಳಿಸಿದರು. ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಇಂದಿರಾ, ಮಹಿಳಾ ಉದ್ಯಮಿ ಶಶಿ ರಂಜನ್, ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಶುಭ ಸಂಜಯ್ ಅರಸ್ ಉಪಸ್ಥಿತರಿದ್ದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಇಂದಿರಾ ಮಾತನಾಡಿ, ಉತ್ತಮ ಸಹಕಾರ, ಪ್ರೋತ್ಸಾಹವಿದ್ದರೆ ಸಾಧನೆ ಸಾಧ್ಯ ಎಂಬುದಕ್ಕೆ ಲೇಖಕಿ ಪರಿಧೇ ಸಿಂಗ್ ಉದಾಹರಣೆಯಾಗಿದ್ದಾರೆ. ಏರ್ ಫೋರ್ಸ್‌ನಲ್ಲಿ ಸ್ಕ್ವಾಡ್ರನ್ ಲೀಡರ್ ಆಗಿ ಸೇವೆ ಸಲ್ಲಿಸಿ, ನಿವೃತ್ತಿ ನಂತರ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಅವರ ಕಾರ್ಯ ಚಟುವಟಿಕೆ ಸಾಹಿತ್ಯ ಪ್ರಿಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಓದು ಮತ್ತು ಬರವಣಿಗೆ ಅದ್ಭುತ ಹವ್ಯಾಸಗಳಲ್ಲಿ ಒಂದಾಗಿದೆ. ಪುಸ್ತಕಗಳು ನಮ್ಮಲ್ಲಿ ಹೊಸ ಚಿಂತನೆ ಸೃಷ್ಟಿಸಲಿದ್ದು, ಮೊಬೈಲ್, ತಂತ್ರಜ್ಞಾನದಲ್ಲಿಯೇ ಮುಳುಗುತ್ತಿರುವ ಯುವ ಪೀಳಿಗೆಗೆ ಓದು ಮತ್ತು ಬರವಣಿಗೆಯ ಮಹತ್ವವನ್ನು ತಿಳಿಸುವುದು ಅನಿವಾರ್ಯವಾಗಿದೆ. ಈ ಮೂಲಕ ಒಂದಷ್ಟು ಸಮಾಜಮುಖಿ ಬದಲಾವಣೆಗಳನ್ನು ತರಲು ಸಾಧ್ಯ ಅಲ್ಲದೆ ಉತ್ತಮ ಸಾಹಿತ್ಯವನ್ನು ಸೃಷ್ಟಿಸುವುದು ಬಹಳ ದೊಡ್ಡ ಸವಾಲಾಗಿದ್ದು, ನಮ್ಮ ಬರವಣಿಗೆಗಳು ಸಾಹಿತ್ಯದಿಂದ ಕೂಡಿರಬೇಕು ಎನ್ನುತ್ತಲೇ ಲೇಖಕಿ ಪರಿಧೇ ಸಿಂಗ್ ಅವರಿಗೆ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಕೊಳ್ಳುವಂತೆ ಶುಭಕೋರಿದರು.

ಬಳಿಕ ನಡೆದ ಸಂವಾದದಲ್ಲಿ ಕೃತಿ ರಚನೆ ಕುರಿತು ಮಾತನಾಡಿದ ಲೇಖಕಿ ಪರಿಧೇ ಸಿಂಗ್, ನನ್ನನ್ನು ನಾನೇ ಪ್ರಶ್ನೆಗಳನ್ನು ಕೇಳಿಕೊಂಡಾಗ ನನ್ನ ಮನಸ್ಸಿಗೆ ಹೊಳೆಯುವ ಪಾಠಗಳ ಸಂಗ್ರಹವಿದು. ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಬಗೆಹರಿಸುವ ಮಾರ್ಗಗಳು, ಕಾಡುವ ಪ್ರಶ್ನೆಗಳಿಗೆ ಉತ್ತರಗಳು ನಮ್ಮೊಳಗೆ ಇವೆ. ಪ್ರತಿದಿನ ನಾನು ಈ ಬರಹಗಳಿಂದ ಕಲಿಯುತ್ತೇನೆ. ಪ್ರತಿಯೊಬ್ಬರೂ ಅವುಗಳಿಂದ ಪ್ರಯೋಜನ ಪಡೆಯಬೇಕು ಎಂದು ನಾನು ಭಾವಿಸಿದೆ ಎಂದರು.

ಉದ್ಯಮಿ ಅಶ್ವಿನಿ ರಂಜನ್ ಸಂವಾದ ನಡೆಸಿಕೊಟ್ಟರು. ಮಹಿಳಾ ಉದ್ಯಮಿ ಶಶಿ ರಂಜನ್ ಉಪಸ್ಥಿತರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ
ಶನಿವಾರ 28 ಜೂನ್ 2025

# ಮೈಸೂರಿನಲ್ಲಿ ಕೆಂಪೇಗೌಡರ ಜಯಂತಿ ಅದ್ಧೂರಿ ಆಚರಣೆ

## ಸರ್ಕಾರದಿಂದ ಕೆಂಪೇಗೌಡ ಜಯಂತಿ ಆಚರಿಸಲು ಮೈಸೂರೇ ಮೂಲ ಕಾರಣ: ಶಾಸಕ ಜಿ.ಟಿ.ದೇವೇಗೌಡ



ಮೈಸೂರಿನ ಕಲಾಮಂದಿರಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಈ ವೇಳೆ ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ, ಶಾಸಕರಾದ ಕೆ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಟಿ.ಎಸ್.ಶ್ರೀವತ್ಸ, ಆಚರಣಾ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ, ಡಿಸಿ ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಡಾ.ಎಸ್.ಪಿ.ಯೋಗಣ್ಣ, ಜಿಪಂ ಸಿಇಒ ಎಸ್. ಯುಕೇಶ್ ಕುಮಾರ್ ಇತರರಿದ್ದಾರೆ.

- ಕೆಂಪೇಗೌಡ ಪ್ರಾಧಿಕಾರ ರಚನೆಗೂ ಮೈಸೂರೇ ಕಾರಣ
- ಕೆರೆ–ಕಟ್ಟೆ, ಪೇಟೆ, ದೇವಾಲಯ ನಿರ್ಮಿಸಿದ ನಾಡಪ್ರಭು
- 60 ವೀರಶೈವ ಮಠಗಳ ಸ್ಥಾಪನೆ
- ಕೊಡುಗೈ ದಾನಿಯಾಗಿದ್ದ ಕೆಂಪೇಗೌಡ ವಂಶಸ್ಥರು

ಮೈಸೂರು, ಜೂ.27(ಬಿಎಲ್‌ಯು)– ಸರ್ಕಾರದಿಂದ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ ಹಾಗೂ ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಮೈಸೂರು ಮೂಲ ಕಾರಣವಾಗಿದೆ ಎಂದು ಶಾಸಕ ಜಿ.ಟಿ. ದೇವೇಗೌಡರು ಮಾಹಿತಿ ನೀಡಿದರು.

ನಗರದ ಕಲಾಮಂದಿರದಲ್ಲಿ ಇಂದು ಕೆಂಪೇಗೌಡರ 516ನೇ ಜಯಂತೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 2015ರಲ್ಲಿ ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಅಂದು ನಡೆದ ಜಯಂತಿ ಸಮಾವೇಶದಲ್ಲಿ 60 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಕೆಂಪೇಗೌಡ ಜಯಂತಿ ದಿನದಂದು ರಜೆ ಘೋಷಣೆ ಬೇಡ. ಆದರೆ ಇನ್ನು ಮುಂದೆ ಸರ್ಕಾರವೇ ಕೆಂಪೇಗೌಡ ಜಯಂತಿ ಆಚರಣೆ ಮಾಡಬೇಕು ಎಂದು ಒಕ್ಕೊರಲಿನಿಂದ ಆಗ್ರಹ ಮಾಡಿದ್ದೆವು ಎಂದು ಹೇಳಿದರು.

ಅಂದು ಮೊಳಗಿದ ನಮ್ಮ ಸಮುದಾಯದ ಒಗ್ಗಟ್ಟಿನ ಘೋಷಣೆ ಪರಿಣಾಮವಾಗಿ ಸರ್ಕಾರವೇ ಕೆಂಪೇಗೌಡ ಜಯಂತಿ ಆಚರಣೆ ಮಾಡಲು ಅಧಿಕೃತ ಆದೇಶ ಹೊರಡಿಸಿತು. ತರುವಾಯ ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರ ಕೂಡ ರಚನೆ ಆಯಿತು. ಮೈಸೂರಿನಲ್ಲಿ ಅಂದು ನಡೆದ ಕಾರ್ಯಕ್ರಮದಿಂದ ಈ ಎರಡು ಕಾರ್ಯಕ್ರಮಗಳು ಸಾಕಾರಗೊಂಡವು. ಈ ಹಿನ್ನೆಲೆಯಲ್ಲಿ ಕೆಂಪೇಗೌಡ ಜಯಂತಿ ಹಾಗೂ ಪ್ರಾಧಿಕಾರ ರಚನೆಯಾಗಲು ಮೈಸೂರು ಮೂಲ ಕಾರಣವಾಯಿತು ಎಂದು ಜಿ.ಟಿ.ದೇವೇಗೌಡರು ಅದರ ಹಿನ್ನೆಲೆಯನ್ನು ವಿವರಿಸಿದರು.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೂಡ ಕೆಂಪೇಗೌಡ ಜಯಂತಿ ಆಚರಣೆ ಮಾಡಿದ್ದೆವು. ಈ ಮೂಲಕ ಕೆಂಪೇಗೌಡ ಜಯಂತಿ ಪ್ರತಿ ವರ್ಷ ತನ್ನ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಿದೆ ಎಂದು ಹೇಳಿದರು.

ನಾಡಪ್ರಭು ಕೆಂಪೇಗೌಡರು ಬೆಂಗಳೂರು ಮಾತ್ರವಲ್ಲದೆ ರಾಜ್ಯಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ. ಭಾರತದ ಇತಿಹಾಸದ ಪುಟದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೆಂಪೇಗೌಡರು ಬೆಂಗಳೂರಿನಲ್ಲಿ ಕೆರೆ, ಕಟ್ಟೆ, ದೇವಾಲಯ, ಪೇಟೆ ಅಥವಾ ಟೌನ್‌ಶಿಪ್‌ಗಳನ್ನು ನಿರ್ಮಾಣ ಮಾಡಿದರು. 60 ಕ್ಕೂ ಹೆಚ್ಚು ವೀರಶೈವ ಮಠಗಳನ್ನು ಸ್ಥಾಪಿಸಿದರು. ಪ್ರತಿಯೊಂದು ಜಾತಿಯವರನ್ನು ಸಮಾನರಾಗಿ ನೋಡುತ್ತಿದ್ದ ಕೆಂಪೇಗೌಡರು ನಗರದ ಅಭಿವೃದ್ಧಿ ಜೊತೆಗೆ ಉದ್ಯೋಗ ಸೃಷ್ಟಿ ಮಾಡಿದ್ದರು. ಇದರಿಂದ ಕೆಂಪೇಗೌಡರ ಕಾಲದಲ್ಲಿ ಜನರು ಸಮೃದ್ಧಿಯ ಬದುಕು ಕಟ್ಟಿಕೊಂಡಿದ್ದರು ಎಂದು ತಿಳಿಸಿದರು.

ಬೆಂಗಳೂರನ್ನು ಕಟ್ಟಿ ಬೆಳೆಸಿದ ಕೆಂಪೇಗೌಡರು ಮಾದರಿಯಾಗಿದ್ದಾರೆ. ಅವರು ಯೋಜನಾ ಬದ್ಧವಾಗಿ ನಿರ್ಮಾಣ ಮಾಡಿದ ಬೆಂಗಳೂರು ಇಂದು ವಿಶ್ವ ಭೂಪಟದಲ್ಲಿ ಪ್ರಖ್ಯಾತಿ ಪಡೆದಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರು ನಾಮಕರಣ ಮಾಡಲಾಗಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.



ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಕೆಂಪೇಗೌಡ ಜಯಂತಿಯ ವರ್ಣರಂಜಿತ ಮೆರವಣಿಗೆ ಸಾಗಿತು.

### ಸ್ಟೆಪ್ ಹಾಕಿದ ಜಿಟಿಡಿ, ಹರೀಶ್‌ಗೌಡ, ಮಂಜೇಗೌಡ

ಸಾಮಾನ್ಯವಾಗಿ ರಾಜಕಾರಣಿಗಳು, ಪಕ್ಷ ರಾಜಕಾರಣದ ಹಿನ್ನೆಲೆಯಲ್ಲಿ ಸಾಂದರ್ಭಿಕವಾಗಿ ಪರಸ್ಪರ ಟೀಕೆ–ಟಿಪ್ಪಣಿ ಮಾಡುತ್ತಾರೆ. ಉಳಿದಂತೆ ಬೆರೆತು ಬಾಳುತ್ತಾರೆ. ಇಂದು ನಡೆದ ಕೆಂಪೇಗೌಡರ ಜಯಂತಿ ಆಚರಣೆ ವೇಳೆ ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಜೆಪಿ ನಾಯಕರು ಸೌಹಾರ್ದತೆ ಪ್ರದರ್ಶಿಸಿದರು. ಮೆರವಣಿಗೆಯಲ್ಲಿ ಒಟ್ಟಿಗೆ ಡಾನ್ಸ್ ಮಾಡಿದರು.

ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ಮೆರವಣಿಗೆ ಚಾಮರಾಜ ಒಡೆಯರ್ ವೃತ್ತ ತಲುಪುತ್ತಿದ್ದಂತೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ ಸೇರಿದಂತೆ ಇತರರು ಚಂಡೆಮೇಳ, ಡೊಳ್ಳು ಕುಣಿತ ಸೇರಿದಂತೆ ಜಾನಪದ ಕಲಾತಂಡದೊಂದಿಗೆ ಹೆಜ್ಜೆ ಹಾಕಿದರು. ಕೆಲ ಕಾಲ ವಾದ್ಯದ ಸದ್ದಿಗೆ ಕುಣಿದು, ಸಂಭ್ರಮಪಟ್ಟರು. ಪಕ್ಷ ರಾಜಕಾರಣ ಮರೆತು ಎಲ್ಲರೂ ಕೆಂಪೇಗೌಡರ ಜಯಂತಿಯಲ್ಲಿ ಬೆರೆತು ಸಮಾರಂಭ ಯಶಸ್ವಿಗೊಳಿಸಿದರು.



ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ಶುಕ್ರವಾರ ಮೈಸೂರಿನ ತಿ.ನರಸೀಪುರ ರಸ್ತೆಯ ಆಲನಹಳ್ಳಿ ಸರ್ಕಲ್‌ನಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

# ರಾಜ್ಯಕ್ಕೆ ಒಕ್ಕಲಿಗ ಸಮುದಾಯದ ಕೊಡುಗೆ ಸ್ಮರಣೀಯ

ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಒಕ್ಕಲಿಗ ಸಮುದಾಯದ ಕೊಡುಗೆ ಸ್ಮರಣೀಯ ಎಂದು ಶಾಸಕ ಕೆ.ಹರೀಶ್ ಗೌಡ ಹೇಳಿದರು.

ನಾಡ ಪ್ರಭು ಕೆಂಪೇಗೌಡರು ಬೆಂಗಳೂರು ಕಟ್ಟಿದರೆ, ಒಕ್ಕಲಿಗ ಸಮುದಾಯದ ಮುಖ್ಯಮಂತ್ರಿ ಆಗಿದ್ದ ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ನಿರ್ಮಾಣ ಮಾಡಿದರು. ಪ್ರಾಯಶಃ ಇಂತಹ ಶಕ್ತಿ ಸೌಧ ಕಟ್ಟಡದ ಶೈಲಿ ಭಾರತದ ಯಾವುದೇ ರಾಜ್ಯದಲ್ಲೂ ಇಲ್ಲ ಎಂದು ಅತೀವ ಸಂತಸ ವ್ಯಕ್ತಪಡಿಸಿದರು.

ತರುವಾಯ ನಮ್ಮ ಸಮುದಾಯದವರೇ ಆದ ಎಸ್.ಎಂ.ಕೃಷ್ಣ ಅವರು ವಿಧಾನಸೌಧದ ಪಕ್ಕದಲ್ಲಿ ಅದೇ ಮಾದರಿಯಲ್ಲಿ ವಿಕಾಸ ಸೌಧ ನಿರ್ಮಾಣ ಮಾಡಿದರು. ಇನ್ನು ಭಾರತದ ಪ್ರಧಾನಿಯಾಗಿ ಹೆಚ್.ಡಿ.ದೇವೇಗೌಡರು ಕರ್ನಾಟಕ ಮಾತ್ರವಲ್ಲದೆ ದೇಶಾದ್ಯಂತ ನೆನಪಿನಲ್ಲಿ ಉಳಿಯುವಂತಹ ಬಹಳಷ್ಟು ಕೆಲಸ ಮಾಡಿದ್ದಾರೆ ಎಂದರು.

ಹಾಲಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡುತ್ತಿದ್ದು, ಈಗ ಬೆಂಗಳೂರಿನಲ್ಲಿ ಎಲಿವೇಟರ್ ರಸ್ತೆ ಮತ್ತು ಟನಲ್ ರಸ್ತೆ ನಿರ್ಮಾಣ ಮಾಡುತ್ತಿದ್ದಾರೆ. ಈ ಮೂಲಕ ಒಕ್ಕಲಿಗ ಸಮುದಾಯದವರು ಸಮಾಜಕ್ಕೆ ಬಹಳಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂದು ಹರೀಶ್‌ಗೌಡರು ತಿಳಿಸಿದರು.

ಇಂತಹ ಸಮಾಜದಲ್ಲಿ ಹುಟ್ಟಿರುವ ನಾವೇ ಧನ್ಯರು ಎಂದು ಹೇಳಿದ ಹರೀಶ್‌ಗೌಡರು, ಇಂದು ಸರ್ಕಾರ ಕೆಂಪೇಗೌಡ ಜಯಂತಿ ಆಚರಣೆ ಮಾಡುತ್ತಿರುವುದಕ್ಕೆ ಮೈಸೂರಿನ ಅಂದಿನ ಸಮಾವೇಶದ ಐತಿಹಾಸಿಕ ಕ್ಷಣವೇ ಕಾರಣ ಎಂದರು.

ಕೆಂಪೇಗೌಡರು ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಹತ್ತಾರು ಪೇಟೆ ನಿರ್ಮಾಣ ಮಾಡಿದ್ದಾರೆ. ಅವರ ಜಯಂತಿಯನ್ನು ಮತ್ತಷ್ಟು ಅದ್ದೂರಿಯಾಗಿ ಆಚರಣೆ ಮಾಡಬೇಕು. ಒಕ್ಕಲಿಗ ಸಮುದಾಯ ಹೆಚ್ಚಾಗಿರುವ ಮೈಸೂರಿನಲ್ಲಿ ಇನ್ನು ಮುಂದೆ ಮತ್ತಷ್ಟು ಜನರು ಸೇರಬೇಕು ಎಂದು ಹರೀಶ್‌ಗೌಡ ಕರೆ ನೀಡಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಈ ವೇಳೆ ಅಭಿನಂದಿಸಲಾಯಿತು. ಎಸ್‌ಎಸ್‌ಎಲ್ ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಶಾಸಕರಾದ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಯುಕೇಶ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಐಪಿಎಸ್ ಅಧಿಕಾರಿ ಪ್ರಕಾಶ್ ಗೌಡ, ಒಕ್ಕಲಿಗರ ಸಂಘದ ಪದಾಧಿಕಾರಿಗಳಾದ ಸಿ.ಜಿ.ಗಂಗಾಧರ್, ಬೋರೇಗೌಡ, ಮರಿಗೌಡ, ರವಿಗೌಡ, ಗಿರೀಶ್ ಗೌಡ, ಮಾಜಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ, ಕರ್ನಾಟಕ ಕಾವಲು ಪಡೆ ಅಧ್ಯಕ್ಷ ಮೋಹನ್ ಕುಮಾರ್ ಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ದಸರಾ ಮಾದರಿಯಲ್ಲಿ ಕೆಂಪೇಗೌಡರ ವರ್ಣರಂಜಿತ ಮೆರವಣಿಗೆ

ವಿಶ್ವ ವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿ ಮಾದರಿಯಲ್ಲಿ ಇಂದು ನಾಡಪ್ರಭು ಕೆಂಪೇಗೌಡ ಜಯಂತಿಯ ವರ್ಣರಂಜಿತ ಮೆರವಣಿಗೆ ನಡೆಯಿತು.

ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು, ಮೈಸೂರು ಅರಮನೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಸಾರೋಟಿನಲ್ಲಿದ್ದ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಹಾಗೂ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ಸಾಗಿದ ರಾಷ್ಟ್ರಕವಿ ಕುವೆಂಪು ಅವರ ಸ್ತಬ್ಧಚಿತ್ರ, ವಿವಿಧ ಪದವೀಧರರ ಸ್ತಬ್ಧಚಿತ್ರ, ರೈತಾಪಿ ವರ್ಗದವರ ಸ್ತಬ್ಧಚಿತ್ರ, ಎತ್ತಿನ ಗಾಡಿಗಳು ಅತ್ಯಾಕರ್ಷಿಸಿದವು. ಬಾಲಗಂಗಾಧರನಾಥ ಸ್ವಾಮೀಜಿ ಅವರ ಪ್ರತಿಮೆ ಇರುವ ಸಾರೋಟು ಕೂಡ ಮೆರವಣಿಗೆಯಲ್ಲಿ ಸಾಗಿತು.

ಬೆದರು ಬೊಂಬೆ, ಯಕ್ಷಗಾನ ವೇಷಧಾರಿಗಳು, ಹುಲಿ ವೇಷಧಾರಿ, ಆದಿ ಶಕ್ತಿ ಸ್ವರೂಪಿಣಿಯ ವೇಷಧಾರಿ, ಬ್ರಹ್ಮದೇವನ ವೇಷಧಾರಿಗಳು ಮೆರವಣಿಗೆಯಲ್ಲಿ ಗಮನ ಸೆಳೆದವು.

ವೀರಗಾಸೆ, ಡೊಳ್ಳು ಕುಣಿತ, ಚೆಂಡೆ ಮೇಳ, ಪೂಜಾ ಕುಣಿತ, ಮಂಗಳವಾದ್ಯ, ಇಂಗ್ಲಿಷ್ ಬ್ಯಾಂಡ್ ಸೇರಿದಂತೆ ಹಲವು ರೀತಿಯ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿತು.

ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ಮೆರವಣಿಗೆಯಲ್ಲಿ ನೂರಾರು ಜನರು ಸೇರಿದ್ದರು. ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಸ್ತೆ, ವಿನೋಬಾ ರಸ್ತೆ ಮೂಲಕ ಜಯಂತಿ ಸಮಾರಂಭ ನಡೆಯುತ್ತಿದ್ದ ಕಲಾಮಂದಿರ ತಲುಪಿತು.

# ಬೆಂಗಳೂರು ನಿರ್ಮಾಣಕ್ಕೆ ಕೆಂಪೇಗೌಡರ ಸೊಸೆ ಆತ್ಮಾರ್ಪಣೆ

ಬೆಂಗಳೂರು ಕೋಟೆಯ ದಕ್ಷಿಣ ಭಾಗದ ದಿಡ್ಡಿಬಾಗಿಲ ಭದ್ರ ಬುನಾದಿಗಾಗಿ ಕೆಂಪೇಗೌಡರ ಸೊಸೆ ಲಕ್ಷ್ಮಿದೇವಿ ಅವರು ಸ್ವತಃ ಆತ್ಮಾರ್ಪಣೆ ಮಾಡುವ ಮೂಲಕ ಬೆಂಗಳೂರು ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಶಾಸಕ ಜಿ.ಟಿ.ದೇವೇಗೌಡರು ಬೆಂಗಳೂರು ನಿರ್ಮಾಣಕ್ಕೆ ಕೆಂಪೇಗೌಡರು ಹಾಗೂ ಅವರ ಕುಟುಂಬದವರ ತ್ಯಾಗ, ಬಲಿದಾನವನ್ನು ಸ್ಮರಿಸಿದರು.

ಗಂಗರ ಕಾಲದಿಂದಲೂ ಕನ್ನಡ ನಾಡಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ವಿಜಯನಗರ ಸಾಮಂತರಾಗಿ ಯಲಹಂಕ ನಾಡಿನ ಚುಕ್ಕಾಣಿ ಹಿಡಿದು ಕೆಂಪೇಗೌಡರು ನೀಡಿರುವ ಕೊಡುಗೆ ಸ್ಮರಣೀಯವಾಗಿದೆ ಎಂದರು.

ಬೆಂಗಳೂರು ನಗರದ ಬೆಳವಣಿಗೆ ದೃಷ್ಟಿಯಿಂದ ಕೆಂಪೇಗೌಡರು ಬೆಳ್ಳಿ ಮಂಟಪ (ವಾಣಿಜ್ಯ ಮಂಟಪ), ಇಲ್ಲಂತೆ ಮಂಟಪ (ಆರೋಗ್ಯ ಮಂಟಪ), ನೆಡುಂಕಲ್ ಮಂಟಪ (ದೈವ ಮಂಟಪ) ಚೌಕಿಸ್ಥಾನ ಪಾವ ಮಂಟಪ (ನ್ಯಾಯ ಮಂಟಪ)ಗಳನ್ನು ಆಯಾ ಕ್ಷೇತ್ರಕ್ಕನುಗುಣವಾಗಿ ಪಂಚ ಗೋಪುರ ನಿರ್ಮಾಣ ಮಾಡಿದರು ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಬೆಂಗಳೂರು ಜನರ ಕುಡಿಯುವ ನೀರಿಗಾಗಿ ಕೆಂಪಾಂಬುದಿಕೆರೆ, ಗಿಡ್ಡೆಗೌಡರ ಕೆರೆ, ಕಾರಂಜಿ ಕೆರೆ, ಜಕ್ಕರಾಯನ ಕೆರೆ, ಕೆಂಪಾಂಪುರ ಅಗ್ರಹಾರದ ಕೆರೆ, ಮಾವಳ್ಳಿ ಸಿದ್ದಾಪುರ ಕೆರೆ ಸೇರಿದಂತೆ ನೂರಾರು ಕೆರೆ–ಕಟ್ಟೆ ನಿರ್ಮಾಣ ಮಾಡಿದ್ದರು ಎಂದು ತಿಳಿಸಿದರು.

ಇದಲ್ಲದೆ ಪ್ರಸಿದ್ಧ ಶ್ರೀ ಗವಿಗಂಗಾಧರೇಶ್ವರ ಗುಡಿ, ಶ್ರೀ ಬಸವೇಶ್ವರ ಗುಡಿ, ಶ್ರೀ ದೊಡ್ಡ ವಿಘ್ನೇಶ್ವರ ಗುಡಿ, ಶ್ರೀ ಹನುಮಂತ ದೇವರ ಗುಡಿ, ಚೆನ್ನಿಗರಾಯ ಸ್ವಾಮಿ ಗುಡಿಯನ್ನು ಕೆಂಪೇಗೌಡರು ನಿರ್ಮಾಣ ಮಾಡಿ ಜನರಲ್ಲಿದ್ದ ದೈವ ಭಾವ ಹೆಚ್ಚಿಸಿದರು ಎಂದರು.

ಜನರ ವೃತ್ತಿಗೆ ಅನುಗುಣವಾಗಿ ಬಿನ್ನಿಪೇಟೆ, ಚಿಕ್ಕಪೇಟೆ, ಬಳೆಪೇಟೆ, ಅಕ್ಕಿ ಪೇಟೆ, ಮಾಮೂಲ್ ಪೇಟೆ, ಗಾಣಿಗರ ಪೇಟೆ, ನಗರ್ತಪೇಟೆ, ಕಾಟನ್ ಪೇಟೆ, ಸುಲ್ತಾನ್ ಪೇಟೆ, ತಿಗಳರ ಪೇಟೆ, ಕುಂಬಾರ ಪೇಟೆ, ಗೊಲ್ಲರ ಪೇಟೆ ನಿರ್ಮಿಸಿ ವ್ಯಾಪಾರವನ್ನು ಉತ್ತೇಜಿಸಿದರು.

ಕೆಂಪೇಗೌಡ ವಂಶಸ್ಥರು ಗ್ರಾಮದ ಬ್ರಾಹ್ಮಣರಿಗೆ ಹೊಲ, ಗದ್ದೆ ಮತ್ತು ಮನೆಗಳನ್ನು ದಾನ ಮಾಡುವ ಮೂಲಕ ಕೊಡುಗೈ ದಾನಿಯಾಗಿದ್ದರು ಎಂದರು.

ಇದೇ ವೇಳೆ ಮಾತನಾಡಿದ ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು, ಬೆಂಗಳೂರನ್ನು ಇಂದು ಸಿಲಿಕಾನ್ ಸಿಟಿ ಎಂದು ಕರೆಯಲಾಗುತ್ತದೆ. ಕರ್ನಾಟಕದ ಸುಂದರ ನಗರವಾಗುವ ಮೂಲಕ ಆಧುನಿಕ ತಂತ್ರಜ್ಞಾನದ ಮುಖೇನ ಶೇಕಡ 60ರಷ್ಟು ಮಾಹಿತಿಯನ್ನು ಒಳಗೊಳ್ಳುವ ಮೂಲಕ ಎಲ್ಲವನ್ನು ನಿಭಾಯಿಸುವ ಶಕ್ತಿಯನ್ನು ಬೆಂಗಳೂರು ಹೊಂದಿದೆ ಎಂದರು.

ವಿಶ್ವದ ಎಲ್ಲಾ ಜನರು ಇಲ್ಲಿ ಜೀವನ ಮಾಡುತ್ತಿದ್ದು, ಅಂತಹ ವ್ಯವಸ್ಥೆಯನ್ನು ಕೆಂಪೇಗೌಡರು ಕಲ್ಪಿಸಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಸದ್ಗುಣವನ್ನು ಇಂದಿನ ಪೀಳಿಗೆಯ ಮಕ್ಕಳಿಗೆ ತಿಳಿಸಿ, ಅವರ ಆದರ್ಶ ಮೈಗೂಡಿಸಿಕೊಳ್ಳುವಂತೆ ಉತ್ತೇಜಿಸಬೇಕು ಎಂದು ಸಲಹೆ ನೀಡಿದರು.

ಸುಮಾರು 46 ವರ್ಷಗಳ ಕಾಲ ನಾಡನ್ನು ಆಳಿದ ಕೆಂಪೇಗೌಡರು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬದುಕಿ ಸರ್ವ ಜ್ಞಾನ ಪರಂಪರಾಗತವಾಗಿ ಬೆಳೆದರು ಎಂದು ಹೇಳಿದರು.



ನಾಡಪ್ರಭು ಕೆಂಪೇಗೌಡರ 516ನೇ ಜಯಂತೋತ್ಸವ ಪ್ರಯುಕ್ತ ಏರ್ಪಡಿಸಿದ್ದ ಮೆರವಣಿಗೆಯಲ್ಲಿ ಹೆಚ್.ಸಿ ಕೃಷ್ಣಕುಮಾರ್ ಸಾಗರ್, ಹೊಸಹುಂಡಿ ರಘು, ಅರುಣ್ ಕುಮಾರ್, ಕೃಷ್ಣ ಕುಪ್ಪೆಗಾಲ ಶ್ರೀನಿವಾಸ್, ಕೃಷ್ಣ ಜೆ.ಪಿ.ನಗರ ಇನ್ನಿತರರು ಪಾಲ್ಗೊಂಡಿದ್ದರು.

### ಹುಟ್ಟುಹಬ್ಬದ ಶುಭಾಶಯ



ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಸನ್ಮಾನಿಸಿ, ಶುಭ ಕೋರಿದರು. ಈ ವೇಳೆ ಕೆಪಿಸಿಸಿ ಒಬಿಸಿ ಕಾರ್ಯದರ್ಶಿ ಹರೀಶ್ ಮೊಗ್ಣಣ್ಣ, ಕಾಂಗ್ರೆಸ್ ಮುಖಂಡ ಸೌರಭ ಉಪಸ್ಥಿತರಿದ್ದರು.



ನಾಡಪ್ರಭು ಕೆಂಪೇಗೌಡರ ಜಯಂತಿಯ ಹಿನ್ನೆಲೆಯಲ್ಲಿ ಮೈಸೂರಿನ ಕುವೆಂಪುನಗರದ ರಾಷ್ಟ್ರಕವಿ ಕುವೆಂಪು ಪ್ರತಿಮೆಯ ಮುಂಭಾಗ ಕುವೆಂಪುನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೃಷ್ಣಕುಮಾರ್, ಪ್ರೊ ಚಂದ್ರಶೇಖರ್‌ಗೌಡ, ಕಾಂಗ್ರೆಸ್ ಮುಖಂಡರಾದ ರಮೇಶ್ ರಾಮಪ್ಪ, ಮಂಜೇಗೌಡ, ಮೋಹನ್.ಎಂ, ನಾರಾಯಣಸ್ವಾಮಿ, ದೇವೇಗೌಡ, ರಮೇಶ್, ಅಶ್ವಥ್ ನಾರಾಯಣ್, ನಾಗೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳೊಂದಿಗೆ ಶಾಸಕರಾದ ಜಿ.ಟಿ.ದೇವೇಗೌಡ, ಸಿ.ಎನ್.ಮಂಜೇಗೌಡ, ಕೆ.ಹರೀಶ್ ಗೌಡ ಹಾಗೂ ಇತರರು ವಾದ್ಯದ ಲಯಕ್ಕೆ ಹೆಜ್ಜೆ ಹಾಕಿ ಗಮನ ಸೆಳೆದರು.

ಮೈಸೂರು ಮಿತ್ರ ಶನಿವಾರ 28 ಜೂನ್ 2025

# ಕೆಂಪೇಗೌಡರಿಂದ ಬೆಂಗಳೂರಿಗೆ ಜಾಗತಿಕ ಮನ್ನಣೆ

## ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯ



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜೂ.27– ಅತೀ ಹೆಚ್ಚು ಜನ ಸಂದಣಿ ಹಾಗೂ ಅಭಿವೃದ್ಧಿ ಹೊಂದಿರುವ ನಗರ ಬೆಂಗಳೂರು. ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲು ನಾಡಪ್ರಭು ಕೆಂಪೇಗೌಡ ಕಾರಣ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಶುಕ್ರವಾರ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ 516ನೇ ಕೆಂಪೇಗೌಡರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನ ಪುಣ್ಯ ಪುರುಷರು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ಜಯಂತಿಯಂತಹ ಕಾರ್ಯಕ್ರಮ ರೂಪಿಸಿ ಮುಂದಿನ ಪೀಳಿಗೆಗೆ ತಿಳಿಸುವ ಕೆಲಸವಾಗುತ್ತಿದೆ ಎಂದರು.

500 ವರ್ಷಗಳ ಹಿಂದೆಯೇ ಕೆಂಪೇಗೌಡರು ದೂರದೃಷ್ಟಿ ಇಟ್ಟುಕೊಂಡು ಬೆಂಗಳೂರು ನಗರದಲ್ಲಿ ಕೆರೆಕಟ್ಟೆಗಳು, ದೇವಾಲಯಗಳನ್ನು ನಿರ್ಮಿಸಿದ್ದರು. ಪ್ರಸ್ತುತ ಹಳೇ ಮೈಸೂರು ಭಾಗ ಮತ್ತು ಬೆಂಗಳೂರು ಅಭಿವೃದ್ಧಿ ಹೊಂದಲು ಮೂಲ ಕಾರಣ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ನಾಡ ಪ್ರಭು ಕೆಂಪೇಗೌಡರು ಎಂದರು.

ಜಗಜ್ಯೋತಿ ಬಸವಣ್ಣ, ಕನಕದಾಸರು, ಕೆಂಪೇಗೌಡರಂತಹ ನಾಯಕರು ಕೆಲವೇ ಸಮುದಾಯಗಳಿಗೆ ಸೀಮಿತರಲ್ಲ. ಇವರೆಲ್ಲ ಜನಪರ ಕೆಲಸ ಮಾಡಿದವರು. ನಾಡಿನ ಅಭಿವೃದ್ಧಿಗೆ ಶ್ರಮಿಸಿದವರು ಎಂದರು.

ಮಂಡ್ಯ ಹಳೇ ಮೈಸೂರಿನ ಭಾಗಗಳಲ್ಲಿ ಶೈಕ್ಷಣಿಕ, ಆರೋಗ್ಯ, ಮೀಸಲಾತಿ ವಿಚಾರಗಳಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆಗಳನ್ನು ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ.

ನಾವು ಅವರು ನೀಡಿರುವ ಕೊಡುಗೆಗಳನ್ನು ಉಳಿಸಿಕೊಂಡು ಹೋಗಬೇಕಿದೆ. 100 ಕೋಟಿ ರೂ. ವೆಚ್ಚದಲ್ಲಿ ಶಿವಳ್ಳಿಯ ಕೃಷಿ ವಿವಿ ಅಭಿವೃದ್ಧಿಪಡಿಸಲಾಗುವುದು. ಮೈಶುಗರ್ ಕಾರ್ಖಾನೆಗೆ 25 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ. ಶೀಘ್ರ ಹಣ ಬಿಡುಗಡೆ ಮಾಡಲಿದ್ದಾರೆ ಎಂದರು.

ಜಿಲ್ಲೆಯಲ್ಲಿ 33 ಕೋಟಿ ವೆಚ್ಚದಲ್ಲಿ ಹೆದ್ದಾರಿಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ. ಮಂಡ್ಯ ಕೃಷಿ ಆಧಾರಿತ ಜಿಲ್ಲೆಯಾಗಿರುವುದರಿಂದ ಜಿಲ್ಲೆಯ ರೈತರಿಗೆ ಸಮರ್ಪಕವಾಗಿ ನೀರು ನೀಡಬೇಕೆಂಬ ಉದ್ದೇಶದಿಂದ ಮಂಡ್ಯ ಕ್ಷೇತ್ರದ ಎಲ್ಲಾ ಕಾಲುವೆಗಳ ಅಗಲೀಕರಣಕ್ಕೆ 300 ಕೋಟಿ ಅನುದಾನ ಬಿಡುಗಡೆಗೊಂಡಿದೆ. ಶೀಘ್ರ ಕೆಲಸ ಶುರು ಮಾಡುತ್ತೇವೆ ಎಂದು ಭರವಸೆ ನೀಡಿದರು.

ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ ಮಾತನಾಡಿ, ಕೆಂಪೇಗೌಡರು ಹಂಪಿಗೆ ಭೇಟಿ ನೀಡಿದ ಸಂದರ್ಭ ಹಂಪಿಯ ಆಡಳಿತ ವೈಖರಿ, ವೈಭವ ಕಂಡು ವಿಜಯನಗರ ಸಂಸ್ಥಾಪಕ ಶ್ರೀಕೃಷ್ಣದೇವ ರಾಯರ ಬಳಿ ಸಲಹೆ ಪಡೆದು ನಾನು ಇತಂಹ ಒಂದು ನಗರ ಕಟ್ಟಬೇಕೆಂದು ಬೆಂಗಳೂರನ್ನು ಆಯ್ಕೆ ಮಾಡಿಕೊಂಡು ದೇವಾಲಯ, ಕೆರೆಕಟ್ಟೆಗಳನ್ನು ನಿರ್ಮಿಸಿದರು ಎಂದರು.

ಅಂದು ಕೆಂಪೇಗೌಡರು ಬೆಂಗಳೂರನ್ನು ನಿರ್ಮಿಸದೆ ಹೋಗಿದ್ದರೆ ಇಂದು ಕರ್ನಾಟಕದ ರಾಜಧಾನಿಯಾಗಿ ಬೆಂಗಳೂರು ಹೊರಹೊಮ್ಮುತ್ತಿರಲಿಲ್ಲ. ಐಟಿ–ಬಿಟಿ ಕ್ಷೇತ್ರದಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿರಲಿಲ್ಲ ಎಂದು ಹೇಳಿದರು.

ನಂತರ ಬೆಂಗಳೂರಿನ ವಿವೇಕಾನಂದ ಪದವಿ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಡಾ.ಬಿ.ಪಾಂಡು ಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಇದೇ ವೇಳೆ ಯುಪಿಎಸ್‌ಸಿಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ ಜಿಲ್ಲೆಯ ಮೊಡಚಾಕನಹಳ್ಳಿಯ ಎಂ.ಆರ್.ನಿಖಿಲ್ ಹಾಗೂ ಹಳೆಬೂದನೂರಿನ ಮನೋಜ್ ಹೆಚ್.ಪಿ ಅವರಿಗೆ ಮತ್ತು ಇತರೆ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಗೌರವಿಸಿ ಸನ್ಮಾನಿಸಲಾಯಿತು.

**ಮೆರವಣಿಗೆ:** ಕಾರ್ಯಕ್ರಮಕ್ಕೂ ಮುನ್ನ ವರ್ಣರಂಜಿತ ರಥದ ಮೇಲೆ ಇರಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಜಿಲ್ಲಾಧಿಕಾರಿ ಡಾ. ಕುಮಾರ ಹಾಗೂ ಪುರುಷೋತ್ತಮಾನಂದನಾಥ ಸ್ವಾಮೀಜಿಗಳು ನಗಾರಿ ಬಾರಿಸುವ ಮೂಲಕ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿದರು. ಪೂರ್ಣಕುಂಭ ಹೊತ್ತ ಮಹಿಳೆಯರು, ಕಹಳೆ, ಡೊಳ್ಳು ಕುಣಿತದೊಂದಿಗೆ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ಮೈಸೂರು–ಬೆಂಗಳೂರು ಹೆದ್ದಾರಿ ಮೂಲಕ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದವರೆಗೂ ಮೆರವಣಿಗೆ ತಲುಪಿತು.

ಸಭೆಯಲ್ಲಿ ಮುಡಾ ಅಧ್ಯಕ್ಷ ನಯೀಮ್, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ನಗರಸಭೆ ಉಪಾಧ್ಯಕ್ಷ ಅರುಣ್ ಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಒ ಕೆ.ಆರ್.ನಂದಿನಿ, ಅಪರ ಜಿಲ್ಲಾಧಿಕಾರಿ ಬಿಸಿ.ಶಿವಾನಂದ ಮೂರ್ತಿ, ಎಸಿ ಶಿವಮೂರ್ತಿ, ರೆಡ್‌ಕ್ರಾಸ್ ಸಂಸ್ಥೆಯ ಮೀರಾ ಶಿವಲಿಂಗಯ್ಯ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಜಯರಾಮ್ ಸೇರಿದಂತೆ ಇನ್ನಿತರಿದ್ದರು.

> ಬೆಂಗಳೂರು ಕಟ್ಟಿದ ನಾಯಕ ಕೆಂಪೇಗೌಡರು 500 ವರ್ಷಗಳ ಹಿಂದೆಯೇ ಬೆಂಗಳೂರು ನಗರಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಬೆಂಗಳೂರು ನಿರ್ಮಾಣವಾದ ನಂತರ ಬಹಳಷ್ಟು ಜನರು ಉದ್ಯೋಗ ಪಡೆದು ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಕಳೆದ 2 ವರ್ಷಗಳಿಂದ ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಜಿಲ್ಲಾ ಉಸ್ತುವಾರಿ ಸಚಿವರು 4 ಸಾವಿರ ಕೋಟಿ ಅನುದಾನ ಬಿಡುಗಡೆಗೊಳಿಸಿದ್ದಾರೆ. ಮಂಡ್ಯ ಅಭಿವೃದ್ಧಿಗೆ ಸಹಕರಿಸುತ್ತಿರುವ ಚೆಲುವರಾಯಸ್ವಾಮಿ ಅವರನ್ನು ಮಂಡ್ಯದ ನಿರ್ಮಾತೃ ಎಂದರೆ ತಪ್ಪಾಗಲಾರದು.
> –ಪಿ.ರವಿಕುಮಾರ್ ಗಣಿಗ, ಶಾಸಕ

## ಪೊಲೀಸ್ ಠಾಣೆ ಕ್ಯಾತನಹಳ್ಳಿಗೆ ವರ್ಗ ಖಂಡಿಸಿ

# ಇಂದು ಚಿನಕುರಳಿ ಬಂದ್

ಚಿನಕುರಳಿ, ಜೂ.27– ಪಾಂಡವಪುರ ತಾಲೂಕಿನ ಚಿನಕುರಳಿ ಹೋಬಳಿ ಕೇಂದ್ರಕ್ಕೆ ಮಂಜೂರಾಗಿದ್ದ ಪೊಲೀಸ್ ಠಾಣೆಯನ್ನು ಕ್ಯಾತನಹಳ್ಳಿಗೆ ಮರು ಹಂಚಿಕೆ ಮಾಡಿರುವ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ನಡೆ ಖಂಡಿಸಿ ಶನಿವಾರ ಚಿನಕುರಳಿ ಗ್ರಾಮದ ಬಂದ್‌ಗೆ ಕರೆ ನೀಡಲಾಗಿದೆ.

ಚಿನಕುರಳಿಗೆ ಮಂಜೂರಾಗಿದ್ದ ಠಾಣೆಯನ್ನು ಸಚಿವರು ಉದ್ದೇಶಪೂರ್ವಕವಾಗಿ ಕ್ಯಾತನಹಳ್ಳಿಗೆ ಮಂಜೂರು ಮಾಡಿಸಿದ್ದಾರೆ. ಅಲ್ಲದೇ ಚಿನಕುರಳಿ ಮೇಲೆ ಹಾದು ಹೋಗುವ ಮೈಸೂರು– ಶಿವಮೊಗ್ಗ ರಸ್ತೆ ಗುಂಡಿ ಬಿದ್ದಿದ್ದು, ಇದುವರೆಗೂ ದುರಸ್ತಿಗೊಳಿಸದ ಕ್ರಮ ಖಂಡಿಸಿ ಶನಿವಾರ ಬೆಳಗ್ಗೆ 10 ಗಂಟೆಗೆ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದು, ಗ್ರಾಮದ ಅಂಗಡಿ ಮುಗ್ಗಟ್ಟುಗಳು, ಹೋಬಳಿ ಕೇಂದ್ರದ ಲಾರಿ, ಆಟೋ ಸಂಘಟನೆಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಬಂದ್‌ಗೆ ಬೆಂಬಲ ನೀಡಬೇಕೆಂದು ಚಿನಕುರಳಿ ಹೋಬಳಿ ಹಿತರಕ್ಷಣಾ ಸಮಿತಿ ಮನವಿ ಮಾಡಿದೆ.

**ಮಂಜೂರಾಗಿದ್ದ ಠಾಣೆ ಕ್ಯಾತನಹಳ್ಳಿಗೆ:** ಇತ್ತೀಚೆಗೆ ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಚಿನಕುರಳಿ ಹೋಬಳಿ ಕೇಂದ್ರಕ್ಕೆ ಪೊಲೀಸ್ ಠಾಣೆ ಮಂಜೂರು ಮಾಡಿಸಿದ್ದರು. ಅಲ್ಲದೇ ಮೈಸೂರು– ಶಿವಮೊಗ್ಗ ಹೆದ್ದಾರಿಯಲ್ಲಿರುವ ಚಿನಕುರಳಿ ಹೋಬಳಿ ಕೇಂದ್ರವು ಪೊಲೀಸ್ ಔಟ್ ಪೋಸ್ಟ್ ಕಟ್ಟಡ ಹೊಂದಿದ್ದು, ಇದನ್ನು ಉನ್ನತೀಕರಿಸಿ, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಠಾಣೆ ನಿರ್ಮಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು.

ಆದರೆ ಸಚಿವ ಚಲುವರಾಯಸ್ವಾಮಿ ಈ ಆದೇಶವನ್ನು ಸುಬಂಧುಪಟ್ಟವರಿಂದ ರದ್ದುಪಡಿಸಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸ್ವಗ್ರಾಮ ಕ್ಯಾತನಹಳ್ಳಿಗೆ ಮಂಜೂರು ಮಾಡಿಸಿದ್ದಾರೆ. ಕ್ಯಾತನಹಳ್ಳಿಗೆ ಠಾಣೆ ಮಂಜೂರಾಗಿರುವುದಕ್ಕೆ ವಿರೋಧವಿಲ್ಲ. ಆದರೆ ಚಿನಕುರಳಿಗೆ ಮಂಜೂರಾಗಿದ್ದ ಠಾಣೆಯನ್ನು ಕ್ಯಾತನಹಳ್ಳಿಗೆ ಕೊಂಡೊಯ್ದಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದೆ.

ಕ್ಯಾತನಹಳ್ಳಿಯಿಂದ ಕೆಆರ್‌ಎಸ್ ಪೊಲೀಸ್ ಠಾಣೆ ಕೇವಲ ಮೂರ್‍ನಾಲ್ಕು ಕಿಲೋ ಮೀಟರ್ ಇದ್ದು, ಅತ್ತ ಶ್ರೀರಂಗಪಟ್ಟಣ ಠಾಣೆ 6 ಕಿಮೀ, ಪಾಂಡವಪುರ ಠಾಣೆ 4 ಕಿಮೀ ಇದೆ ಆದರೆ ಚಿನಕುರಳಿ ಗ್ರಾಮಕ್ಕೆ ಯಾವುದೇ ಠಾಣೆ ಕನಿಷ್ಟ 10 ಕಿಲೋ ಮೀಟರ್ ದೂರವಿದೆ. ಈ ನಿಟ್ಟಿನಲ್ಲಿ ಹೋಬಳಿ ಕೇಂದ್ರ ಚಿನಕುರಳಿ ರಾಜ್ಯ ಹೆದ್ದಾರಿ ಹೊಂದಿದ್ದು, ಪಾಂಡವಪುರ ತಾಲೂಕು ಕೇಂದ್ರದಿಂದ 14 ಕಿಲೋ ಮೀಟರ್ ದೂರವಿದೆ. ಜೊತೆಗೆ ಹೋಬಳಿ ಕೇಂದ್ರವಾಗಿದ್ದು, 15 ಸಾವಿರ ಜನಸಂಖ್ಯೆ ಹೊಂದಿದೆ. ಇಲ್ಲಿಗೆ ಠಾಣೆ ಬೇಕೆಂದು ಜನ ಮನವಿ ಮಾಡಿದ್ದಾರೆ.

## ಜೂ.30ಕ್ಕೆ ಕೆಆರ್‌ಎಸ್‌ಗೆ ಸಿಎಂ ಬಾಗಿನ



ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ಮಂಡ್ಯ, ಜೂ.27– ಜಿಲ್ಲೆಯ ರೈತರ ಜೀವನಾಡಿ ಕೃಷ್ಣರಾಜಸಾಗರ ಜಲಾಶಯ ಭರ್ತಿಯಾಗುತ್ತಿದ್ದು, ಜೂ.30ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಗಿನ ಅರ್ಪಿಸಲಿದ್ದಾರೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶುಕ್ರವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಮುಖ್ಯಮಂತ್ರಿಗಳು ಜೂ.30 ರಂದು ಬೆಳಗ್ಗೆ 10.30ರ ಬಳಿಕ ಕೆಆರ್‌ಎಸ್‌ಗೆ ಆಗಮಿಸಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಲಿದ್ದಾರೆ. ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದ ಅವರು, ವೇದಿಕೆ, ಸಾರ್ವಜನಿಕರಿಗೆ ಆಸನದ ವ್ಯವಸ್ಥೆ, ಭದ್ರತಾ ವ್ಯವಸ್ಥೆಯಲ್ಲಿ ಯಾವುದೇ ಲೋಪ ಉಂಟಾಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಿ ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಒ ಕೆ.ಆರ್.ನಂದಿನಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಕಾ.ನೀ.ನಿ.ನಿ ಅಧೀಕ್ಷಕ ಅಭಿಯಂತರ ರಘುರಾಮ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಮೊದಲ ಆಷಾಢ ಶುಕ್ರವಾರ: ವಿಶೇಷ ಪೂಜೆ



ಭಾರತೀನಗರ, ಜೂ.27– ಮೊದಲ ಆಷಾಢ ಶುಕ್ರವಾರದ ಅಂಗವಾಗಿ ಶ್ರೀಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಜರುಗಿತು.

ಭಾರತೀನಗರದ ಸುತ್ತಮುತ್ತಲ ನೂರಾರು ಭಕ್ತರು ಮೊದಲ ಆಷಾಢ ಶುಕ್ರವಾರದ ಅಂಗವಾಗಿ ನಿಂಬೆಹಣ್ಣಿನ ಆರತಿ, ಬೆಲ್ಲದ ಆರತಿ ಬೆಳಗಿಸಿ ಶ್ರೀಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥ ನೆರವೇರಲೆಂದು ಪ್ರಾರ್ಥಿಸಿದರು.

## ಚಿನಕುರಳಿ ಗ್ರಾಪಂನಲ್ಲಿ ಕೆಂಪೇಗೌಡ ಜಯಂತಿ



ಚಿನಕುರಳಿ ಗ್ರಾಪಂನಲ್ಲಿ ಕೆಂಪೇಗೌಡ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷೆ ಧನಲಕ್ಷ್ಮಿ ವಸಂತ್‌ಕುಮಾರ್, ಮನ್‌ಮುಲ್ ನಿರ್ದೇಶಕ ಹಾಗೂ ಗ್ರಾಪಂ ಸದಸ್ಯ ಸಿ.ಶಿವಕುಮಾರ್, ಪಿಡಿಒ ಆರತಿ ಕುಮಾರಿ ಸೇರಿದಂತೆ ಎಲ್ಲಾ ಸದಸ್ಯರು ಹಾಗೂ ಗ್ರಾಮದ ಮುಖಂಡರು ಹಾಜರಿದ್ದರು.

## ಅಕ್ರಮ ಗಾಂಜಾ ಸಾಗಾಟ: ಮೂವರ ಬಂಧನ



ಅಬಕಾರಿ ಪೊಲೀಸರು ಮಾಲು ಸಮೇತ ಆರೋಪಿಗಳನ್ನು ಬಂಧಿಸಿರುವುದು.

ಕೆ.ಆರ್.ಪೇಟೆ, ಜೂ.27– ಗಾಂಜಾ ಸಾಗಿಸುತ್ತಿದ್ದ ಮೂವರು ಆರೋಪಿಗಳನ್ನು ಅಬಕಾರಿ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ ಮಾಲು ಸಮೇತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪಾಂಡವಪುರದ ಉಮ್ರಾಜ್ ಬೇಗ್ ಅಲಿಯಾಸ್ ಮಜುನು, ಜಬಿವುಲ್ಲಾ ಅಬ್ದುಲ್ ರಹೀಮ್, ಚನ್ನರಾಯಪಟ್ಟಣದ ಸೈಯದ್ ಹುಸೇನ್ ಅಲಿಯಾಸ್ ತೌಫಿಕ್ ಸೈಯದ್ ಆಸೀಫ್ ಉಲ್ಲಾ ಬಂಧಿತ ಆರೋಪಿಗಳು. ಇವರಿಂದ 3.5 ಕೆಜಿ ಒಣ ಗಾಂಜಾ ಹಾಗೂ ಬೈಕ್ (ಟಿಎನ್ 20, ಬಿಟಿ9160) ವಶಪಡಿಸಿಕೊಳ್ಳಲಾಗಿದೆ.

ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ಬಸವರಾಜ್ ಹಡಪದ ಹಾಗೂ ಅಬಕಾರಿ ಉಪ ಆಯುಕ್ತ ಡಾ.ಆರ್.ನಾಗಶಯನ ಅವರ ನಿರ್ದೇಶನದ ಮೇರೆಗೆ ಅಬಕಾರಿ ಉಪ ಅಧೀಕ್ಷಕಿ ರಾಧಾಮಣಿ ಅವರ ನೇತೃತ್ವದಲ್ಲಿ ಪಾಂಡವಪುರ ವಿಭಾಗದ ಅಬಕಾರಿ ನಿರೀಕ್ಷಕ ವೈ.ಜೆ.ಪ್ರಫುಲ್ಲಾಚಂದ್ರ, ಕೆ.ಆರ್.ಪೇಟೆ ಅಬಕಾರಿ ಅಧಿಕಾರಿ ದೀಪಕ್ ಸೇರಿದಂತೆ ಸಿಬ್ಬಂದಿ ತಮಗೆ ಬಂದ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ತಾಲೂಕಿನ ಚಿಕ್ಕೋನಹಳ್ಳಿ ಹೌಸಿಂಗ್ ಬೋರ್ಡ್ ಬಡಾವಣೆ ಮುಂಭಾಗದ ಮುಖ್ಯ ರಸ್ತೆಯಲ್ಲಿ ಆರೋಪಿಗಳನ್ನು ವಶಕ್ಕೆ ಪಡೆದು ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಬಳಿಕ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಅಬಕಾರಿ ಸಿಬ್ಬಂದಿಗಳಾದ ಹೆಚ್.ವಿ.ರಾಮು, ಪಿ.ಜಿ.ದಿಲೀಪ್ ಕುಮಾರ್, ಎನ್.ದಿನೇಶ್, ಜಿ.ಎನ್.ಸಂದೀಪ್, ಮುಖ್ಯಪೇದೆ ವೈರಮುಡಿ, ಎಂ.ಜಿ.ನಾಗರಾಜು, ಸಂದೀಪ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಮೂರನೇ ಪುಟದಿಂದ

## ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ

(ಎನ್‌ಟಿಸಿಎ) ಪ್ರತಿನಿಧಿಗಳು, ವನ್ಯಜೀವಿ ತಜ್ಞರು ಸ್ಥಳಕ್ಕೆ ಆಗಮಿಸಿದ್ದಾರೆ. ಮರಣೋತ್ತರ ಪರೀಕ್ಷೆಯನ್ನು ನಿಯಮಾನುಸಾರ ನಡೆಸಲಾಗಿದ್ದು, ಹುಲಿಗಳ ಅಂತ್ಯ ಸಂಸ್ಕಾರ ಮಾಡಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಅರಣ್ಯ ಸಿಬ್ಬಂದಿ ವೇತನ ವಿಚಾರ:** ಹೊರಗುತ್ತಿಗೆಯ ಮುಂಚೂಣಿ ಅರಣ್ಯ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಆಗದಿರುವ ಬಗ್ಗೆ ವರದಿ ಇದೆ. ಈ ಬಗ್ಗೆಯೂ ತನಿಖೆ ನಡೆಸಿ, ಮುಂಚೂಣಿ ಸಿಬ್ಬಂದಿಗೆ ಸಕಾಲದಲ್ಲಿ ವೇತನ ಪಾವತಿಗೆ ಕ್ರಮವಹಿಸಲಾಗುವುದು. ಹುಲಿಗಳ ಸಾವಿನ ಪ್ರಕರಣದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ತನಿಖೆಯಿಂದ ಕಂಡು ಬಂದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

**ವಿಷ ಪ್ರಾಶನದಿಂದಲೇ ಸಾವು:** ವಿಷ ಪ್ರಾಶನದಿಂದಲೇ ಐದು ಹುಲಿಗಳು ಸಾವಿಗೀಡಾಗಿವೆ ಎಂದು ಚಾಮರಾಜನಗರ ವೃತ್ತದ ಸಿಸಿಎಫ್ ಟಿ.ಹೀರಾಲಾಲ್ ಸಹ ಸ್ಪಷ್ಟಪಡಿಸಿದ್ದಾರೆ. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಸುವಿನ ಕಳೇಬರಕ್ಕೆ ವಿಷ ಹಾಕಲಾಗಿದೆ. ಅವುಗಳನ್ನು ತಿಂದು 8 ವರ್ಷದ ತಾಯಿ ಹುಲಿ ಹಾಗೂ, 10 ತಿಂಗಳ ನಾಲ್ಕು ಮರಿಗಳು ಮೃತಪಟ್ಟಿವೆ. ಯಾವ ವಿಷ, ಎಷ್ಟು ಪ್ರಮಾಣದಲ್ಲಿ ಹಾಕಿದ್ದಾರೆಂದು ಪ್ರಯೋಗಾಲಯದ ವರದಿ ಬಂದ ಬಳಿಕ ಗೊತ್ತಾಗಲಿದೆ ಎಂದರು.

ಹಸುವನ್ನು ಹುಲಿ ಬೇಟೆಯಾಡಿದ ಮೇಲೆ ವಿಷ ಹಾಕಲಾಗಿದೆಯೇ ಇಲ್ಲ ಮೊದಲೇ ವಿಷ ಪ್ರಾಶನ ಮಾಡಲಾಗಿತ್ತಾ ಎಂದು ಲ್ಯಾಬ್ ವರದಿಯಲ್ಲಿ ತಿಳಿಯುತ್ತದೆ. ಹಸುವಿನ ಕಳೇಬರ ಪರಿಶೀಲಿಸಿದಾಗ ಹುಲಿ ಅದರ ಹಿಂಬದಿಗೆ ದಾಳಿ ಮಾಡಿದೆ. ಹುಲಿ ಮತ್ತು ಹಸುವಿನ ಅಂಗಾಂಗಗಳ ಸ್ಯಾಂಪಲ್ ಅನ್ನು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು.

ಹುಲಿಗಳ ಸಾವು ಎರಡು ಅಥವಾ ಮೂರು ದಿನದ ಹಿಂದೆ ಸಂಭವಿಸಿದೆ. ಇದಕ್ಕೆ ಯಾರು ಹೊಣೆಗಾರರು ಎಂದು ಇಲಾಖಾ ಮಟ್ಟದಲ್ಲಿ ತನಿಖೆ ನಡೆಸಲಾಗುತ್ತದೆ. ವಾಚರ್‌ಗಳಿಗೆ ಸಂಬಳ ತಡವಾಗಿದೆ ಎಂಬುದಕ್ಕೆ ಗಸ್ತು ಮಾಡಿಲ್ಲ ಎಂಬ ಆರೋಪಗಳು ಇವೆ. ಎಲ್ಲದರ ಬಗ್ಗೆಯೂ ತನಿಖೆ ಮಾಡುತ್ತೇವೆ. ಈಗ ಹಸು ಯಾರದ್ದು ಎಂದು ಸಹ ತನಿಖೆ ಮಾಡುತ್ತಿದ್ದೇವೆ. ಈ ಹಿಂದೆ ತಮಿಳುನಾಡಿನಿಂದ ಹಸುಗಳನ್ನು ತಂದು ಮಾರಾಟ ಮಾಡುತ್ತಾರೆ ಎಂದು ಹಲವರು ದೂರು ನೀಡಿದ್ದಾರೆ. ಈ ಹಸು ತಮಿಳುನಾಡಿನಿಂದ ಬಂದಿರುವುದಾ ಅಥವಾ ಸ್ಥಳೀಯರಿಗೆ ಸೇರಿದ ಹಸುವಾ ಎಂದು ತನಿಖೆ ನಡೆಸುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

**ಆರ್‌ಎಫ್‌ಓ ಹೊಣೆಗಾರ:** ಐದು ಹುಲಿಗಳ ಸಾವಿಗೆ ವಿಷ ಪ್ರಾಶನವೇ ಕಾರಣ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ ಎಂದು ಶಾಸಕ ಮಂಜುನಾಥ್ ತಿಳಿಸಿದ್ದಾರೆ.

ವಿಷಯುಕ್ತ ಹಸುವಿನ ಮಾಂಸ ಸೇವಿಸಿ ಹುಲಿಗಳು ಮೃತಪಟ್ಟಿವೆ. ಹುಲಿ ಸತ್ತು ಮೂರು ದಿನವಾದರೂ ಅಧಿಕಾರಿಗಳ ಅರಿವಿಗೆ ಬಂದಿಲ್ಲ. ಈ ಕುರಿತು ತನಿಖೆ ನಡೆಯುತ್ತಿದೆ. ಸ್ಥಳೀಯ ಆರ್‌ಎಫ್‌ಓ ಇದರ ಹೊಣೆ ಹೊರಬೇಕು. ಹಸುವಿನ ಮಾಲೀಕರು ಯಾರು ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದೆ. ಸ್ಥಳೀಯವಾಗಿ ಕಾಡು ಪ್ರಾಣಿಗಳು ಹಾಗೂ ಮಾನವ ಸಂಘರ್ಷ ಮೊದಲಿನಿಂದಲೂ ಇದೆ. ಸಾಕಷ್ಟು ಸಮಸ್ಯೆಗಳು ಇವೆ. ಇದರ ಬಗ್ಗೆಯೂ ಚರ್ಚೆ ಮಾಡುತ್ತೇವೆ. ಇಲ್ಲಿ ಯಾರನ್ನು ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ. ಯಾರೇ ತಪ್ಪು ಮಾಡಿದರೂ ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ.

**ಅಂತ್ಯಕ್ರಿಯೆ:** ಹುಲಿಗಳ ಮರಣೋತ್ತರ ಪರೀಕ್ಷೆ ಬಳಿಕ ಎಲ್ಲಾ ಹುಲಿಗಳ ಕಳೇಬರವನ್ನು ನಿಯಮಾನುಸಾರ ಸುಡಲಾಯಿತು. ಈ ಸಂದರ್ಭದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಹನೂರು ಶಾಸಕ ಮಂಜುನಾಥ್, ಉನ್ನತ ಮಟ್ಟದ ತನಿಖಾ ಸಮಿತಿ ಸದಸ್ಯರು, ಮಹದೇಶ್ವರ ವನ್ಯಧಾಮದ ಡಿಸಿಎಫ್ ವೈಚಿತ್ರ ಪಾಣಿ, ಹನೂರು ಉಪ ವಲಯದ ಎಸಿಎಫ್ ಗಜಾನನ ಹೆಗಡೆ, ಹೂಗ್ಯಂ ಆರ್‌ಎಫ್‌ಓ ಮಾದೇಶ್ ಇನ್ನಿತರರು ಉಪಸ್ಥಿತರಿದ್ದರು.

## ಶಾಸಕರಿಗೆ ತಲಾ 50 ಕೋಟಿ!

ನೀಡಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಜುಲೈ ಮೊದಲ ವಾರದಲ್ಲಿ ಹಣ ಬಿಡುಗಡೆ ಮಾಡಲು ಈ ಮೊದಲು ಮುಖ್ಯಮಂತ್ರಿ ನಿರ್ಧರಿಸಿದ್ದರು. ಆದರೆ, ದಿನದಿಂದ ದಿನಕ್ಕೆ ಶಾಸಕರು ಸಾರ್ವಜನಿಕವಾಗಿ ಅಪಸ್ವರ ಎತ್ತುತ್ತಿರುವ ಹಿನ್ನೆಲೆಯಲ್ಲಿ ತಕ್ಷಣವೇ ಹಣ ಬಿಡುಗಡೆಗೆ ಆದೇಶಿಸಿದರು.

ಕ್ಷೇತ್ರಗಳಲ್ಲಿ ಒಂದು ಚರಂಡಿ ನಿರ್ಮಿಸುವ ಶಕ್ತಿಯೂ ನಮಗೆ ಇಲ್ಲ. ಸರ್ಕಾರದಿಂದ ಯಾವುದೇ ಅಭಿವೃದ್ಧಿಗೆ ಹಣ ಬಿಡುಗಡೆ ಆಗುತ್ತಿಲ್ಲ. ಅಲ್ಲದೆ, ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಆಡಳಿತ ಪಕ್ಷಕ್ಕೆ ಸೇರಿದ ಹಿರಿಯ ಶಾಸಕರುಗಳೇ ಅಸಮಾಧಾನ ವ್ಯಕ್ತಪಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

## ಸಚಿವ ರಾಜಣ್ಣನ ಮಾತು ಲೆಕ್ಕಕ್ಕೆ ಇಟ್ಟುಕೊಳ್ಳಬೇಡಿ!

### ಪಕ್ಷದ ಭಿನ್ನಾಭಿಪ್ರಾಯ ಇದೆ; ಆಂತರಿಕ ಜಗಳವಿಲ್ಲ: ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು, ಜೂ.27(ಕೆಎಂಶಿ)–ಪಕ್ಷದಲ್ಲಿ ಸಣ್ಣ–ಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ ಆಂತರಿಕ ಜಗಳ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಕೆಲವು ಸಚಿವರು ಕಳೆದ ಬುಧವಾರ ನೀಡಿದ್ದ ಹೇಳಿಕೆ ಗಮನದಲ್ಲಿಟ್ಟುಕೊಂಡು, ಅದರಲ್ಲೂ ಕೆಎನ್.ರಾಜಣ್ಣ ಅವರ ಹೇಳಿಕೆಯನ್ನು ನಿರ್ಲಕ್ಷಿಸಿ ಎಂದು ಮಾಧ್ಯಮದವರಿಗೆ ತಿಳಿಸಿದ್ದಾರೆ. ರಾಜಣ್ಣ ಅವರು ರಾಜ್ಯ ರಾಜಕೀಯದಲ್ಲಿ ಕೆಲವು ಬೆಳವಣಿಗೆಗಳು ಆಗಬಹುದೆಂಬುದಾಗಿ ಹೇಳಿದ್ದಾರೆಯೇ ಹೊರತು, ಹೀಗೇ ಆಗುತ್ತದೆ ಎಂದು ಹೇಳಿಲ್ಲವಲ್ಲ ಎಂದರು. ಅವರ ಹೇಳಿಕೆಯನ್ನು ಯಾವ ರೀತಿಯೂ ಅರ್ಥೈಸಿಕೊಳ್ಳದೆ ನಿರ್ಲಕ್ಷಿಸಿ ಎಂದಿದ್ದಾರೆ.

# ಮೊದಲ ಆಷಾಢ ಶುಕ್ರವಾರ: ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ



### ಸ್ವಯಂ ಸೇವಕರ ಕಿರಿಕಿರಿ

ಖಾಸಗಿ ಕಂಪನಿಯೊಂದರ ಪ್ರಾಯೋಜಕತ್ವದಲ್ಲಿ ನೀಡಿದ್ದ ಟಿ–ಶರ್ಟ್ ಧರಿಸಿದ್ದ ಸ್ವಯಂ ಸೇವಕರು ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯದಲ್ಲಿ ಬೀಡು ಬಿಟ್ಟಿದ್ದು, ಭಕ್ತರಿಗೆ ಇರಿಸು–ಮುರಿಸು ತರಿಸಿತು. ಅದರಲ್ಲೂ ದೇವಾಲಯದ ಪ್ರಾಂಗಣ ಪ್ರವೇಶಿಸುತ್ತಿದ್ದಂತೆಯೇ ಬೌನ್ಸರ್‌ನಂತೆ ಕಂಡು ಬರುತ್ತಿದ್ದ 3–4 ಮಂದಿ ಭದ್ರತಾ ಸಿಬ್ಬಂದಿ ಭಕ್ತರ ಮೇಲೆ ದರ್ಪ ಪ್ರದರ್ಶಿಸುತ್ತಿದ್ದರು ಎಂದು ದೂರಲಾಗಿದೆ. ಮುಂದಿನ ಬಾರಿ ಸ್ವಯಂ ಸೇವಕರ ಸಂಖ್ಯೆ ಮಿತಗೊಳಿಸಬೇಕೆಂದು ಭಕ್ತರು ಒತ್ತಾಯಿಸಿದ್ದಾರೆ.

ದೇವಾಲಯದ ಮುಂದೆ ಸರದಿ ಸಾಲಿನಲ್ಲಿ ಬೀಡು ಬಿಟ್ಟಿದ್ದರು. ಅಲ್ಲದೆ, ಮುಂಜಾನೆ 5 ಗಂಟೆಯಿಂದ ಲಲಿತ ಮಹಲ್ ಪ್ಯಾಲೇಸ್ ಮೈದಾನ ಹಾಗೂ ನಗರ ಸಾರಿಗೆ ಬಸ್ ನಿಲ್ದಾಣದಿಂದ ಬೆಟ್ಟಕ್ಕೆ ಬಸ್ ಸಂಚಾರ ಆರಂಭವಾಯಿತು. ಮುಂಜಾನೆ 5.30ಕ್ಕೆ ದೇವಾಲಯದ ಬಾಗಿಲು ತೆರೆದು ದರ್ಶನಕ್ಕೆ ಅವಕಾಶ ನೀಡಲಾಯಿತು.

**ಭಕ್ತರ ನಾಲ್ಕು ಲೈನ್:** ದೇವಾಲಯ ಪ್ರವೇಶಕ್ಕೆ ನಾಲ್ಕು ಪ್ರತ್ಯೇಕ ಸರದಿ ಸಾಲು ವ್ಯವಸ್ಥೆ ಮಾಡಲಾಗಿತ್ತು. ಧರ್ಮ ದರ್ಶನ, 300 ರೂ, 2 ಸಾವಿರ ರೂ. ಟಿಕೆಟ್ ಪಡೆದವರಿಗೆ ಹಾಗೂ ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಬಂದ ಭಕ್ತರಿಗೆ ದೇವಾಲಯ ಪ್ರವೇಶಿಸಲು ಪ್ರತ್ಯೇಕ ಸಾಲಿನ ವ್ಯವಸ್ಥೆ ಮಾಡಲಾಗಿತ್ತು. ಲಲಿತಮಹಲ್ ಮೈದಾನದಿಂದ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಬೆಟ್ಟಕ್ಕೆ ಆಗಮಿಸಿದ ಭಕ್ತರನ್ನು ಪಾರ್ಕಿಂಗ್ ಸ್ಥಳದಲ್ಲಿಯೇ ಬೇರ್ಪಡಿಸುವ ವ್ಯವಸ್ಥೆ ಮಾಡಲಾಗಿತ್ತು. ಧರ್ಮ ದರ್ಶನಕ್ಕಾಗಿ ಬರುವ ಭಕ್ತರಿದ್ದ ಬಸ್‌ಗಳನ್ನು ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದ ಪ್ರವೇಶ ದ್ವಾರದ ಬಳಿ ನಿಲ್ಲಿಸಿ, ಅಲ್ಲಿ ಬ್ಯಾರಿಕೇಡ್ ಅಳವಡಿಸಿ ಸರದಿ ಸಾಲಲ್ಲಿ ತೆರಳುವಂತೆ ವ್ಯವಸ್ಥೆ ಮಾಡಲಾಗಿತ್ತು. 300 ರೂ. ಟಿಕೆಟ್ ಪಡೆದ ಭಕ್ತರು ಬೆಟ್ಟದ ಬಸ್ ನಿಲ್ದಾಣದಿಂದ ಆರಂಭವಾಗುವ ಸಾಲು ಹಾಗೂ 2 ಸಾವಿರ ರೂ. ಟಿಕೆಟ್ ಪಡೆದ ಭಕ್ತರು ಮಹಿಷಾಸುರ ಪ್ರತಿಮೆ ಬಳಿಯಿಂದ ಆರಂಭವಾಗುವ ಸಾಲಿನಲ್ಲಿ ದೇವಾಲಯಕ್ಕೆ ತೆರಳಿ ದರ್ಶನ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿತ್ತು.

**ಮೆಟ್ಟಿಲುಗಳಲ್ಲಿ ಜನ ಜಂಗುಳಿ:** ಮೆಟ್ಟಿಲುಗಳ ಮೂಲಕ ಚಾಮುಂಡಿಬೆಟ್ಟಕ್ಕೆ ಬರುವ ಭಕ್ತರ ಸಂಖ್ಯೆಯೂ ಹೆಚ್ಚಾಗಿತ್ತು. ಅಪಾರ ಸಂಖ್ಯೆಯ ಭಕ್ತರು ಮೆಟ್ಟಿಲು ಮಾರ್ಗದಲ್ಲಿಯೇ ಬೆಟ್ಟಕ್ಕೆ ಆಗಮಿಸಿದ್ದರಿಂದ ದೇವಾಲಯದ ಸಾಲಿನಲ್ಲಿ ಜಂಗುಳಿ ಹೆಚ್ಚಾಗಿತ್ತು. ಇದುವರೆಗೂ ಮೆಟ್ಟಿಲುಗಳ ಮೂಲಕ ಬರುವ ಭಕ್ತರು ಧರ್ಮ ದರ್ಶನ ಅಥವಾ 300 ರೂ. ಟಿಕೆಟ್ ಪಡೆದ ಭಕ್ತರ ಸಾಲಿಗೆ ಸೇರಿಕೊಳ್ಳಬಹುದಿತ್ತು. ಆದರೆ, ಈ ಬಾರಿ ಮೆಟ್ಟಿಲುಗಳ ಮೂಲಕ ಬಂದ ಭಕ್ತರಿಗಾಗಿಯೇ ಪ್ರತ್ಯೇಕ ಸಾಲು ವ್ಯವಸ್ಥೆ ಮಾಡಲಾಗಿತ್ತಾದರೂ, ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ದರ್ಶನ ಪಡೆಯಲು ಗಂಟೆಗಟ್ಟಲೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.


**ಕಟ್ಟುನಿಟ್ಟಿನ ವ್ಯವಸ್ಥೆ:** ಇದೇ ಮೊದಲ ಬಾರಿಗೆ ಭಕ್ತರು ದೇವಾಲಯ ಪ್ರವೇಶಿಸಲು ಕಟ್ಟುನಿಟ್ಟಿನ ಬ್ಯಾರಿಕೇಡ್ ವ್ಯವಸ್ಥೆ ಮಾಡಿದ್ದರಿಂದ ಬೆಟ್ಟದಲ್ಲಿ ಎಲ್ಲೆಡೆ ಒತ್ತಡಕ್ಕೆ ಕಡಿವಾಣ ಹಾಕಿದಂತಾಗಿತ್ತು. ಬಸ್‌ನಲ್ಲಿ, ಮೆಟ್ಟಿಲುಗಳ ಮೂಲಕ ಬಂದ ಭಕ್ತರು ಪ್ರತ್ಯೇಕ ಸರದಿ ಸಾಲಿನಲ್ಲಿಯೇ ಹೋಗುವಂತೆ ವ್ಯವಸ್ಥೆ ಮಾಡಿದ್ದರಿಂದ ದೇವಾಲಯದ ಮುಂಭಾಗ ಭಕ್ತರು ಜಮಾಯಿಸುವುದಕ್ಕೆ ಅವಕಾಶವಿರಲಿಲ್ಲ. ಬೆಳಗ್ಗೆ ಸರದಿ ಸಾಲಿನಲ್ಲಿ ನಿಂತಿದ್ದ ಕೆಲವು ಭಕ್ತರು ಬ್ಯಾರಿಕೇಡ್ ಮೇಲೆ ಹತ್ತಲು ಪ್ರಯತ್ನಿಸಿದ್ದನ್ನು ಹೊರತುಪಡಿಸಿದರೆ, ಉಳಿದಂತೆ ಅಪಾರ ಸಂಖ್ಯೆಯ ಭಕ್ತರು ಯಾವುದೇ ಗೊಂದಲವಿಲ್ಲದೆ ದೇವಿ ದರ್ಶನ ಪಡೆದು, ವಾಪಸ್ಸಾದರು.

**ಪೊಲೀಸ್ ಭದ್ರತೆ:** ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಬೆಟ್ಟದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಲಲಿತಮಹಲ್ ಪ್ಯಾಲೇಸ್ ಪಾರ್ಕಿಂಗ್ ಸ್ಥಳದಿಂದಲೂ ಬೆಟ್ಟದ ರಸ್ತೆಯ ಮಾರ್ಗದುದ್ದಕ್ಕೂ ಭದ್ರತೆಗೆ ಪೊಲೀಸರನ್ನು ನಿಯೋಜಿಸಲಾಗಿತ್ತು. ಬೆಟ್ಟದಲ್ಲಿ ಭಕ್ತರು ತೆರಳುವ ಸಾಲಿನ ಬಳಿಯೂ ಹೆಚ್ಚುವರಿ ಪೊಲೀಸರನ್ನು ನೇಮಿಸಲಾಗಿತ್ತು.

**ಮುತ್ತೈದೆಯರಿಗೆ ಮಡಿಲಕ್ಕಿ:** ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಇದೇ ಮೊದಲ ಬಾರಿಗೆ ಮಡಿಲಕ್ಕಿ ವಿತರಿಸಲಾಯಿತು. ದರ್ಶನ ಮುಗಿಸಿ ಬಂದ ಮಹಿಳೆಯರಿಗೆ ಕುಂಕುಮದೊಂದಿಗೆ ಮಡಿಲಕ್ಕಿ ಪೊಟ್ಟಣ ನೀಡಲಾಯಿತು. ಅದರಲ್ಲಿ ಒಂದು ರವಿಕೆ, ಹಸಿರು ಬಳೆ, ಬಿಚ್ಚಾಲೆ ಸೇರಿದಂತೆ ಇನ್ನಿತರ ವಸ್ತುಗಳಿದ್ದವು.

### ಅನ್ನ ದಾಸೋಹ

ಇದೇ ಮೊದಲ ಬಾರಿಗೆ ಭಕ್ತರಿಗೆ ಪ್ರಾಧಿಕಾರದ ವತಿಯಿಂದಲೇ ಪ್ರಸಾದ ವಿನಿಯೋಗಿಸುವ ವ್ಯವಸ್ಥೆ ಮಾಡಲಾಗಿತ್ತು. ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದ ಎದುರಿನ ಮೈದಾನದಲ್ಲಿ ಕೌಂಟರ್ ತೆರೆದು ರೈಸ್ ಬಾತ್, ಮೊಸರನ್ನ ವಿತರಿಸಲಾಯಿತು. ಪ್ರಸಾದ ಸೇವಿಸುವವರಿಗೆ ಪೆಂಡಾಲ್ ಹಾಕಿ ಕುಳಿತುಕೊಳ್ಳಲು ಚೇರ್ ಹಾಕಲಾಗಿತ್ತಾದರೂ ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ಮಾಡಿದ್ದ ವ್ಯವಸ್ಥೆ ಸಾಲದಾಗಿತ್ತು. ಈ ಹಿಂದಿನ ವರ್ಷದಂತೆ ಭಕ್ತರಿಗೆ ಅನ್ನ, ಸಾಂಬರ್, ಸಿಹಿ ತಿನಿಸನ್ನು ಬಡಿಸಲು ಭಕ್ತರು ಆಗ್ರಹಿಸಿದರು. ಅಲ್ಲದೆ, ಚಾಮುಂಡೇಶ್ವರಿ ಸೇವಾ ಸಮಿತಿಗಾದರೂ ಅನ್ನ ದಾಸೋಹಕ್ಕೆ ಅವಕಾಶ ನೀಡುವಂತೆಯೂ ಕೆಲವರು ಒತ್ತಾಯಿಸಿದ್ದಾರೆ.



### ಚಾಮುಂಡೇಶ್ವರಿ ಭಕ್ತರ ಅಳಲು...

## ಕುಡಿಯಲು ನೀರಿಲ್ಲ; ಮೆಟ್ಟಿಲು ಹತ್ತಿ ಬಂದವರಿಗೆ ಧರ್ಮ ದರ್ಶನ ಬರೀ ಓಳು!

ಮೈಸೂರು, ಜೂ.27(ಎಂಕೆ)– ಆಷಾಢ ಮಾಸದ ಮೊದಲ ಶುಕ್ರವಾರ ನಾಡ ಅಧಿದೇವತೆ ಚಾಮುಂಡೇಶ್ವರಿ ದರ್ಶನಕ್ಕೆ ತಂಡೋಪ ತಂಡವಾಗಿ ಧಾವಿಸಿದ ಭಕ್ತರು ಕುಡಿಯಲು ನೀರು, ಶೌಚಾಲಯ ವ್ಯವಸ್ಥೆ ಇಲ್ಲದೆ ಪರದಾಡುವಂತಾಯಿತು.

ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಶಕ್ತಿದೇವಿಯ ವಿಶೇಷ ಪೂಜಾ ಮಹೋತ್ಸವದ ದರ್ಶನಕ್ಕೆ ಆಗಮಿಸಿದ ಭಕ್ತರು, ನೂಕು ನುಗ್ಗಲಿನ ನಡುವೆ ಗಂಟೆಗಟ್ಟಲೇ ಕ್ಯೂನಲ್ಲಿ ನಿಂತು ಬಾಯಾರಿಕೆಯಿಂದ ಬಳಲುವಂತಾಯಿತಲ್ಲದೆ ಶೌಚಾಲಯ ವ್ಯವಸ್ಥೆ ಇಲ್ಲದೆ ಪೇಚಾಡುವಂತಾಯಿತು. ಮೆಟ್ಟಿಲು ಹತ್ತಿ ಬರುವ ಭಕ್ತಾಧಿಗಳಿಗೆ ಧರ್ಮ ದರ್ಶನಕ್ಕೆ ಅವಕಾಶ ನೀಡುತ್ತೇವೆ ಎಂದೇಳಿ ಐದಾರು ಗಂಟೆ ಕ್ಯೂನಲ್ಲಿ ನಿಲ್ಲಿಸಿದ್ದಾರೆ. ಒಮ್ಮೆ ಕ್ಯೂನಲ್ಲಿ ಸಿಲುಕಿದರೆ ಶೌಚಾಲಯಕ್ಕೆ ಹೋಗಲು ಸಾಧ್ಯವಿಲ್ಲ. ಕುಡಿಯಲು ನೀರಿಲ್ಲ. ಉಸಿರುಗಟ್ಟಿಸುವ ವಾತಾವರಣ ನಿರ್ಮಿಸಲಾಗಿದೆ ಎಂದು ಭಕ್ತಾಧಿಗಳು ತೀವ್ರ ಅಸಮಾಧಾನ ಹೊರಹಾಕಿದ್ದಾರೆ. ಈ ವರ್ಷ ತಾಯಿಯ ದರ್ಶನ ವ್ಯವಸ್ಥೆಯಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದೆ. ವಿಐಪಿಗಳು 2 ಸಾವಿರ ಕೊಟ್ಟು ಟಿಕೆಟ್ ಖರೀದಿಸದೆ ಶಿಫಾರಸ್ಸಿನ ಮೇಲೆ ಪುಕ್ಕಟ್ಟೆ ದರ್ಶನ ಪಡೆಯುತ್ತಿದ್ದಾರೆ. 300 ರೂ. ಟಿಕೆಟ್ ಕ್ಯೂನಲ್ಲಿಯೂ ಐದಾರು ಗಂಟೆ ನಿಲ್ಲಬೇಕು. ಬೆಟ್ಟ ಹತ್ತಿ ಸುಸ್ತಾಗಿ ಬಂದವರಿಗೆ ಕುಡಿಯಲು ನೀರಿಲ್ಲ. ಶೌಚಾಲಯವಿಲ್ಲ. ಒಟ್ಟಾರೆ ಸರ್ಕಾರ ದೇವರ ಹೆಸರಿನಲ್ಲಿ ಸುಲಿಗೆ ನಡೆಯುತ್ತಿದೆ ಎಂದು ಕಿಡಿಕಾರಿದ್ದಾರೆ.

## 2 ಸಾವಿರ ರೂ. ಟಿಕೆಟ್‌ಗೆ ಉತ್ತಮ ಪ್ರತಿಕ್ರಿಯೆ

ಆಷಾಢ ಮಾಸದ ವಿಶೇಷ ದರ್ಶನಕ್ಕೆ ಪ್ರಾಧಿಕಾರ ಪ್ರಕಟಿಸಿದ್ದ 2 ಸಾವಿರ ಟಿಕೆಟ್ ವ್ಯವಸ್ಥೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಲಲಿತಮಹಲ್ ಪ್ಯಾಲೆಸ್ ಮೈದಾನದಲ್ಲಿಯೇ ಟಿಕೆಟ್ ಕೌಂಟರ್ ತೆರೆಯಲಾಗಿತ್ತು. ಟಿಕೆಟ್ ಖರೀದಿಸಿದ ಭಕ್ತರಿಗೆ ಐರಾವತ ಮಲ್ಟಿ ಆ್ಯಕ್ಸೆಲ್ ಎಸಿ ಬಸ್‌ನಲ್ಲಿಯೇ ಬೆಟ್ಟಕ್ಕೆ ಕರೆತಂದು ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ಮಹಿಷಾ ಪ್ರತಿಮೆ ಬಳಿಯಿಂದ ದೇವಾಲಯದವರೆಗೂ ಸರಾಗವಾಗಿ ಬಂದ ಭಕ್ತರು ದೇವಾಲಯದ ಬಳಿಯಿಂದ ಅರ್ಧ ಗಂಟೆಯೊಳಗೆ ದರ್ಶನ ಪಡೆಯುತ್ತಿದ್ದರು. ಒಟ್ಟು 10 ಐರಾವತ ಬಸ್ ವ್ಯವಸ್ಥೆ ಮಾಡಲಾಗಿತ್ತು.








# ಕೆಂಪೇಗೌಡರ ಕನಸು ನನಸು ಮಾಡ್ತೇವೆ


**• ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾನ • ನಾಡ ಪ್ರಭು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮೂಲಕ ಗೌರವ ಸಮರ್ಪಣೆ**

ಬೆಂಗಳೂರು, ಜೂ.27(ಕೆಎಂಶಿ)–ನಾಡಪ್ರಭು ಕೆಂಪೇಗೌಡ ದಕ್ಷ ಹಾಗೂ ದೂರದೃಷ್ಟಿಯ ಆಡಳಿತಗಾರ, ಆಧುನಿಕ ಬೆಂಗಳೂರು ನಿರ್ಮಾಣಕ್ಕೆ ಅಡಿಪಾಯ ಹಾಕಿದವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಮರಿಸಿದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಗುರುತಿಸುವಂತಾಗಲು ನಾಡಪ್ರಭು ಕೆಂಪೇಗೌಡರೇ ಕಾರಣ ಎಂದರು.

ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ವಿಧಾನಸೌಧದ ಪೂರ್ವ ದಿಕ್ಕಿನಲ್ಲಿರುವ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ಚರ್ಚಿಸಿ ಕೆಂಪೇಗೌಡರ ಜನ್ಮ ದಿನಾಂಕ ತಿಳಿದು, ಸರ್ಕಾರ ನಿರಂತರವಾಗಿ ಕೆಂಪೇಗೌಡ ಜಯಂತಿ ಆಚರಣೆ ಮಾಡುತ್ತಿದೆ ಎಂದರು.

ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ ಗೋಪುರಗಳನ್ನು ಕಟ್ಟಿಸಿ, ವೃತ್ತಿ ಆಧಾರಿತ ಪ್ರದೇಶಗಳನ್ನು ಗುರುತಿಸಿ ನಗರತ್ ಪೇಟೆ, ಚಿಕ್ಕಪೇಟೆ, ಬಳೆಪೇಟೆ ಸೇರಿದಂತೆ ಅನೇಕ ಪೇಟೆಗಳನ್ನು ನಿರ್ಮಿಸಿದರು. ಕೆಂಪೇಗೌಡರ ಆಡಳಿತ ನಮಗೆಲ್ಲ ಮಾದರಿಯಾಗಿದೆ. ಬೆಂಗಳೂರು ಅಭಿವೃದ್ಧಿ ಕನಸು ನನಸು ಮಾಡುವ ಕಾರ್ಯ ನಮ್ಮ ಸರ್ಕಾರ ಮಾಡುತ್ತಿದೆ ಎಂದರು.

**ಕೆಂಪೇಗೌಡರು ಕಟ್ಟಿದ ಬೆಂಗಳೂರು ದೇಶ–ವಿದೇಶಿಯರಿಗೆ ನೆಲೆಯಾಯ್ತು:** ಇದೇ ಸಂದರ್ಭದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ನಾಡಪ್ರಭು ಕೆಂಪೇಗೌಡ ಪ್ರತಿಮೆ, ಬಿಬಿಎಂಪಿ ಕಚೇರಿ ಮುಂಭಾಗದ ಪ್ರತಿಮೆ ಹಾಗೂ ವಿಧಾನಸೌಧ ಆವರಣದಲ್ಲಿನ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಸ್ಥಳೀಯ ವಾತಾವರಣ ಮನಗಂಡು ಕೆಂಪೇಗೌಡರು ಬೆಂಗಳೂರು ಕಟ್ಟದಿದ್ದರೆ, ನಾವು–ನೀವು ಇಲ್ಲಿ ಇರುತ್ತಿರಲಿಲ್ಲ. ಈ ನಗರ ಕಟ್ಟಿದ ಪರಿಣಾಮ ರಾಜ್ಯ, ದೇಶ ಹಾಗೂ ವಿದೇಶಗಳ



ಜನರು ಇಲ್ಲಿ ಆಶ್ರಯ ಪಡೆಯುತ್ತಿದ್ದಾರೆ ಎಂದರು.

ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕಾಲದಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಆರಂಭಿಸಿದಾಗ, ನಗರಾಭಿವೃದ್ಧಿ ಸಚಿವ ನಾಗಿ ಹಾಕಿದ ಕೊನೆ ಸಹಿ ಈ ವಿಮಾನ ನಿಲ್ದಾಣ ಎಂದು ಮೆಲುಕು ಹಾಕಿದರು. ಕೆಂಪೇಗೌಡ ಪ್ರಶಸ್ತಿ ಈ ವರ್ಷ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೂ ಲಭಿಸಿದ್ದು, ಅಭಿನಂದನೆಗಳು. ಕೆಂಪೇಗೌಡ ಥೀಮ್ ಪಾರ್ಕ್ ಯೋಜನೆ ಜವಾಬ್ದಾರಿಯನ್ನು, ಸಚಿವ ಕೃಷ್ಣಬೈರೇ ಗೌಡ ವಹಿಸಿಕೊಂಡಿದ್ದು, ಮುಂದಿನ 3–4 ತಿಂಗಳಲ್ಲಿ ಅಂತಿಮ ರೂಪ ನೀಡಲಾಗುವುದು ಎಂದರು.

ಕೆಂಪೇಗೌಡ ಜಯಂತಿ ಆಚರಣೆ ಆರಂಭಿಸಿದ್ದು ನಾವೇ, ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿದ್ದು ನಾವೇ, 5 ಎಕರೆ ಜಾಗವನ್ನೂ ನೀಡಿದ್ದೇವೆ ಎಂದು ಸಮರ್ಥಿಸಿಕೊಂಡರು. ಸೆಪ್ಟೆಂಬರ್‌ನಲ್ಲಿ ಕ್ರಾಂತಿಯಾಗ ಲಿದೆ. ಸರ್ಕಾರದಲ್ಲಿ ಪವರ್ ಸೆಂಟರ್ ಜಾಸ್ತಿಯಾಗಿವೆ ಎಂಬ ಸಚಿವ ಕೆ.ಎನ್.ರಾಜಣ್ಣ ಹೇಳಿಕೆ ವಿಚಾರ ನನಗೆ ಗೊತ್ತಿಲ್ಲ, ಅವರನ್ನೇ ಕೇಳಿ, ಅವರೊಂದಿಗೆ ಚರ್ಚಿಸಿದ ನಂತರ ಪ್ರತಿಕ್ರಿಯೆ ನೀಡುತ್ತೇನೆ ಎಂದರು.

# ವರುಣದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ಹುಟ್ಟುಹಬ್ಬ ಆಚರಣೆ



ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಸೇವಾದಳ ಹಾಗೂ ಯಂಗ್ ಬ್ರಿಗೇಡ್ ಸೇವಾದಳದ ವತಿಯಿಂದ ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಹುಟ್ಟುಹಬ್ಬವನ್ನು ವರುಣ ಗ್ರಾಮದಲ್ಲಿ ವಿವಿಧ ಸಮಾಜ ಸೇವಾ ಕಾರ್ಯದ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು, ಜೂ.27– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿಯ ಸೇವಾದಳ ಹಾಗೂ ಯಂಗ್ ಬ್ರಿಗೇಡ್ ಸೇವಾದಳದ ವತಿಯಿಂದ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ಹುಟ್ಟುಹಬ್ಬವನ್ನು ವರುಣ ಗ್ರಾಮದಲ್ಲಿ ವಿವಿಧ ಸಮಾಜ ಸೇವಾ ಕಾರ್ಯದ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಸಜ್ಜನ ರಾಜಕಾರಣಿಗಳ ಪೈಕಿ ಯತೀಂದ್ರ ಅವರು ಮೊದಲನೇ ಸ್ಥಾನದಲ್ಲಿ ನಿಂತಿದ್ದಾರೆ. ತತ್ವ ಸಿದ್ಧಾಂತ ಮತ್ತು ನೈತಿಕತೆಯ ರಾಜಕಾರಣಕ್ಕೆ ಒತ್ತುಕೊಟ್ಟು ತಂದೆಯಂತೆ ರಾಜಕಾರಣ ಮಾಡುತ್ತಿದ್ದಾರೆ ಎಂದರು. ಹಿಂದೆ ರಾಕೇಶ್ ಸಿದ್ದರಾಮಯ್ಯ ಅವರ ಎಲ್ಲ ವಿಚಾರಗಳಲ್ಲೂ ಜೊತೆಯಲ್ಲಿ ನಿಂತು ನಾನು ಕೆಲಸ ಕಾರ್ಯಗಳನ್ನು ಮಾಡಿದ್ದೇನೆ. ದುರ್ದೈವ ಈಗ ಅವರು ನಮ್ಮೊಡನೆ ಇಲ್ಲ. ಬಹಳಷ್ಟು ವರ್ಷಗಳಿಂದ ನಾನು ತಂದೆ ಹಾಗೂ ಅವರ ಮಕ್ಕಳ ಜೊತೆ ಕೆಲಸ ಮಾಡಿದ್ದೇನೆ. ಕೊನೆ ಮಗ ಡಾ ಯತೀಂದ್ರ ಸಿದ್ದರಾಮಯ್ಯ ಅವರು ತಂದೆಯಂತೆ ಸಜ್ಜನಿಕೆಯ ರಾಜಕಾರಣಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಅವರು ವೈದ್ಯರಾದರೂ ಆ ವೃತ್ತಿಯನ್ನು ಬಿಟ್ಟು ಜನಸೇವೆ ಮಾಡಬೇಕೆಂದು ತನ್ನ ತಂದೆಯ ಜೊತೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರನ್ನು ಹಿಂದಿನ ಚುನಾವಣೆಯಲ್ಲಿ ಸೋಲಿಸಬೇಕೆಂದು ರಾಷ್ಟ್ರಮಟ್ಟದಲ್ಲಿ ಕುತಂತ್ರಗಳು ನಡೆದರೂ ಕೂಡ ಅವರನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಜೊತೆಯಲ್ಲಿ ಹಣದ ರಾಜಕಾರಣ ವರುಣ ಕ್ಷೇತ್ರದಲ್ಲಿ ನಡೆಯೋದಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ದೇಶಕ್ಕೆ ರವಾನಿಸಿದ ಕೀರ್ತಿ ವರುಣ ಮತದಾರರಿಗೆ ಸಲ್ಲುತ್ತದೆ. ಕಲುಷಿತಗೊಂಡಿರುವ ರಾಜಕಾರಣದ ಹೊರತಾದ ವ್ಯಕ್ತಿತ್ವ ಯತೀಂದ್ರ ಅವರದ್ದು. ಧರ್ಮದ ಮಾರ್ಗ ನೀತಿ ಮಾರ್ಗವನ್ನು ಅವರು ರಾಜಕಾರಣದಲ್ಲಿ ಅನುಸರಿಸುತ್ತಿದ್ದಾರೆ.

ವರುಣ ಗ್ರಾಮದಲ್ಲಿ ಡಾ ಯತೀಂದ್ರ ಅವರ ಹುಟ್ಟುಹಬ್ಬ ಆಚರಣೆ ಮಾಡುತ್ತಿರುವುದು ಒಂದು ಐತಿಹಾಸಿಕ ಸಂದರ್ಭ. ಎಲ್ಲ ತಾಯಂದಿರ ಜೊತೆಗೆ ಹುಟ್ಟು ಹಬ್ಬದ ಆಚರಣೆ ಮತ್ತಷ್ಟು ವಿಶೇಷವಾಗಿದೆ.


ನಮ್ಮ ಸರ್ಕಾರದ ಸಚಿವ ಸಂಪುಟದಲ್ಲಿ ಡಾ ಯತೀಂದ್ರ ಅವರು ಸಚಿವರಾಗುವುದು ಖಚಿತ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ರೈತರಿಗೆ ತೆಂಗಿನ ಸಸಿ, ಮಹಿಳೆಯರಿಗೆ ಸೀರೆಗಳನ್ನು ನೀಡಿ ಎಲ್ಲರಿಗೂ ಸಿಹಿ ಹಂಚಿ ಡಾ. ಯತಿಂದ್ರ ಅವರ ಹುಟ್ಟು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾಂಗ್ರೆಸ್ ಮುಖಂಡರಾದ ಭುಗತಗಳ್ಳಿ ಮಣಿಯಯ್ಯ ಮಾತನಾಡಿ, ವರುಣ ವಿಧಾನಸಭಾ ಕ್ಷೇತ್ರದಿಂದ ಸಿದ್ದರಾಮಯ್ಯನವರು ಎರಡು ಬಾರಿ ಮುಖ್ಯಮಂತ್ರಿಗಳಾಗಿರುವುದು ನಮ್ಮ ಜಿಲ್ಲೆಗೆ ಹೆಮ್ಮೆ ತರುವಂತ ವಿಚಾರ. ಇಂದಿನ ನಮ್ಮ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಪ್ರತೀ ಕುಟುಂಬದ ಮನೆ ಬಾಗಿಲಿಗೆ ತಲುತ್ತದೆ. ತಂದೆಯಂತೆ ಮಗ ಕ್ಷೇತ್ರದ ಮನೆ ಮಗನಂತೆ ಕೆಲಸ ಮಾಡುತ್ತಿರುವುದು ನಮ್ಮ ಸೌಭಾಗ್ಯ ಎಂದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಿಕ್ಕ ದೇವಮ್ಮ, ವರುಣ ಗ್ರಾ.ಪ ಸದಸ್ಯರಾದ ಮಹದೇವ, ಶಿವಣ್ಣ, ದೇವರಾಜು, ಪಿಲ್ಲಹಳ್ಳಿ ಶಿವಕುಮಾರ್, ಲತಾ ದೇವಣ್ಣ, ಶೋಭಾ ಸಿದ್ದು, ಡಿಸಿಸಿ ಪದಾಧಿಕಾರಿಗಳಾದ ಎಂ. ಶಿವಪ್ರಸಾದ್, ಉತ್ತನಹಳ್ಳಿ ಶಿವಣ್ಣ,ವಕೀಲರಾದ ಪಾಳ್ಯ ಸುರೇಶ್, ಸಂತೋಷ್ ಮೊಳಿಯೂರು, ಸಕಳ್ಳಿ ಬಸವರಾಜು ಪದ್ಮನಾಭ ದಾಸನೂರು ಸೇವಾದಳ ಅಧ್ಯಕ್ಷರಾದ ಸಾ.ಮ ಯೋಗೇಶ್, ಯಂಗ್ ಬ್ರಿಗೇಡ್ ಅಧ್ಯಕ್ಷರಾದ ಪ್ರವೀಣ್ ಸಿದ್ದಲಿಂಗಪುರ, ಡಾ. ನಾಗರಾಜು, ಶ್ರೀಧರ್ ಗೌಡ, ಮನೋಜ್ ವರುಣ, ಕಾರ್ಯ ಸಿದ್ದರಾಜು, ದಾಸನೂರು ಪುಟ್ಟಸ್ವಾಮಿ ಇನ್ನಿತರರು ಹಾಜರಿದ್ದರು.

# ‘ಅದ್ಭುತ ಪಯಣ’ ಇಲ್ಲಿಂದ ಭೂಮಿ ನೋಡುವ ಸೌಭಾಗ್ಯ

ವಾಷಿಂಗ್ಟನ್, ಜೂ.27– ಇತ್ತೀಚೆಗಷ್ಟೇ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತೆರಳಿ ಇತಿಹಾಸ ಸೃಷ್ಟಿಸಿದ್ದ ಭಾರತ ಮೂಲದ ವ್ಯೋಮಗಾಮಿ ಶುಭಾಂಶು ಶುಕ್ಲಾ ಅಲ್ಲಿಂದಲೇ ತಮ್ಮ ಮೊದಲ ಭಾಷಣ ಮಾಡಿದ್ದಾರೆ.



ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಸ್ಥಳೀಯ ಕಾಲಮಾನ ಗುರುವಾರ ಸಂಜೆ 4.01ಕ್ಕೆ ಉತ್ತರ ಅಟ್ಲಾಂಟಿಕ್ ಮೇಲೆ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿ ಇತಿಹಾಸ ನಿರ್ಮಿಸಿದರು. ಇದರೊಂದಿಗೆ 1984 ರಲ್ಲಿ ರಾಕೇಶ್ ಶರ್ಮಾ ಅವರ ಹೆಗ್ಗುರುತು ಕಾರ್ಯಾಚರಣೆಯ 41 ವರ್ಷಗಳ ನಂತರ ಶುಕ್ಲಾ ಐಎಸ್‌ಎಸ್ ಅನ್ನು ಹತ್ತಿದ ಮೊದಲ ಭಾರತೀಯ ಮತ್ತು ಬಾಹ್ಯಾಕಾಶಕ್ಕೆ ಪ್ರಯಾಣಿಸಿದ ಎರಡನೇ ಭಾರತೀಯ ಎಂಬ ಕೀರ್ತಿಗೆ ಭಾಜನರಾದರು.

**ಶುಭಾಂಶು ಶುಕ್ಲಾ ಮೊದಲ ಭಾಷಣ:** ಇನ್ನು ಬಾಹ್ಯಾಕಾಶ ನಿಲ್ದಾಣದಿಂದ ತಮ್ಮ ಮೊದಲ ಭಾಷಣ ಮಾಡಿರುವ ಶುಭಾಂಶು ಶುಕ್ಲಾ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಭೂಮಿಯಿಂದ ಬಾಹ್ಯಾಕಾಶದ ಜರ್ನಿಯನ್ನು ಅದ್ಭುತ ಪಯಣ ಎಂದು ಬಿಂಬಿಸಿದ ಶುಕ್ಲಾ, ಈ ಅನುಕೂಲಕರ ಸ್ಥಳದಿಂದ ಭೂಮಿಯನ್ನು ನೋಡುವ ಕೆಲವೇ ಕೆಲವು ಜನರಲ್ಲಿ ನಾನು ಒಬ್ಬನಾಗಿರುವುದು ಸೌಭಾಗ್ಯ ಎಂದು ಹೇಳಿದರು.

ಈಗಾಗಲೇ ನೌಕೆಯಲ್ಲಿರುವ ಸಿಬ್ಬಂದಿಯ ನೋಟ ಮತ್ತು ಆತಿಥ್ಯ ನನ್ನ ನಿರೀಕ್ಷೆಗಳು ಮೀರಿದ್ದವು. ಮುಂದಿನ 14 ದಿನಗಳು ಅದ್ಭುತವಾಗಿರಲಿವೆ, ವಿಜ್ಞಾನ ಮತ್ತು ಸಂಶೋಧನೆಯನ್ನು ಮುನ್ನಡೆಸಲು ಒಟ್ಟಾಗಿ ಕೆಲಸ ಮಾಡುತ್ತವೆ ಎಂದು ನನಗೆ ತುಂಬಾ ವಿಶ್ವಾಸವಿದೆ. ತುಂಬಾ ಧನ್ಯವಾದಗಳು ಎಂದು ಶುಕ್ಲಾ ಹೇಳಿದರು.

# ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಶಾಲೆಯಲ್ಲಿ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ



ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಶಾಲಾ ಮಕ್ಕಳು ಶುಕ್ರವಾರ ಜಾಗೃತಿ ಜಾಥಾ ನಡೆಸಿದರು.

ಮೈಸೂರು, ಜೂ.27(ಬಿಎಲ್‌ಯು)– ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ ಅಂಗವಾಗಿ ಮೈಸೂರಿನ ಕುಕ್ಕರಹಳ್ಳಿ ಕೆರೆ ಸರ್ಕಾರಿ ಶಾಲೆಯಲ್ಲಿ ಇಂದು ಬೀದಿ ನಾಟಕ, ಜಾಗೃತಿ ಜಾಥ ಆಯೋಜಿಸಲಾಗಿತ್ತು.

ಕುಕ್ಕರಹಳ್ಳಿ ಸರ್ಕಾರಿ ಶಾಲೆಯಿಂದ ಆರಂಭವಾದ ಜಾಥ ಕುವೆಂಪುನಗರ, ಸರಸ್ವತಿಪುರಂನ ಪ್ರಮುಖ ರಸ್ತೆಗಳಲ್ಲಿ ಸಾಗಿ ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವ ಮಾರ್ಗ ವ್ಯಸನ ಮುಕ್ತ ಮತ್ತು ಪುನರ್ವಸತಿ ಕೇಂದ್ರದ ಅಧ್ಯಕ್ಷ ಎನ್.ಬಸವರಾಜು ಮಾತನಾಡಿ, ಪ್ರತಿ ವರ್ಷ ಜೂನ್ 26 ರಂದು ವಿಶ್ವ ಮಾದಕ ವಸ್ತುಗಳ ವಿರೋಧಿ ದಿನ ಆಚರಿಸಲಾಗುತ್ತಿದೆ.

ಇಂದಿನ ಶೇಕಡ 70 ರಷ್ಟು ಯುವ ಜನಾಂಗ ಹಲವು ರೀತಿಯ ದುಶ್ಚಟಗಳನ್ನು ಮೈಗೂಡಿಸಿಕೊಂಡು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಡ್ರಗ್ಸ್ ಮಾಫಿಯಾ ಹತೋಟಿಗೆ ತರಲು ವಿಶ್ವದೆಲ್ಲೆಡೆ ಕಠಿಣ ಕಾನೂನು ಜಾರಿ ಮಾಡಲಾಗುತ್ತಿದೆ. ಆದರೂ ಇದನ್ನು ಬುಡ ಸಮೇತ ಕಿತ್ತೊಗೆಯಲು ಸಾಧ್ಯವಾಗುತ್ತಿಲ್ಲ. ಇದರ ದುಷ್ಪರಿಣಾಮ ಅರಿತು ಪ್ರತಿಯೊಬ್ಬರು ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಅವರು, ಮಾದಕ ವಸ್ತುಗಳ ಸೇವನೆಯಿಂದ ಅವರ ಆರೋಗ್ಯ, ನೆಮ್ಮದಿ, ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ. ಆದ ಕಾರಣ ಮಾದಕ ವಸ್ತುಗಳಿಂದ ಸಮಾಜ ಮುಕ್ತವಾಗಬೇಕು ಎಂದು ಹೇಳಿದರು. ಶಾಲೆಯ ಮುಖ್ಯ ಶಿಕ್ಷಕ ಚಂದ್ರು ಮಾತನಾಡಿ, ಮಾದಕ ವ್ಯಸನಕ್ಕೆ ದಾಸರಾಗುತ್ತಿರುವ ಮಕ್ಕಳು ತಮ್ಮ ಅರಿವಿಲ್ಲದೆ ಕಾನೂನು ವಿರೋಧಿ ಕೃತ್ಯದಲ್ಲಿ ತೊಡಗುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು.



**PUBLIC NOTICE**

Notice is hereby issued to the General Public that Smt. CHOWDESHWARI W/o Late. Shivram S.G, residing at # 942, 42nd Cross, 3rd Block, Rajajinagar, Bengaluru-560010, has agreed to sell the Schedule Property to my Client/s.

Any Person/s asserting any right, Title, Interest or claim, pending litigation or demand of any nature in or upon the Schedule property or any part thereof, the same may be brought to the notice of the under signed along with documentary evidence at # L-50/2A, 1st Floor, Ashoka Road, Mysuru - 570001, Within TEN (10) days from the date of this Public Notice, failing which such claim/s shall be considered to have been waived and /or given up and my client/s shall be entitled to Complete the Sale transaction that there are no Claims of whatsoever nature with respect of the Schedule Property.

**SCHEDULE**

All that Piece and Parcel of Industrial Property Bearing No. 108, E-Khata No. 4252412145, Measuring East to West - 54.86 Mts & North to South - 60.960 Mts, Totally Measuring 3344.523 Square Meters, Situated at Bannimantap 'A' Layout, Mandi Mohalla, Mysuru & Bounded On:
East By : Property Bearing No.107
West By : Property Bearing No. 109
North By : Road, South By : Road.

Advocate : M. Sanjay Jain
# L-50/2A, 1st Floor, Ashoka Road, Mysuru - 570001.
email: msj186@yahoo.co.in
Mob : 9341464636.
Place : Mysuru
Date : 24/6/2025

**ಮೈಸೂರು ಮಿತ್ರ 46**
**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

**ಗೌರವಾನ್ವಿತ ಒಂದನೇ ಅಧಿಕ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನಂಜನಗೂಡು**

ಅಸಲು ದಾವಾ ಸಂಖ್ಯೆ : 241/ 2023
ವಾದಿ : ಅಬ್ದುಲ್ ಖಾದಿರ್ ಎಂ.ಜಿ ವಿರುದ್ಧ
ಪ್ರತಿವಾದಿ : ಸಯ್ಯದಾ ಬೇಗಂ ಮತ್ತು ಇತರರು.

**ನ್ಯಾಯಾಲಯದ ಸಮನ್ಸ್ ಪತ್ರಿಕಾ ಪ್ರಕಟಣೆ ಮೂಲಕ.**

ಗೆ,
3ನೇ ಪ್ರತಿವಾದಿಯ ವಾರಸುದಾರರುಗಳಿಗೆ
3ಎ) ಜಾಹೇದ ಬೇಗಂ, ಕೋಂ ಲೇಟ್ ಸಜ್ಜಾದ್ ಅಹಮ್ಮದ್ ವಯಸ್ಕರು,
3ಬಿ) ನಗ್ಮಾ ನಾಜ್, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಸಿ) ನೇಹ ಫರ್‌ಹೀನ್, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಡಿ) ಮೊಹಮ್ಮದ್ ಸದ್ದಾಂ, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಇ) ಯಾಸೀನ್ ಅರ್ಫಾತ್ ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
ಎಲ್ಲರ ವಾಸ ಮನೆ ನಂ. 7/ಎ, 3ನೇ ಕ್ರಾಸ್, ಶಕ್ತಿನಗರ, ಮೈಸೂರು–570029

ಮೇಲ್ಕಂಡ ವಾದಿಯು ಪ್ರತಿವಾದಿಯ ವಿರುದ್ಧ ಕರಾರಿನ ನಿರ್ಧಿಷ್ಠ ಅನುಷ್ಠಾನ ಕೋರಿ ಘನ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ಸದರಿ ಮೇಲ್ಕಂಡ ಮೃತ 3ನೇ ಪ್ರತಿವಾದಿಯ ವಾರಸುದಾರರಾದ ನೀವು ನ್ಯಾಯಾಲಯದ ಸಮನ್ಸ್ ಮತ್ತು ನೊಂದಾಯಿತ ಅಂಚೆಯನ್ನು ಕೂಡ ತೆಗೆದುಕೊಳ್ಳದೆ ಇದುದ್ದರಿಂದ ವಾದಿಯು ನಿಮ್ಮ ವಿರುದ್ಧ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ನೀವು ದಿನಾಂಕ 18/8/2025 ರಂದು ಬೆಳಗ್ಗೆ 11.00 ಗಂಟೆಗೆ ದಾವೆಯು ವಿಚಾರಣೆಗೆ ಇರುವುದರಿಂದ ನಿಮ್ಮದೇನಾದರೂ ತಕರಾರು ಇದ್ದಲ್ಲಿ ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ದಿನಾಂಕ : 26ನೇ ಜೂನ್ 2025 ರಂದು ಸಹಿ ಮತ್ತು ಮೊಹರಿನೊಡನೆ ನೀಡಲಾಗಿದೆ.

ನ್ಯಾಯಾಲಯ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರವಾನ್ವಿತ ಒಂದನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು

ವಾದಿ ಪರ ವಕೀಲರು
ಸಹಿ/– ಎನ್. ಶ್ರೀಧರ # 143, ಸಿ ಮತ್ತು ಡಿ ಬ್ಲಾಕ್, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು.

**ಗೌರವಾನ್ವಿತ ಹಿರಿಯ ಅಧಿಕ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ನಂಜನಗೂಡು**

ಅಸಲು ದಾವಾ ಸಂಖ್ಯೆ : 128/2023
ವಾದಿ : ಅಬ್ದುಲ್ ಖಾದಿರ್ ಎಂ.ಜಿ ವಿರುದ್ಧ
ಪ್ರತಿವಾದಿ : ಸಯ್ಯದಾ ಬೇಗಂ ಮತ್ತು ಇತರರು.

**ನ್ಯಾಯಾಲಯದ ಸಮನ್ಸ್ ಪತ್ರಿಕಾ ಪ್ರಕಟಣೆ ಮೂಲಕ.**

ಗೆ,
3ನೇ ಪ್ರತಿವಾದಿಯ ವಾರಸುದಾರರುಗಳಿಗೆ
3ಎ) ಜಾಹೇದ ಬೇಗಂ, ಕೋಂ ಲೇಟ್ ಸಜ್ಜಾದ್ ಅಹಮ್ಮದ್ ವಯಸ್ಕರು,
3ಬಿ) ನಗ್ಮಾ ನಾಜ್, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಸಿ) ನೇಹ ಫರ್‌ಹೀನ್, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಡಿ) ಮೊಹಮ್ಮದ್ ಸದ್ದಾಂ, ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
3ಇ) ಯಾಸೀನ್ ಅರ್ಫಾತ್ ಬಿನ್ ಲೇಟ್ ಸಜ್ಜಾದ್ ಅಹಮ್ಮದ್, ವಯಸ್ಕರು,
ಎಲ್ಲರ ವಾಸ ಮನೆ ನಂ. 7/ಎ, 3ನೇ ಕ್ರಾಸ್, ಶಕ್ತಿನಗರ, ಮೈಸೂರು–570029

ಮೇಲ್ಕಂಡ ವಾದಿಯು ಪ್ರತಿವಾದಿಯ ವಿರುದ್ಧ ಕರಾರಿನ ನಿರ್ಧಿಷ್ಠ ಅನುಷ್ಠಾನ ಕೋರಿ ಘನ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು, ಸದರಿ ಮೇಲ್ಕಂಡ ಮೃತ 3ನೇ ಪ್ರತಿವಾದಿಯ ವಾರಸುದಾರರಾದ ನೀವು ನ್ಯಾಯಾಲಯದ ಸಮನ್ಸ್ ಮತ್ತು ನೊಂದಾಯಿತ ಅಂಚೆಯನ್ನು ಕೂಡ ತೆಗೆದುಕೊಳ್ಳದೆ ಇದುದ್ದರಿಂದ ವಾದಿಯು ನಿಮ್ಮ ವಿರುದ್ಧ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ನೀವು ದಿನಾಂಕ 14/8/2025 ರಂದು ಬೆಳಗ್ಗೆ 11.00 ಗಂಟೆಗೆ ದಾವೆಯು ವಿಚಾರಣೆಗೆ ಇರುವುದರಿಂದ ನಿಮ್ಮದೇನಾದರೂ ತಕರಾರು ಇದ್ದಲ್ಲಿ ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ದಿನಾಂಕ : 26ನೇ ಜೂನ್ 2025 ರಂದು ಸಹಿ ಮತ್ತು ಮೊಹರಿನೊಡನೆ ನೀಡಲಾಗಿದೆ.

ನ್ಯಾಯಾಲಯ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರವಾನ್ವಿತ ಒಂದನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು

ವಾದಿ ಪರ ವಕೀಲರು
ಸಹಿ/– ಎನ್. ಶ್ರೀಧರ # 143, ಸಿ ಮತ್ತು ಡಿ ಬ್ಲಾಕ್, ಪಡುವಣ ರಸ್ತೆ, ಕುವೆಂಪುನಗರ, ಮೈಸೂರು.

## ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿ ಪಡೆದ ಪುಟ್ಟ ಬಾಲೆ



ಸಿದ್ದಾಪುರ,ಜೂ.27– ವಿಷಯಗಳನ್ನು ನೆನಪಿಟ್ಟುಕೊಳ್ಳುವ ಮತ್ತು ಪಠಿಸುವ ಅಸಾಧಾರಣ ಸಾಮರ್ಥ್ಯ ತೋರಿಸುವ ಮೂಲಕ ಒಂದು ವರ್ಷ ಹತ್ತು ತಿಂಗಳ ಮಗು ವಿಶ್ವ ದಾಖಲೆ ಹಾಗೂ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿ ಪಡೆದು ಸಾಧನೆ ಮಾಡಿದೆ.

ಸಿದ್ದಾಪುರದ ಮೊಯ್ದೀನ್ ಕೆ.ಎಂ ಹಾಗೂ ಸಫ್ವಾನಾ ದಂಪತಿ ಪುತ್ರಿ ಮಾಶಿತಾ ಕೆ.ಎಂ. ಚಿಕ್ಕ ವಯಸ್ಸಿನಲ್ಲಿಯೇ ಗಮನಾರ್ಹ ಮೈಲಿಗಲ್ಲು ಸಾಧಿಸಿದ್ದು, ಅಸಾಧಾರಣ ಸ್ಮರಣಶಕ್ತಿ ಮತ್ತು ಭಾಷಾ ಕೌಶಲ್ಯಕ್ಕಾಗಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ವಿಶ್ವ ದಾಖಲೆ ಎರಡರಲ್ಲೂ ಮನ್ನಣೆ ಗಳಿಸಿದೆ.

**ಸಾಧನೆಯ ವಿಶೇಷತೆ:** ಚಿಕ್ಕ ವಯಸ್ಸಿನಲ್ಲಿ ಮಾಶಿತಾ, ಇಂಗ್ಲಿಷ್ ವರ್ಣಮಾಲೆಗಳು (ಎಟು ಝೆಡ್), ಅರೇಬಿಕ್ ವರ್ಣಮಾಲೆಗಳು (ಅಲಿಫ್ ನಿಂದ ಯಾ), ಇಂಗ್ಲಿಷ್ ಮತ್ತು ಅರೇಬಿಕ್‌ನಲ್ಲಿ ಸಂಖ್ಯೆಗಳು, ಹಣ್ಣು, ತರಕಾರಿ, ವಾಹನಗಳ ಹಾಗೂ ವಿವಿಧ ದೇಶಗಳ ರಾಷ್ಟ್ರೀಯ ಧ್ವಜಗಳ ಹೆಸರುಗಳು ಮತ್ತು ಸಣ್ಣ ಅರೇಬಿಕ್ ಕವಿತೆಗಳು, ಇಂಗ್ಲಿಷ್ ಜನಪ್ರಿಯ ಮಕ್ಕಳ ಹಾಡುಗಳು, ದೈನಂದಿನ ಇಸ್ಲಾಮಿಕ್ ಧಿಕ್ರ್‌ಗಳು ಮತ್ತು ದುವಾಗಳ (ಬೆಳಿಗ್ಗೆ ಮತ್ತು ಸಂಜೆಯ ಸಣ್ಣ ಪ್ರಾರ್ಥನೆಗಳು) ಮೂಲಕ ಈ ಸಾಧನೆ ಮಾಡಿದೆ. ಬಹುಭಾಷೆಗಳಲ್ಲಿ ವಿಷಯವನ್ನು ಪ್ರತ್ಯೇಕಿಸುವ ಮತ್ತು ಪಠಿಸುವ ಮಾಶಿತಾ ಸಾಮರ್ಥ್ಯವು ಅಪರೂಪದ ಸಾಧನೆಯಾಗಿದೆ.

**ಪ್ರಶಸ್ತಿ ಪ್ರದಾನ:** ಆನ್‌ಲೈನ್‌ನಲ್ಲಿ ಮಗುವಿನ ಅಸಾಧಾರಣ ಗ್ರಹಿಸುವ ಮತ್ತು ಪಠಿಸುವ ಲೈವ್ ವೀಡಿಯೋ ಮೂಲಕ ಐ.ಬಿ.ಆರ್ ಅಚೀವರ್ ಶೀರ್ಷಿಕೆಯ 'ಇಂಡಿಯಾ ಬುಕ್ಸ್ ಆಫ್ ರೆಕಾರ್ಡ್ಸ್' ಪ್ರಶಸ್ತಿಯನ್ನು ಪಡೆದುಕೊಂಡಿದೆ. ಅಲ್ಲದೆ ವೈಯಕ್ತಿಕ ವಿಭಾಗದಲ್ಲಿ ವಿಶಿಷ್ಟ ಪ್ರತಿಭೆಯ 'ಅಸಾ ಧಾರಣ ಗ್ರಹಿಸುವ ಶಕ್ತಿಯ ಪ್ರತಿಭಾನ್ವಿತ ಮಗು' ಎಂಬ ಶೀರ್ಷಿಕೆಯ 'ಕಲಾಮ್ಸ್ ವರ್ಲ್ಡ್ ರೆಕಾರ್ಡ್ಸ್' ಪ್ರಶಸ್ತಿಯನ್ನು ಸೆಪ್ಟೆಂಬರ್ 27ರಂದು ಚೆನ್ನೈನಲ್ಲಿ ನಡೆಯಲಿರುವ 16ನೇ ಆವೃತ್ತಿಯ ಸಮಾರಂಭದಲ್ಲಿ ಸ್ವೀಕರಿಸಲಿದೆ ಎಂದು ಮಾಶಿತಾ ಪೋಷಕರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

# ನಾಡಗೀತೆಗೆ ಅವಮಾನ : ಕೆಡಿಪಿ ಸಭೆಯಲ್ಲಿ ಆಕ್ರೋಶ



ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ನಡೆಯಿತು.

ಮಡಿಕೇರಿ,ಜೂ.27– ನಾಡಗೀತೆಗೆ ಅವಮಾನವಾಗುವಂತೆ ರೆಕಾರ್ಡ್ ಹಾಕಿದವರನ್ನು ಅಮಾನತು ಪಡಿಸುವಂತೆ ಒತ್ತಾಯಿಸಿ ಆಕ್ರೋಷ ವ್ಯಕ್ತವಾದ ಘಟನೆ ಇಂದಿನ ಜಿಲ್ಲಾ ಮಟ್ಟದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಆರಂಭದಲ್ಲೇ ನಾಡಗೀತೆಗೆ ಅವಮಾನ ಮಾಡಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಪಂಚಾಯಿತಿಯಿಂದ ಪ್ಲೇ ಮಾಡಿದ ನಾಡಗೀತೆಯಲ್ಲಿ 'ಸರ್ವ ಜನಾಂಗದ ಶಾಂತಿಯ ತೋಟ' ಪ್ಯಾರ ಪ್ರಸಾರವಾಗಲಿಲ್ಲ. ಇದರಿಂದ ಕೆಂಡಾಮಂಡಲಗೊಂಡ ಬೋಜೇಗೌಡ, ಜಿಲ್ಲಾ ಪಂಚಾಯತ್ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡು, ನಾಡಗೀತೆ ತುಂಡರಿಸಿ ರೆಕಾರ್ಡ್ ಪ್ಲೇ ಮಾಡಿದ ಸಿಬ್ಬಂದಿಯನ್ನು ಅಮಾನತು ಮಾಡುವಂತೆ ಒತ್ತಾಯಿಸಿದರು. ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಭರವಸೆ ನೀಡಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಭೆಗೆ ಗೈರು ಹಾಜರಾಗಿದ್ದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು ಗೈರು ಹಾಜರಿಯ ಬಗ್ಗೆ ಅಧಿಕಾರಿಗೆ ನೋಟಿಸ್ ನೀಡುವಂತೆ ಅರಣ್ಯ ಇಲಾಖೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯುವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಆನೆ ಮಾನವ ಸಂಘರ್ಷ ಮಿತಿ ಮೀರಿದ್ದು, ಕಾಡಾನೆಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಸರಿಯಾದ ಕ್ರಮವನ್ನು ಅರಣ್ಯ ಇಲಾಖೆ ಕೈಗೊಂಡಿಲ್ಲವೆಂದು ಸಚಿವ ಬೋಸರಾಜ್ ಮತ್ತು ಶಾಸಕ ಪೊನ್ನಣ್ಣ ಅರಣ್ಯ ಸಚಿವರ ಗಮನ ಸೆಳೆದಾಗ ಇನ್ನು ಒಂದು ವಾರದಲ್ಲಿ ಜಿಲ್ಲೆಯ ಅರಣ್ಯಾಧಿಕಾರಿಗಳ ಸಭೆ ನಡೆಸಿ, ಅಗತ್ಯ ಕ್ರಮವಹಿಸುವಂತೆ ಸೂಚನೆ ನೀಡುವುದಾಗಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ಗ್ಯಾರೆಂಟಿ ಅನುಷ್ಠಾನ ಪ್ರಾಧಿಕಾರದ ಸೋಮವಾರಪೇಟೆ ತಾಲೂಕು ಸಮಿತಿ ಪ್ರಮುಖ ಹೆಚ್.ಆರ್.ಸುರೇಶ್ ಮಾತನಾಡಿದರು

ಪೊನ್ನಂಪೇಟೆ ತಾಲೂಕಿನ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಆದಿವಾಸಿಗಳು ನಿರ್ಮಿಸಿಕೊಂಡಿದ್ದ ಗುಡಿಸಲುಗಳನ್ನು ತೆರವುಗೊಳಿಸಿರುವ ಬಗ್ಗೆ ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷೆ ಕಾವೇರಿ ಪ್ರಶ್ನಿಸಿದಾಗ ತಾವು ಸ್ಥಳಕ್ಕೆ ಭೇಟಿ ನೀಡಿ ಸಾಲಿಸಿಟರ್ ಜನರಲ್ ಅವರ ಬಳಿ ಚರ್ಚಿಸ ಲಾಗಿದ್ದು, ಆದಿವಾಸಿಗಳಿಗೆ ಕಾನೂನು ಬದ್ಧವಾಗಿ ನ್ಯಾಯ ದೊರಕಿಸಲು ತಾವು ಪ್ರಯತ್ನಿಸುವುದಾಗಿ ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ. ಪ್ರಸಾದ್, ಡಿಸಿಎಫ್ ಅಭಿಷೇಕ್ ಉಪಸ್ಥಿತರಿದ್ದರು. ಹೆಚ್ಚುವರಿ ಜಿಲ್ಲಾಧಿಕಾರಿ ಐಶ್ವರ್ಯ, ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆನಂದ್ ಪ್ರಕಾಶ್ ಮೀನಾ ಸೇರಿದಂತೆ ವಿವಿಧ ಇಲಾಖಾಧಿಕಾರಿಗಳು ಹಾಜರಿದ್ದರು.

## ಕುಶಾಲನಗರದಲ್ಲಿ ಕೆಂಪೇಗೌಡ ಜಯಂತಿ



ಕುಶಾಲನಗರ, ಜೂ.27– ತಾಲೂಕು ಒಕ್ಕಲಿಗರ ಸಂಘದಿಂದ ನಾಡಪ್ರಭು ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಕೆಂಪೇಗೌಡ ಜಯಂತಿ ನಡೆಯಿತು.

ಸಂಘದ ಅಧ್ಯಕ್ಷ ಎಂ.ಕೆ.ದಿನೇಶ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಸಮುದಾಯ ಬಾಂಧವರು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕೆಂಪೇಗೌಡರ ಕೊಡುಗೆಗಳ ಬಗ್ಗೆ ಎಂ.ಕೆ.ದಿನೇಶ್ ಮಾತನಾಡಿದರು.

ಸಂಘದ ಉಪಾಧ್ಯಕ್ಷ ಚಂದ್ರಶೇಖರ, ಕಾರ್ಯದರ್ಶಿ ಎಂ.ಎಂ.ಪ್ರಕಾಶ್, ಖಜಾಂಚಿ ಅರುಣ್ ಚಂಗಪ್ಪ, ನಿರ್ದೇಶಕರಾದ ವಿ.ಜಿ. ನವೀನ್ ಗೌಡ, ಗೌತಮ್, ಎಂ.ಡಿ.ಕೃಷ್ಣಪ್ಪ, ಜಿ.ಬಿ.ಜಗದೀಶ್, ಗಿರೀಶ್, ಗಾಯತ್ರಿ, ಭಾನುಪ್ರಕಾಶ್, ಸಹಕಾರ ಸಂಘದ ನಿರ್ದೇಶಕಿ ರೇಖಾ ಮತ್ತಿತರರು ಇದ್ದರು.

## ಸರಕಾರಿ ಭೂಮಿಯಲ್ಲಿ ಪ್ಲಾಂಟೇಷನ್ ಬೆಳೆಗೆ ಗುತ್ತಿಗೆ

### ಕೊಡಗು ಜಿಲ್ಲೆಯಲ್ಲಿ 3073 ಅರ್ಜಿ ಸಲ್ಲಿಕೆ

**ಮಡಿಕೇರಿ:** ಸರಕಾರಿ ಭೂಮಿ ಒತ್ತುವರಿ ಮಾಡಿಕೊಂಡು ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯಲು ನಿಗದಿತ ಅವಧಿಗೆ ಗುತ್ತಿಗೆ ನೀಡುವ ಸಂಬಂಧದ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿದ್ದು, ಜಿಲ್ಲೆಯಲ್ಲಿ 3073 ಅರ್ಜಿಗಳು ಸಲ್ಲಿಕೆಯಾಗಿವೆ.

ಕಾಫಿ, ಏಲಕ್ಕಿ, ಟೀ, ಕರಿಮೆಣಸು ರಬ್ಬರ್ ಬೆಳೆಗಳನ್ನು ಸರಕಾರಿ ಜಾಗದಲ್ಲಿ ಅನಧಿಕೃತವಾಗಿ ಬೆಳೆಯುತ್ತಿರುವ ರೈತರಿಗೆ 30 ವರ್ಷಗಳವರೆಗೆ ಗುತ್ತಿಗೆಗೆ ನೀಡುವ ತಿದ್ದುಪಡಿಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಭೂ ಮಂಜೂರಾತಿ ನಿಯಮಗಳಿಗೂ ತಿದ್ದುಪಡಿ ತರಲಾಗಿತ್ತು. ಇದೀಗ ರಾಜ್ಯ ಸರಕಾರ ಈ ಯೋಜನೆಯಡಿ ಭೂಮಿಯನ್ನು ಗುತ್ತಿಗೆ ನೀಡಲು ಕ್ರಮಕೈಗೊಂಡಿದ್ದು, ತಹಶೀಲ್ದಾರ್ ಹಂತದಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದೆ.

**ನಿಯಮ:** ರೈತರು ಅನಧಿಕೃತವಾಗಿ ಪ್ಲಾಂಟೇಷನ್ ಬೆಳೆಗಳನ್ನು ಬೆಳೆದು ಈಗಲೂ ಸ್ವಾಧೀನ ಹೊಂದಿರುವ ಸರ್ಕಾರಿ ಜಮೀನುಗಳನ್ನು 30 ವರ್ಷಗಳವರೆಗೆ ಗುತ್ತಿಗೆಗೆ ಪಡೆಯಲು ಈ ನಿಯಮಗಳಡಿ ಸಾಧ್ಯವಿದೆ. ಕುಟುಂಬಕ್ಕೆ ಗರಿಷ್ಠ 25 ಎಕರೆಗಳವರೆಗೆ ಗುತ್ತಿಗೆಗೆ ನೀಡಲು ಅವಕಾಶವಿದೆ. ಅದಕ್ಕಿಂತ ಹೆಚ್ಚಿನ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ್ದರೆ, ಹೆಚ್ಚುವರಿ ವಿಸ್ತೀರ್ಣವನ್ನು ಸರ್ಕಾರದ ವಶಕ್ಕೆ ಒಪ್ಪಿಸಬೇಕು ಎಂಬ ಅಂಶವೂ ನಿಯಮದಲ್ಲಿದೆ. ಎಕರೆಗೆ ವರ್ಷಕ್ಕೆ ಸಾವಿರದಿಂದ 3,500 ರುವರೆಗೂ ಗುತ್ತಿಗೆ ಶುಲ್ಕ ವಿಧಿಸುವ ನಿಯಮವಿದ್ದು, ಗುತ್ತಿಗೆ ಪಡೆದ ರೈತರು ಮೃತಪಟ್ಟಲ್ಲಿ ಅವರ ಕುಟುಂಬದವರಿಗೆ ಮಾತ್ರವೇ ಮುಂದುವರಿಸಲು ಅವಕಾಶ ಮಾಡಿಕೊಡಲಾಗಿದೆ. ಉಪ ಗುತ್ತಿಗೆಗೆ ನೀಡಲು ಅವಕಾಶ ಇರುವುದಿಲ್ಲ.

ಜಿಲ್ಲೆಯಲ್ಲಿ ಗುತ್ತಿಗೆಗೆ ಭೂಮಿ ನೀಡುವಂತೆ 5 ತಾಲೂಕು ಸೇರಿ ಒಟ್ಟು 3073 ಅರ್ಜಿಗಳು ಸಲ್ಲಿಕೆಯಾಗಿದ್ದು, ಜನರಿಂದ ಮನವಿ ಬಂದ ಹಿನ್ನೆಲೆ ಸರಕಾರ ಜುಲೈ 15ರ ತನಕ ಅರ್ಜಿ ಸಲ್ಲಿಕೆಯ ಅವಧಿಯನ್ನು ವಿಸ್ತರಿಸಿದೆ. ಸದ್ಯಕ್ಕೆ ತಾಲೂಕು ತಹಶೀಲ್ದಾರ್‌ಗಳ ಹಂತದಲ್ಲಿ ಪ್ರಕ್ರಿಯೆ ನಡೆಯುತ್ತಿದ್ದು, ಭೂಮಿ ಮಂಜೂರಾತಿಗೆ ಸಮಿತಿ ರಚಿಸಿ ಕಾರ್ಯೋನ್ಮುಖಗೊಳ್ಳಬೇಕಾಗಿದೆ.

**ವಿರೋಧ:** ಸರ್ಕಾರದ ನಿರ್ಧಾರಕ್ಕೆ ನಿವೇಶನ ರಹಿತರು ಸೇರಿದಂತೆ ಸಂಘ–ಸಂಸ್ಥೆಗಳಿಂದ ವ್ಯಾಪಕ ವಿರೋಧವೂ ಇದೆ. ಕೆಲ ವರ್ಷಗಳಿಂದ ಮನೆಯಿಲ್ಲದೆ ಪರದಾಡುತ್ತಿರುವ ಜನರಿಗೆ ಜಾಗ ನೀಡಬೇಕೆಂಬ ಒತ್ತಾಯ ಹೆಚ್ಚಿದೆ. ಹಲವು ಸಂಘಟನೆಗಳು ಈ ನೀತಿಯನ್ನು ವಿರೋಧಿಸುತ್ತಿದ್ದು, ಮೊದಲು ನಿವೇಶನರಹಿತರಿಗೆ ಜಾಗ ನೀಡಬೇಕೆಂದು ಪಟ್ಟುಹಿಡಿದಿವೆ.

## ಅಧಿಕಾರಿಗಳಿಂದ ಮಳೆ ಹಾನಿ ಪ್ರದೇಶಗಳ ಪರಿಶೀಲನೆ



ಮುಂಗಾರು ಮಳೆಯಿಂದಾಗಿ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿ ಆಗಿರುವ ಮನೆ–ಪ್ರಾಣ ಹಾನಿಗಳ ಸಂಬಂಧ ಅಧಿಕಾರಿಗಳು ಪರಿಶೀಲನೆ ನಡೆಸಿದರು.

**ಮಡಿಕೇರಿ:** ಜಿಲ್ಲೆಯಾ ದ್ಯಂತ ಮಳೆಯ ಅಬ್ಬರ ಶಾಂತವಾಗಿದ್ದರೂ ಪ್ರವಾಹ ಮತ್ತು ಮಳೆ ಹಾನಿ ಘಟನೆಗಳ ವರದಿಗಳೂ ವರದಿಯಾಗುತ್ತಲೇ ಇವೆ.

ಸಿದ್ದಾಪುರ ಸಮೀಪದ ನೆಲ್ಯಹುದಿಕೇರಿ ಗ್ರಾಮದ ಕಾವೇರಿ ನದಿ ತೀರದ ಕುಂಬಾರಗುಂಡಿ ಹೊಳೆಕೆರೆ ನಿವಾಸಿಗಳಾದ ಬೇಬಿ ಹಾಗೂ ಅಕ್ಕಣ್ಣಿ ಎಂಬವರ ಗುಡಿಸಲಿಗೆ ಕಾವೇರಿ ನದಿ ನೀರಿನ ಪ್ರವಾಹ ಉಕ್ಕೇರಿದೆ.

ಸೋಮವಾರಪೇಟೆ ತಾಲೂಕಿನ ಚೌಡ್ಲು ಗ್ರಾಮದಲ್ಲಿರುವ ವಿಶ್ವ ಮಾನವ ವಿದ್ಯಾ ಸಂಸ್ಥೆ ಶಾಲಾ ಆವರಣದ ತಡೆ ಗೋಡೆ ಕುಸಿದಿದ್ದು, ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಇನ್ನು ಅತಿಯಾಗಿ ಮಳೆ ಸುರಿಯುವ ಪುಷ್ಪಗಿರಿ ತಪ್ಪಲಿನ ಶಾಂತಳ್ಳಿ ಹೋಬಳಿಯ ಕುಮಾರಳ್ಳಿ ಬಾಚಳ್ಳಿ ಗ್ರಾಮದ ಕುಂದಳ್ಳಿ–ಪುಷ್ಪಗಿರಿ ಸಂಪರ್ಕಿಸುವ ರಸ್ತೆಯ ಮೇಲೆ ಅಲ್ಪ ಪ್ರಮಾಣದ ಭೂಕುಸಿತವಾಗಿರುವ ಪರಿಣಾಮ ವಿದ್ಯುತ್ ಕಂಬ ಹಾಗೂ ವಿದ್ಯುತ್ ಕಂಬಗಳು ಹಾನಿಯಾಗಿದೆ.

ಪೊನ್ನಂಪೇಟೆ ತಾಲೂಕಿನ ಬಾಳೆಲೆ ಹೋಬಳಿಯ ಕೊಟ್ಟಗೇರಿ ಗ್ರಾಮದ ರಸ್ತೆ ಲಕ್ಷ್ಮಣತೀರ್ಥ ನದಿ ಪ್ರವಾಹದಿಂದ ಜಲಾವೃತಗೊಂಡಿದೆ. ನಿಟ್ಟೂರು ಗ್ರಾಮ ವ್ಯಾಪ್ತಿಯ ಚೆಣ್ಣರ ಹಾಡಿ ಸಂಪರ್ಕ ಸೇತುವೆ ತಡೆಗೋಡೆ ಪಕ್ಕದಲ್ಲಿ ಬರೆ ಕುಸಿದಿದ್ದು, ಮುಂದುವರೆದರೆ ಸೇತುವೆಗೆ ಹಾನಿಯಾಗುತ್ತದೆ.

**ವಿರಾಜಪೇಟೆ:** ಸಮೀಪದ ಆರ್ಜಿ ಗ್ರಾಮದ ಲೈನ್ ಮನೆ ಮುಂಭಾಗ ಪಾತ್ರೆ ತೊಳೆಯುತ್ತಿದ್ದ ಗೌರಿ(50) ಮೇಲೆ ಒಣಗಿದ ಮರಬಿದ್ದು, ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ನಡೆದಿದ್ದು, ಶಾಸಕ ಎ.ಎಸ್.ಪೊನ್ನಣ್ಣ ಸರ್ಕಾರದಿಂದ 5 ಲಕ್ಷ ರೂ. ಪರಿಹಾರ ಕೊಡಿಸಿದ್ದಾರೆ.

ತಾಲೂಕಿನ ಕೆದಮುಳ್ಳೂರು ಗ್ರಾಮದ ಎಲಿಜಬೆತ್‌ರ ಮನೆ ಮತ್ತು ಜೇನು ಕುರುಬರ ರೇಖಾರವರ ಮನೆಗಳು ಭಾಗಶಃ ಹಾನಿಯಾಗಿದ್ದು, ಪೂದುಕೋಟೆ ಗ್ರಾಮದ ಒಕ್ಕಲಿಗರ ಗೌರಮ್ಮ, ಕೊಳುವಂಡ ಮಂದಪ್ಪ ಮತ್ತು ಹೆಚ್.ಕೆ.ಬಾಬು ಮನೆಗಳಿಗೂ ಹಾನಿಯುಂಟಾಗಿವೆ, ಆರ್ಜಿ ಗ್ರಾಮದ ಚೋಮವ್ವ, ಕೆ.ಕೆ.ಮಜೀದ್, ವಿ.ವಿ. ಸುರೇಶ್ ಮತ್ತು ಬಿ.ಎಸ್.ಯೋಗೇಶ್ ಸೇರಿದಂತೆ ಒಟ್ಟು 17 ಮನೆಗಳು, 2 ದನದ ಕೊಟ್ಟಿಗೆಗೆ ಹಾನಿ ಉಂಟಾಗಿದೆ.

ಕದನೂರು ಗ್ರಾಮದ ಹೆಚ್.ಎಸ್. ಕವಿತ ಅವರ ಮನೆಹಾನಿ, ಮೈತಾಡಿ ಗ್ರಾಮದ ಎಂ.ಡಿ.ಪೊನ್ನಪ್ಪ, ವಿ.ಆರ್.ಗೌರಮ್ಮ, ಮತ್ತು ಹೆಚ್.ಬಿ.ಮೀನಾ ಅವರ ಮನೆಗಳು ಭಾಗಶಃ ಹಾನಿ ಉಂಟಾಗಿವೆ. ಬಿಟ್ಟಂಗಾಲ ಗ್ರಾಮದ ಪೊನ್ನಕಚ್ಚೀರ ಎಸ್.ಸೋಮಯ್ಯ ಅವರ ಮನೆ, ಆರ್ಜಿ ಪೆರುಂಬಾಡಿಯ ಶಿವಶಂಕರರ ಮನೆ, ಬಾಳುಗೋಡುವಿನ ಸುರಂಜನ್ ನಾಯಕರ ಮನೆ ಮತ್ತು ಅರಮನೆ ಪಾಲೇರ ತೋಲರ ಮನೆ ಭಾಗಶಃ ಹಾನಿ ಉಂಟಾಗಿದೆ ಅಮ್ಮತ್ತಿ ಹೋಬಳಿಯಲ್ಲಿ ಹಮೀನಾ ಮನೆ ಪೂರ್ಣ ಹಾನಿಯಾಗಿದೆ. ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ತಾಲೂಕು ಕಚೇರಿ ಮತ್ತು ಕಂದಾಯ ಅಧಿಕಾರಿಗಳು ಭೇಟಿ ನೀಡಿದ್ದು ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದಾಗಿ ಪರಿವೀಕ್ಷಕ ಹರೀಶ್ ತಿಳಿಸಿದ್ದಾರೆ.

## ಕಾರಿಗೆ ಡಿಕ್ಕಿ ಹೊಡೆದು ಪರಾರಿಯಾಗುತ್ತಿದ್ದ ಲಾರಿ ಚಾಲಕನ ಬಂಧನ

**ಸುಂಟಿಕೊಪ್ಪ:** ಕಾರಿಗೆ ಡಿಕ್ಕಿ ಹೊಡೆದು ಲಾರಿ ನಿಲ್ಲಿಸದೆ ಪರಾರಿಯಾಗುತ್ತಿದ್ದ ಚಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿಗೆ ಆಯಿಲ್ ಪೂರೈಕೆ ಮಾಡಿ ಮಂಗಳೂರಿಗೆ ಹಿಂತಿರುಗುತ್ತಿದ್ದ 10 ಚಕ್ರದ ಲಾರಿಯೊಂದು ಕುಶಾಲನಗರದಿಂದ ಸುಂಟಿಕೊಪ್ಪದ ಕಡೆಗೆ ಬರುತ್ತಿತ್ತು. ಕೊಡಗರಹಳ್ಳಿ ಸಮೀಪ ರಸ್ತೆಯಲ್ಲಿ ಲಾರಿ ಕಾರಿಗೆ ಡಿಕ್ಕಿ ಹೊಡೆದಿದ್ದು, ಚಾಲಕ ಲಾರಿ ನಿಲ್ಲಿಸದೆ ಮುಂದೆ ಸಾಗಿದ್ದಾನೆ. ಇದನ್ನು ಗಮನಿಸಿದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಕಾರ್ಯಪ್ರವೃತ್ತರಾದ ಪೊಲೀಸರು ಪಟ್ಟಣದ ಕನ್ನಡ ವೃತ್ತದ ಬಳಿಯಲ್ಲಿ ಲಾರಿಯನ್ನು(ಕೆಎ.19–ಎಎ.7342) ತಡೆದಿದ್ದಾರೆ. ಈ ವೇಳೆ ಲಾರಿ ಚಾಲಕ ಕಂಠಪೂರ್ತಿ ಮದ್ಯ ಸೇವಿಸಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಚಾಲಕ ಹಾಗೂ ಲಾರಿಯನ್ನು ವಶಕ್ಕೆ ಪಡೆದಿದ್ದಾರೆ. ಲಾರಿಯಲ್ಲಿದ್ದ ಸಹಾಯಕನೊಬ್ಬ ಪೊಲೀಸರನ್ನು ಕಂಡು ಲಾರಿಯಿಂದ ಜಿಗಿದು ಪರಾರಿಯಾಗಿದ್ದಾನೆ. ಲಾರಿ ಚಾಲಕ ಕೊಣನೂರಿನ ಅಭಿಲಾಶ್ ಎಂದು ತಿಳಿದು ಬಂದಿದ್ದು ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಲಾಟರಿ ಟಿಕೆಟ್ ಅಕ್ರಮ ಮಾರಾಟ : ಆರೋಪಿ ಬಂಧನ

**ವಿರಾಜಪೇಟೆ:** ಕೇರಳ ರಾಜ್ಯದ ಲಾಟರಿ ಟಿಕೆಟ್ ಅಕ್ರಮ ಮಾರಾಟ ಮಾಡುತ್ತಿದ್ದವನ್ನು ಬಂಧಿಸಿ ಆತನ ಬಳಿಯಿದ್ದ 21 ಸಾವಿರ ಮೌಲ್ಯದ ಟಿಕೆಟನ್ನು ವಶಪಡಿಸಿಕೊಂಡಿದ್ದಾರೆ.

ಕೇರಳದಿಂದ ಅಕ್ರಮವಾಗಿ ಲಾಟರಿ ಟಿಕೆಟ್ ತಂದು ವಿರಾಜಪೇಟೆ ಬಳಿಯ ಆರ್ಜಿ ಗ್ರಾಮದ ಪೆರುಂಬಾಡಿ ಎಂಬಲ್ಲಿ ಮಾರಾಟ ಮಾಡುತ್ತಿದ್ದ ಕೇರಳದ ಕಣ್ಣೂರು ಜಿಲ್ಲೆಯ ಕೂತುಪರಂಬುವಿನ ಕೆ.ಮೋಹನ್(41) ಎಂಬಾತನನ್ನು ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪೊಲೀಸರು ಬಂಧಿಸಿ, ಆತನ ವಿರುದ್ಧ ಕರ್ನಾಟಕ ರಾಜ್ಯ ಲಾಟರಿ ನಿಷೇಧ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಕೆಂಪೇಗೌಡರ ತತ್ವಾದರ್ಶ ರೂಢಿಸಿಕೊಳ್ಳಲು ಶಾಸಕರ ಕರೆ



ತಾಪಂ ಕಚೇರಿ ಸಭಾಂಗಣದಲ್ಲಿ ಕೆಂಪೇಗೌಡ ಜಯಂತಿ ಆಚರಿಸಲಾಯಿತು

ಕೊಳ್ಳೇಗಾಲ, ಜೂ.27–ಕೆಂಪೇಗೌಡರ ಸೇವೆಯನ್ನು ಸ್ಮರಿಸುವ ಮೂಲಕ ಅವರ ಹಾದಿಯಲ್ಲಿ ಎಲ್ಲರೂ ನಡೆಯುವಂತಾಗಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದ್ದಾರೆ.

ಪಟ್ಟಣದ ತಾಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಸಮಾರಂಭದಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. ನಾಡಿನ ಗಣ್ಯರ ಸ್ಮರಿಸುವ ಜೊತೆಗೆ ಬಡವರು ದೀನ ದಲಿತರ ಅಭ್ಯುದಯಕ್ಕೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿ ಕುಣಗಳ್ಳಿ ಗ್ರಾಮದ ಶಿಕ್ಷಕ ಸತೀಶ್ ಮಾತನಾಡಿದರು. ನಗರಸಭೆ ಅಧ್ಯಕ್ಷೆ ರೇಖಾ, ಯಳಂದೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಅಧ್ಯಕ್ಷ ಪ್ರಭುಪ್ರಸಾದ್, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಾದೇಶ್, ಕಾರ್ಯದರ್ಶಿ ಸಿದ್ದಲಿಂಗೇಗೌಡ, ಉಪವಿಭಾಗಾಧಿಕಾರಿ ಮಹೇಶ್, ತಹಶಿಲ್ದಾರ್ ಬಸವರಾಜು, ತಾಪಂ ಇಒ ಗುರು ಶಾಂತಪ್ಪ ಬೆಳ್ಳುಂಡಗಿ, ಬಿಇಒ ಮಂಜುಳಾ ಇತರರಿದ್ದರು.

# ನಾಡಿನ ಅಭಿವೃದ್ಧಿಗೆ ಕೆಂಪೇಗೌಡರ ಕೊಡುಗೆ ಅಪಾರ

### ಶಾಸಕ ಸಿ. ಪುಟ್ಟರಂಗಶೆಟ್ಟಿ ಅಭಿಮತ



ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿ ಸತ್ಕರಿಸಲಾಯಿತು.

ಚಾಮರಾಜನಗರ, ಜೂ.27 – ವಿಶ್ವಭೂಪಟದಲ್ಲಿ ಗುರುತಿಸಿಕೊಂಡಿರುವ ಬೆಂಗಳೂರಿನ ಅಭಿವೃದ್ಧಿಗೆ ನಾಡಪ್ರಭು ಕೆಂಪೇಗೌಡರ ಕೊಡುಗೆ ಅಪಾರ ಎಂದು ಶಾಸಕಸಿ. ಪುಟ್ಟರಂಗಶೆಟ್ಟಿ ತಿಳಿಸಿದ್ದಾರೆ.

ನಗರದ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಕೆಂಪೇಗೌಡರ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕರ್ನಾಟಕದ ಕಳಶಪ್ರಾಯವಾಗಿರುವ ಬೆಂಗಳೂರು ಪ್ರಗತಿಗೆ ನಾಡಪ್ರಭು ಕೆಂಪೇಗೌಡರ ಆಡಳಿತ ಕಾರ್ಯವೈಖರಿ ನಮ್ಮೆಲ್ಲರಿಗೂ ಮಾದರಿಯಾಗಿದೆ. ಭಾರತ ಎಂದರೇ ಬೆಂಗಳೂರು ಎನ್ನುವಷ್ಟರಮಟ್ಟಿಗೆ ಬೆಳೆದಿದೆ ಎಂದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬೆಂಗಳೂರಿನಾದ್ಯಂತ ಕೆರೆಕಟ್ಟೆ, ಉದ್ಯಾನವನ, ಸಾಕಷ್ಟು ದೇವಸ್ಥಾನಗಳನ್ನು ನಿರ್ಮಿಸಿದ ಕೆಂಪೇಗೌಡ ಅವರ ಜನಪರ ಯೋಜನೆಗಳ ಸಾಧನೆಗಳನ್ನು ಪರಿಗಣಿಸಿ ಸರ್ಕಾರವು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಅವರ ಹೆಸರನ್ನಿಟ್ಟಿದೆ. ಇದು ಕೆಂಪೇಗೌಡ ಅವರಿಗೆ ಸಲ್ಲುವ ಗೌರವವಾಗಿದೆ ಎಂದರು.

ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವ ವಿದ್ಯಾಲಯದ ಪರೀಕ್ಷಾಂಗ ಕುಲಸಚಿವ ಡಾ. ಎಂ.ಜಿ. ಮಂಜುನಾಥ್ ಮುಖ್ಯ ಭಾಷಣ ಮಾಡಿ ಬುದ್ಧ ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ ಅವರಂತೆ ನಾಡಪ್ರಭು ಕೆಂಪೇಗೌಡ ಅವರು ಸಮಾಜದ ಎಲ್ಲಾ ವರ್ಗಗಳ ಜನರನ್ನು ಸರ್ವ ಸಮನ್ವಯದಿಂದ ಕಂಡರು. ಎಲ್ಲಾ ಸ್ತರಗಳ ಜನರಿಗೂ ಬೆಂಗಳೂರಿನಲ್ಲಿ ಆಶ್ರಯ ನೀಡಿ ಅವರ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಒದಗಿಸಿಕೊಟ್ಟು ಜನಸಾಮಾನ್ಯರ ಏಳಿಗೆಗೆ ಕಾರಣರಾದರು ಎಂದರು.

ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಉಪಾಧ್ಯಕ್ಷ ಹೆಚ್.ಎಸ್. ಮಮತ, ಜಿಪಂ ಸಿಇಒ ಮೋನಾ ರೋತ್, ಸಮಾಜದ ತಾಲೂಕು ಅಧ್ಯಕ್ಷ ಸುದರ್ಶನ ಗೌಡ ಮಾತನಾಡಿದರು. ಇದೇ ವೇಳೆ ನಾಡಪ್ರಭು ಕೆಂಪೇಗೌಡ ಅವರ ಜೀವನ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಪಸರಿಸುವ ಸಲುವಾಗಿ ಜಿಲ್ಲೆಯ ವಿವಿಧ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಪ್ರಬಂಧ, ಗಾಯನ, ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆ, ಆಶುಭಾಷಣ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸ್ಮರಣಿಕೆ, ಪ್ರಮಾಣಪತ್ರ, ನಗದು ಬಹುಮಾನ ವಿತರಿಸಲಾಯಿತು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ನಂಜುಂಡಯ್ಯ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ತಹಶೀಲ್ದಾರ್ ಗಿರಿಜಾ, ಸಮಾಜದ ಮುಖಂಡರಾದ ಪುಟ್ಟಸ್ವಾಮಿಗೌಡ, ಚಿನ್ನಮುತ್ತು, ಸೋಮಶೇಖರ್, ನಾಗೇಂದ್ರಗೌಡ, ಚಾ.ರಂ. ಶ್ರೀನಿವಾಸಗೌಡ, ಪಣ್ಯದಹುಂಡಿ ರಾಜು, ಇತರರು ಕಾರ್ಯಕ್ರಮದಲ್ಲಿ ಇದ್ದರು.

## ಕಾರು–ಬೈಕ್ ಡಿಕ್ಕಿ: ಸವಾರರ ಸಾವು





ನಟರಾಜು, ಮಹೇಶ್

**ಕೊಳ್ಳೇಗಾಲ:** ತಾಲೂಕಿನ ಸತ್ತೇಗಾಲ ಬೈಪಾಸ್ ರಸ್ತೆಯಲ್ಲಿ ಕಾರು ಮತ್ತು ಬೈಕ್ ನಡುವೆ ನಡೆದ ಅಪಘಾತದಿಂದಾಗಿ ಇಬ್ಬರು ಬೈಕ್ ಸವಾರರು ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ನಡೆದಿದೆ.

ಸತ್ತೇಗಾಲ ಗ್ರಾಮದ ನಟರಾಜು (64), ಮಹೇಶ್ ಅಲಿಯಾಸ್ ಮಾಯಪ್ಪ(50) ಮೃತಪಟ್ಟ ನತದೃಷ್ಟ ಬೈಕ್ ಸವಾರರು. ಮೃತರಿಬ್ಬರು ಗ್ರಾಮದ ಹೊರವಲಯದಲ್ಲಿರುವ ಜಮೀನಿನಲ್ಲಿ ಕೆಲಸ ಮುಗಿಸಿ ಸತ್ತೇಗಾಲ ಕಡೆಗೆ ತೆರಳುವಾಗ ಕೊಳ್ಳೇಗಾಲದಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಬೈಕ್ ಸವಾರರಿಬ್ಬರು ಸಾವನ್ನಪ್ಪಿದ್ದು, ಕಾರು ಸಹಾ ಸಮೇತ ಹಳ್ಳಕ್ಕೆ ನುಗ್ಗಿದೆ.

ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು, ಮೃತದೇಹವನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು.

## ಯುಜಿ ಸಿಇಟಿ ಸೀಟು ಹಂಚಿಕೆ ಮಂಥನ ಕಾರ್ಯಾಗಾರ

**ಚಾಮರಾಜನಗರ:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಬೇಡರಪುರ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ 'ಯು.ಜಿ. ಸಿ.ಇ.ಟಿ–2025 ಸೀಟು ಹಂಚಿಕೆ ಮಂಥನ' ಸಂಬಂಧಿತ ವೃತ್ತಿಪರ ಕೋರ್ಸ್‌ಗಳ ಆಯ್ಕೆ ಪ್ರಕ್ರಿಯೆ ಕಾರ್ಯಾಗಾರವನ್ನು ಜೂ.28ರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಗರದ ಹೊರವಲಯದಲ್ಲಿರುವ ಬೇಡರಪುರ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಾಗಾರದಲ್ಲಿ ಜಿಲ್ಲೆಯ ಹಾಗೂ ಸುತ್ತಮುತ್ತಲಿನ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಯು.ಜಿ. ಸಿ.ಇ.ಟಿ–2025ರ ವೃತ್ತಿಪರ ಕೋರ್ಸ್‌ಗಳ ಆಯ್ಕೆ ಪ್ರಕ್ರಿಯೆಯು ಪ್ರಾರಂಭವಾಗಲಿದ್ದು, ಈ ಸಮಯದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಹಾಗೂ ಕಾಲೇಜು ಮತ್ತು ಕೋರ್ಸುಗಳ ಆಯ್ಕೆ ಸೇರಿದಂತೆ ಇನ್ನಿತರೆ ವಿಷಯಗಳ ಕುರಿತು ಸವಿವರವಾಗಿ ತಿಳಿಸಿಕೊಡಲಾಗುವುದು. ಮಾಹಿತಿಗಾಗಿ ಮೊ.ಸಂ 9448951352, 08226–230055 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೆಸ್ತೂರು: ನರೇಗಾ ಕೆಲಸ ನೀಡುವಂತೆ ಪ್ರತಿಭಟನೆ



ಕೆಸ್ತೂರು ಗ್ರಾಮದಲ್ಲಿ ಶುಕ್ರವಾರ ನರೇಗಾ ಕೂಲಿ ಕಾರ್ಮಿಕರು ಗ್ರಾಪಂ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಯಳಂದೂರು, ಜೂ.27 (ವಿ.ನಾಗರಾಜು)–ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಗ್ರಾಮದಲ್ಲಿ ಕೂಲಿಯನ್ನು ನೀಡುವಂತೆ ಒತ್ತಾಯಿಸಿ ನರೇಗಾ ಕೂಲಿ ಕಾರ್ಮಿಕರು ತಾಲೂಕಿನ ಕೆಸ್ತೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರಸಕ್ತ ಸಾಲಿನಲ್ಲಿ ಉದ್ಯೋಖಾತ್ರಿ ಯೋಜನೆಯಡಿಯಲ್ಲಿ ಹಲವು ದಿನಗಳಿಂದ ಕೆಲಸವನ್ನು ನೀಡುತ್ತಿಲ್ಲ. ಗುತ್ತಿಗೆದಾರರು, ಕಮಿಷನ್ ಕೊಡುವವರಿಗೆ ಕೂಲಿ ನೀಡಲಾಗುತ್ತಿದೆ ಪಂಚಾಯಿತಿ ಸದಸ್ಯರು, ಪಿಡಿಒ ಜೊತೆಗೂಡಿ ಅವರ ಇಚ್ಛಾನುಸಾರ ಕೂಲಿ ಕೆಲಸವನ್ನು ಮಾಡುತ್ತಿದ್ದಾರೆ. ಕೂಲಿಯಾಳುಗಳನ್ನು ಆಟೋಗಳಲ್ಲಿ ತುಂಬಿಸಿ ಪೋಟೋ ತೆಗೆಯಿಸಿ ಕೆಲಸ ಮಾಡದೆ ವಾಪಸ್ಸು ಕಳುಹಿಸಲಾಗುತ್ತದೆ. ಜೆಸಿಬಿಯಲ್ಲಿ ಕೆಲಸ ಮಾಡುವರಿಗೆ ಬಿಲ್ ಪಾವತಿಸಲಾಗಿದೆ. ಆದರೆ ಪ್ರಾಮಾಣಿಕವಾಗಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ಕೆಲಸನವನ್ನು ನೀಡುತ್ತಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿದರೆ ಇಲ್ಲಿನ ಪಿಡಿಒ ನಮಗೆ ಸಮರ್ಪಕ ಉತ್ತರ ನೀಡುತ್ತಿಲ್ಲ. ಅಲ್ಲದೆ ಗ್ರಾಮದ ಪರಿಮಿತಿಯೊಳಗೆ ನಮಗೆ ಕೂಲಿ ಕೆಲಸವನ್ನು ನೀಡಿ ಎಂದು ಮನವಿ ಮಾಡಿದರೆ ಇದಕ್ಕೆ ಸ್ಪಂದಿಸುತ್ತಿಲ್ಲ. ಗ್ರಾಮದಲ್ಲೇ ನರೇಗಾದಲ್ಲಿ ಕೆಲಸ ಮಾಡಲು ಅವಕಾಶವಿದ್ದರೂ ಸಹ ನಮಗೆ ಕೆಲಸ ನೀಡುತ್ತಿಲ್ಲ. ಆದರೆ ಬೇರೆಯವರು ಇಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲಿ ಕಾರ್ಮಿಕರ ನಡುವೆಯೇ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಪಿಡಿಒ ಹಾಗೂ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ನರೇಗಾ ಸಹಾಯಕ ನಿರ್ದೇಶಕ ಕೆ.ಎಂ.ರವೀಂದ್ರ ಭೇಟಿ ನೀಡಿ ಮಾತನಾಡಿ, ನಿಮಗೆ ಎನ್‌ಎಮ್‌ಆರ್‌ನ್ನು ತೆಗೆದುಕೊಡುವಂತೆ ನಾನು ಸಂಬಂಧಪಟ್ಟ ಪಿಡಿಒಗೆ ಸೂಚನೆ ನೀಡಿದ್ದೇನೆ. ನಾಳೆ ಶನಿವಾರದಿಂದ ಕೆಲಸವನ್ನು ಮಾಡಿ, ಈಗಾಗಿರುವ ಲೋಪವನ್ನು ಸರಿಪಡಿಸುವ ನಿಟ್ಟಿನಲ್ಲಿ ನಾನು ಸೂಕ್ತ ಕ್ರಮ ವಹಿಸುತ್ತೇನೆ ಎಂದು ಭರವಸೆಯನ್ನು ನೀಡಿದ ಮೇಲೆ ಪ್ರತಿಭಟನೆಯನ್ನು ಹಿಂಪಡೆಯಲಾಯಿತು. ಪಿಡಿಒ ಮಹದೇವಸ್ವಾಮಿ, ನರೇಗಾ ಕೂಲಿ ಕಾರ್ಮಿಕರಾದ ಶಿವಮ್ಮ, ಶೋಭಾ ದೊಡ್ಡಮ್ಮ, ಸವಿತಾ, ಸುಶೀಲಾ, ಮೀನಾಕ್ಷಿ, ಗೀತಾ, ಮಹದೇವಮ್ಮ, ಸಿದ್ದಮ್ಮ, ಶಾರದಾ, ಕಾವ್ಯ, ಮಂಗಳಮ್ಮ ಸೇರಿದಂತೆ ನೂರಾರು ಮಂದಿ ಇದ್ದರು.

## ಜೂ.30, ಜಿಲ್ಲಾ ಅಭಿವೃದ್ಧಿ ಸಮನ್ವಯ ಸಮಿತಿ ಸಭೆ

ಚಾಮರಾಜನಗರ, ಜೂ.27 – ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಪರಿಶೀಲನಾ ಸಭೆಯು ಸಂಸದ ಸುನೀಲ್ ಬೋಸ್ ಅಧ್ಯಕ್ಷತೆಯಲ್ಲಿ ಜೂ.30ರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಕಥೆಗಳ ಕುರಿತ ವಿಶೇಷ ಉಪನ್ಯಾಸ



ಡಾ. ತ್ರಿವೇಣಿ

**ಚಾಮರಾಜನಗರ:** ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಹಾಗೂ ಕನ್ನಡ ಸಾಹಿತ್ಯ ಅಕಾಡೆಮಿ ಮತ್ತು ಚಕೋರ ಸಾಹಿತ್ಯ ವಿಚಾರ ವೇದಿಕೆ ವತಿಯಿಂದ ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರ ಕಥೆಗಳ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೃಷ್ಣಮೂರ್ತಿ ಹನೂರು ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಮುಸ್ಲಿಂ ಸಂವೇದನೆಯ ಕತೆಗಾರ್ತಿ ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪ ಭಾಸ್ತಿ ಅವರಿಗೆ ಬೂಕರ್ ಪ್ರಶಸ್ತಿ ಬಂದಿರುವುದು ಹೆಮ್ಮೆಯ ಸಂಗತಿ. ಸಾಹಿತ್ಯದಲ್ಲಿ ಬೇರೆ ಬೇರೆ ಆಯಾಮಗಳನ್ನು ಹುಡುಕುವುದು ತರವಲ್ಲ, ಪ್ರತಿ ಸಾಹಿತ್ಯ ಮಾನವ ಸಂವೇದನೆಯನ್ನು ಒಳಗೊಂಡಿರುವ ಸಾಹಿತ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಶೇಷ ಉಪನ್ಯಾಸ ನೀಡಿದ ಡಾ. ತ್ರಿವೇಣಿ ಅವರು ಪುರುಷನಿಷ್ಠ ಪರಂಪರೆ ಹಾಗೂ ಸಂಸ್ಕೃತಿಯ ಹಿನ್ನೆಲೆ ಇರುವ ಭಾರತದಲ್ಲಿ ಹೆಣ್ಣಿನ ಸಂವೇದನೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ಅದನ್ನು ತನ್ನದೇ ಅನುಭವವೆಂದು ಪರಿಗಣಿಸಿ ಈ ನೆಲದಲ್ಲಿ ಮಹಿಳೆಯರ ಮೇಲೆ ಆಗುವ ಶೋಷಣೆ ಹಾಗೂ ಲಿಂಗ ಅಸಮಾನತೆಯಂತಹ ಅನ್ಯಾಯಗಳನ್ನು ತಮ್ಮದೇ ಆದ ಸೃಜನಶೀಲ ಹಾಗೂ ಕಲಾತ್ಮಕತೆ ಮೂಲಕ ಅಭಿವ್ಯಕ್ತಪಡಿಸಿ ಮಹಿಳೆಯರ ಧ್ವನಿಯಾಗಿ ಬಾನು ಮುಷ್ತಾಕ್ ನಿಲ್ಲುತ್ತಾರೆ. ಅವರ ಕಥೆಗಳು ಕೇವಲ ಈ ನೆಲದ ವೇದನೆಯಷ್ಟೇ ಆಗಿರದೆ ಇಡೀ ಜಗತ್ತಿನ ಮಹಿಳೆಯರ ರೋಧನೆಯೂ ಆಗಿದೆ. ಅವರ ಕಥೆಗಳು ಬೂಕರ್ ಪ್ರಶಸ್ತಿಗೆ ಅರ್ಹವಾಗಿದ್ದು, ಸಾಹಿತ್ಯಕ್ಕೆ ಪ್ರಮುಖವಾಗಿ ಅದರಲ್ಲೂ ಮಹಿಳೆಯರ ಸಾಹಿತ್ಯಕ್ಕೆ ಗೌರವ ಸಿಕ್ಕಂತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಲೋಕನಾಥ್ ಸಾಹಿತ್ಯ ಮಾನವೀಯತೆ ಮತ್ತು ಸಮತೆಯನ್ನು ಬಯಸುವ ಅಸ್ತ್ರವಾಗಿದ್ದು, ಸ್ತ್ರೀ–ಪುರುಷ ಭೇದವಿಲ್ಲದೆ ಎಲ್ಲರನ್ನೂ ಒಂದಾಗಿಸುವ ಪ್ರಯತ್ನವಾಗಬೇಕು. ಎಂದರು. ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯ ಪ್ರಕಾಶ್ ರಾಜ್ ಮೇಹು, ಚಕೋರ ಜಿಲ್ಲಾ ಸದಸ್ಯ ಸಂಚಾಲಕ ವೆಂಕಟರಾಜು, ಶಿವಸ್ವಾಮಿ, ಸುರೇಶ್, ಕನ್ನಡ ವಿಭಾಗದ ಮುಖ್ಯಸ್ಥ ಮಹೇಶ್ ಬಾಬು, ಉಪನ್ಯಾಸಕ ಬಸವಣ್ಣ ಮೂಕಹಳ್ಳಿ, ಗುರುರಾಜು, ರಾಣಿ, ಮಾದೇವಮೂರ್ತಿ, ಜಗದೀಶ್, ಶಿವರಾಜು, ಮಹೇಶ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

# ರಾಜ್ಯದಲ್ಲಿ ಮಾದಕ ದ್ರವ್ಯ ಜಾಲ ಮಟ್ಟಹಾಕಲು ಸರ್ಕಾರ ಕ್ರಮ

## ತುರ್ತು ನೆರವಿಗೆ 'ರಕ್ಷಾ ಕ್ಯೂಆರ್ ಕೋಡ್'ಗೆ ಚಾಲನೆ



ಬೆಂಗಳೂರು, ಜೂ.27– ರಾಜ್ಯದಲ್ಲಿ ಮಾದಕ ದ್ರವ್ಯ ಜಾಲ ಮಟ್ಟ ಹಾಕಲು ರಾಜ್ಯ ಸರ್ಕಾರ ದಿಟ್ಟ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ತುರ್ತು ನೆರವಿಗಾಗಿ Raksha QR ಕೋಡ್‌ಗೆ ಚಾಲನೆ ನೀಡಿದೆ.

66ನೇ ಅಂತರರಾಷ್ಟ್ರೀಯ ಮಾದಕ ವಸ್ತುಗಳ ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನದ ಅಂಗವಾಗಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ರಕ್ಷಾ ಕ್ಯೂಆರ್ ಕೋಡ್‌ಗೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಮಾದಕ ವಸ್ತು ವ್ಯಸನಕ್ಕೆ ಸಿಲುಕಿ ವಿದ್ಯಾರ್ಥಿಗಳು ಉಜ್ವಲ ಭವಿಷ್ಯ ಹಾಳು ಮಾಡಿಕೊಳ್ಳಬಾರದು. ರಾಜ್ಯದ ಸರಿ ಸುಮಾರು 6.5 ಲಕ್ಷ ವಿದ್ಯಾರ್ಥಿಗಳಿಗೆ ಡ್ರಗ್ಸ್ ದುಷ್ಪರಿಣಾಮ ಕುರಿತು ಅರಿವು ಮೂಡಿಸಲಾಗಿದೆ. ಪ್ರತಿ ತಿಂಗಳು ತಮ್ಮ ಠಾಣಾ ಸರಹದ್ದಿನ ಶಾಲಾ–ಕಾಲೇಜುಗಳಿಗೆ ಪೊಲೀಸರು ಭೇಟಿ ನೀಡಿ ಮಾಹಿತಿ ಪಡೆಯಬೇಕು. ಅಲ್ಲದೆ ಡ್ರಗ್ಸ್ ವಹಿವಾಟು ಜಾಲಕ್ಕೆ ವಿದ್ಯಾರ್ಥಿಗಳು ಸಿಲುಕದಂತೆ ತಡೆಗಟ್ಟಲು ಕಾಲೇಜು ಮಟ್ಟದಲ್ಲಿ ಮಾದಕ ವಸ್ತು ನಿಗ್ರಹ ಸಮಿತಿ ರಚಿಸುವಂತೆ ಸೂಚಿಸಲಾಗಿದೆ ಎಂದು ಹೇಳಿದರು.

ಡ್ರಗ್ಸ್ ವಿಚಾರದಲ್ಲಿ ರಾಜ್ಯ ಪೊಲೀಸ್ ಇಲಾಖೆ ಯಾವುದೇ ಕಾರಣಕ್ಕೂ ರಾಜೀ ಮಾಡಿಕೊಳ್ಳುವುದಿಲ್ಲ. ಡ್ರಗ್ಸ್ ಚಟುವಟಿಕೆಯ ಬಗ್ಗೆ ಗೊತ್ತಾದ ಕೂಡಲೇ ಸಾರ್ವಜನಿಕರು ಕ್ಯೂಆರ್ ಕೋಡ್ ಮೂಲಕ ಪೊಲೀಸರಿಗೆ ಮಾಹಿತಿ ನೀಡಬೇಕು. ತಮ್ಮ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಕಾನೂನು ಬಾಹಿರ ಕೃತ್ಯಗಳಿಗೆ ನಾಗರಿಕರು ಆಸ್ಪದ ಕೊಡಬಾರದು ಎಂದು ತಿಳಿಸಿದರು.

ರಾಜ್ಯದಲ್ಲಿ ಡ್ರಗ್ಸ್‌ನಿಂದಾಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಡ್ರಗ್ಸ್ ದಂಧೆಯನ್ನು ಮಟ್ಟ ಹಾಕಲು ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೆ, ಈ ಜಾಲವನ್ನು ಕೇವಲ ಕಾನೂನು ಮೂಲಕ ನಿಯಂತ್ರಿಸಲು ಸಾಧ್ಯವಿಲ್ಲ ಜನರೂ ಜಾಗೃತರಾಗಬೇಕು ಎಂದರು.

ಈಗಾಗಲೇ ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಆಸ್ತಿ ಮುಟ್ಟುಗೋಲು ಹಾಗೂ ಗೂಂಡಾ ಕಾಯ್ದೆಯಡಿ ಪ್ರಕರಣದಂತಹ ಕಠಿಣ ಕ್ರಮ ಜರುಗಿಸಲಾಗಿದೆ. ಕಳೆದ ವಿಧಾನ ಸಭಾ ಅಧಿವೇಶನದಲ್ಲೇ ಮಾದಕ ವ್ಯಸನ ಮುಕ್ತ ಕರ್ನಾಟಕ ಮಾಡುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಡ್ರಗ್ಸ್ ಚಟುವಟಿಕೆಯನ್ನು ಮಟ್ಟಹಾಕಲು ಮತ್ತಷ್ಟು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಇದೇ ವೇಳೆ ಕಳೆದ ಒಂದು ವರ್ಷದಲ್ಲಿ ನಾಲ್ಕು ಟನ್ ಗಾಂಜಾ ಸೇರಿ 45 ಕೋಟಿ ರೂ. ಮೌಲ್ಯದ ಡ್ರಗ್ಸ್ ಅನ್ನು ಬೆಂಗಳೂರು ಪೊಲೀಸರು ಜಪ್ತಿ ಮಾಡಿದ್ದಾರೆ. ಈ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 200ಕ್ಕೂ ಹೆಚ್ಚು ವಿದೇಶಿಯರನ್ನು ಗಡಿಪಾರು ಮಾಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಜಪ್ತಿಯಾದ ಡ್ರಗ್ಸ್ ಅನ್ನು ನಾಶಗೊಳಿಸುವ ಕಾರ್ಯಕ್ಕೆ ಗೃಹ ಸಚಿವರು ಆನ್‌ಲೈನ್ ಮೂಲಕ ಚಾಲನೆ ನೀಡಿದರು.

# ಚಿನ್ನಸ್ವಾಮಿ ಸ್ಟೇಡಿಯಂಗೆ ಉಚಿತ ಪ್ರವೇಶ ಅಂದಿದ್ದೆ ನೂಕು–ನುಗ್ಗಲಿಗೆ ಕಾರಣವಾಯ್ತು

## ಮ್ಯಾಜಿಸ್ಟ್ರೇಟ್ ಮುಂದೆ ಬೆಂಗಳೂರು ಮಾಜಿ ಪೊಲೀಸ್ ಆಯುಕ್ತ ದಯಾನಂದ್ ಹೇಳಿಕೆ

ಬೆಂಗಳೂರು, ಜೂ.27(ಕೆಎಂಶಿ)– ಐಪಿಎಲ್‌ನಲ್ಲಿ ಆರ್‌ಸಿಬಿ ಜಯ ಗಳಿಸಿದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಾಲ್ತುಳಿತ ಸಂಭವಿಸಲು ಉಚಿತ ಪ್ರವೇಶ ಘೋಷಣೆ ಮಾಡಿದ್ದೇ ಪ್ರಮುಖ ಕಾರಣ ಎಂದು ಅಮಾನತಾಗಿರುವ ಬೆಂಗಳೂರು ನಗರ ಪೊಲೀಸ್ ಮಾಜಿ ಆಯುಕ್ತ ಬಿ.ದಯಾನಂದ್ ಮ್ಯಾಜಿಸ್ಟ್ರೇಟ್ ವಿಚಾರಣೆಯಲ್ಲಿ ತಿಳಿಸಿದ್ದಾರೆ.



ಆರ್‌ಸಿಬಿ ವಿಜಯೋತ್ಸವ ವೇಳೆ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದ ಕಾಲ್ತುಳಿತ ಪ್ರಕರಣದ ಮ್ಯಾಜಿಸ್ಟ್ರೇಟ್ ತನಿಖೆಯಲ್ಲಿ ಪ್ರಮುಖ ಭಾಗವಾದ ದಯಾನಂದ್ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು.

ಮ್ಯಾಜಿಸ್ಟ್ರೇಟ್ ಮುಂದೆ ವಿಚಾರಣೆಗೆ ಹಾಜರಾದ ದಯಾನಂದ್ ಅಂದು ನಡೆದ ಘಟನೆಯನ್ನು ಸಂಪೂರ್ಣವಾಗಿ ವಿವರಿಸಿದ್ದಾರೆ. ಘಟನೆ ನಡೆದ ದಿನ ಸ್ಟೇಡಿಯಂನ 21 ಗೇಟ್‌ಗಳಿಗೂ ನಾನೇ ಖುದ್ದಾಗಿ ಭೇಟಿ ನೀಡಿದ್ದೆ ಸಂಪೂರ್ಣವಾಗಿ ಬಂದೋಬಸ್ತ್ ಮಾಡಿಕೊಳ್ಳಲಾಗಿತ್ತು. ಪ್ರತಿ ಬಾರಿ ಐಪಿಎಲ್ ಮ್ಯಾಚ್ ನಡೆಯುವಾಗ ಇರುವಷ್ಟು ಬಂದೋಬಸ್ತ್ ಮಾಡಿಕೊಳ್ಳಲಾಗಿತ್ತು. ಆದರೆ ಅಂದು ಗೇಟ್ ತೆಗೆಯಲು ತಡಮಾಡಿದರು, ಉಚಿತ ಪ್ರವೇಶ ಎಂಬುದಾಗಿ ಘೋಷಣೆ ಮಾಡಿದ್ದರಿಂದ ಇಷ್ಟೆಲ್ಲ ಅವಾಂತರ ನಡೆದಿದೆ ಎಂದಿದ್ದಾರೆ.

ಆರ್‌ಸಿಬಿ ವಿಜಯೋತ್ಸವ ವೇಳೆ ಕಾಲ್ತುಳಿತಕ್ಕೆ ಬಲಿಯಾದ 11 ಜನರ ಸಾವಿನ ತನಿಖೆ ಅಂತಿಮ ಹಂತಕ್ಕೆ ಬಂದಿದ್ದು, ಇದುವರೆಗೆ 140 ಸಾಕ್ಷಿಗಳ ಹೇಳಿಕೆ ದಾಖಲಿಸಲಾಗಿದ್ದು, ಮುಂದಿನ ವಾರ ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಕೆಯಾಗುವ ಸಾಧ್ಯತೆಯಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23




**ಮೈಸೂರು ಮಿತ್ರ 46 ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೋಮವಾರ ಗುರುವಾರ ಶನಿವಾರ**
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಬಳ್ಳೆ ಆನೆ ಶಿಬಿರದಲ್ಲಿ

# ಅಂಬಾರಿ ಆನೆ ಅರ್ಜುನನ ಪ್ರತಿಮೆ ಲೋಕಾರ್ಪಣೆ

## ಅರ್ಜುನ ರಾಜ್ಯದ 7 ಕೋಟಿ ಜನರ ಮನಸ್ಸಿನಲ್ಲಿ ನೆಲೆಸಿದ್ದಾನೆ: ಅರಣ್ಯ ಸಚಿವ ಈಶ್ವರ ಖಂಡ್ರೆ





ಡಿ.ಬಿ.ಕುಪ್ಪೆ ವಲಯದ ಬಳ್ಳೆ ಆನೆ ಶಿಬಿರದಲ್ಲಿ ನೂತನವಾಗಿ ನಿರ್ಮಿಸಿರುವ ಅಂಬಾರಿ ಆನೆ ಅರ್ಜುನನ ಪ್ರತಿಮೆಯನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆಗೊಳಿಸಿದರು.

ಹೆಚ್.ಡಿ.ಕೋಟೆ, ಜೂ.27– ಅರ್ಜುನ ಆನೆ ಸಾವನ್ನಪ್ಪಿ ವರ್ಷಗಳೇ ಕಳೆದಿದ್ದರೂ ರಾಜ್ಯದ 7 ಕೋಟಿ ಜನರ ಮನಸ್ಸಿನಲ್ಲಿ ನೆಲೆಸಿದ್ದಾನೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ತಾಲೂಕಿನ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಆನೆ ಶಿಬಿರದಲ್ಲಿ ಸುಮಾರು 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅಂಬಾರಿ ಆನೆ ಅರ್ಜುನನ ಪ್ರತಿಮೆ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ದಸರಾದಲ್ಲಿ 8 ಬಾರಿ ಅಂಬಾರಿ ಹೊತ್ತು ಕ್ಯಾಪ್ಟನ್ ಆಗಿದ್ದ. ಗಾಂಭೀರ್ಯಕ್ಕೂ ಹೆಸರಾಗಿದ್ದ. ಪುಂಡಾನೆ ಪಳಗಿಸಲು ಇವನೇ ಬೇಕಾಗಿದ್ದ. ಹುಲಿ ಸೆರೆಗೂ ಸಹ ಇವನೇ ಬೇಕಾಗಿದ್ದ. ರಾಜ್ಯದ ವಿವಿಧ ಕಡೆ ಪ್ರಾಣಿ ಸಂಘರ್ಷಗಳಾದಾಗ ಅವುಗಳನ್ನು ಸೆರೆ ಹಿಡಿಯಲು ಅರ್ಜುನ ಅಲ್ಲಿ ಹಾಜರಿರುತ್ತಿದ್ದ ಎಂದು ಸಚಿವರು ಅರ್ಜುನನನ್ನು ಸ್ಮರಿಸಿದರು.

ಅರ್ಜುನ ಆನೆ ಕಾಳಗದಲ್ಲಿ ಸಾವನ್ನಪ್ಪಿದಾಗ ಹೆಚ್.ಡಿ.ಕೋಟೆ ಜನತೆ ಆನೆಯನ್ನು ಬಳ್ಳೆಯಲ್ಲೇ ಸಮಾಧಿ ಮಾಡುವಂತೆ ಮನವಿ ಸಲ್ಲಿಸಿದ್ದರು. ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ ಬದಲಿಗೆ ಅಂದು ಕಾಳಗ ನಡೆದ ಸ್ಥಳದಲ್ಲೇ ಸಮಾಧಿ ಮಾಡಲಾಯಿತು. ಆದರೆ ಯಸಳೂರು ಹಾಗೂ ಬಳ್ಳೆ ಶಿಬಿರದಲ್ಲಿ ಅರ್ಜುನ ಆನೆ ಪ್ರತಿಮೆ ನಿರ್ಮಾಣ ಮಾಡಲಾಗಿದೆ ಎಂದರು.

ಅರ್ಜುನನ ಶೌರ್ಯ ಮತ್ತು ಸಾಧನೆಯನ್ನು ಎಲ್ಲರಿಗೂ ತಿಳಿಸುವ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಬೇಕಾದ ಯೋಜನೆಗಳನ್ನು ಬಳ್ಳೆಯಲ್ಲೇ ರೂಪಿಸಲಾಗುವುದು ಎಂದರು.

ಮಾನವ ಪ್ರಾಣಿ ಸಂಘರ್ಷ ತಡೆಯಲು ಎಷ್ಟು ರೈಲ್ವೇ ಬ್ಯಾರಿಕೇಡ್ ಅಳವಡಿಸಬೇಕು ಎಂಬುದರ ವರದಿ ತಯಾರಿಸಲಾಗುತ್ತಿದ್ದು, ಎಷ್ಟು ಹಣ ಬೇಕು ಅದನ್ನು ಸಿಎಂ ಸಿದ್ದರಾಮಯ್ಯ ನೀಡಲು ಸಿದ್ಧ ಎಂದರು.

ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ 5 ಹುಲಿಗಳು ಸಾವನ್ನಪ್ಪಿರುವುದು ಬೇಸರದ ಸಂಗತಿ. ಸಾವನ್ನಪ್ಪಿದ ಹಸುವಿನ ಕಳೇಬರಕ್ಕೆ ವಿಷ ಹಾಕಿ ಹುಲಿಗಳನ್ನು ಕೊಂದಿರುವುದು ಪ್ರಾಥಮಿಕ ವರದಿಯಿಂದ ದೃಢಪಟ್ಟಿದೆ. ಪ್ರಕರಣ ಭೇದಿಸಲು ಉನ್ನತ ಮಟ್ಟದ ತನಿಖಾ ತಂಡ ರಚಿಸಲಾಗಿದೆ. ಈ ತಂಡದ ವರದಿ ಆಧರಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

> ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿ, ಅರಣ್ಯ ವ್ಯಾಪ್ತಿಯಲ್ಲಿ ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್‌ಗಳ ವಿಚಾರವಾಗಿ ಪರಿಶೀಲನೆ ನಡೆಸಲಾಗುವುದು.
> **- ಈಶ್ವರ ಖಂಡ್ರೆ, ಅರಣ್ಯ ಸಚಿವ.**

ಮುಂದಿನ ದಿನಗಳಲ್ಲಿ ಕಾಡಂಚಿನ ಪ್ರದೇಶದಲ್ಲಿ ಪ್ರಾಣಿಗಳ ಅಸಹಜ ಸಾವು ತಪ್ಪಿಸಲು ಡ್ರೋಣ್ ಗಸ್ತು, ಮಾನವ ಗಸ್ತು ಹೆಚ್ಚಿನ ಪ್ರಮಾಣದಲ್ಲಿ ನಡೆಸಲು ಯೋಜನೆ ರೂಪಿಸಲಾಗಿದೆ ಎಂದರು.

ಶಾಸಕ ಅನಿಲ್ ಮಾತನಾಡಿ, 8 ಬಾರಿ ಅಂಬಾರಿ ಹೊತ್ತ ಆನೆ ಪ್ರತಿಮೆ ಅನಾವರಣ ಮಾಡಲಾಗಿದ್ದು, ಈ ಪ್ರತಿಮೆ ಬಳ್ಳೆಯಲ್ಲಿ ನಿರ್ಮಾಣವಾಗಲು ಸದನದಲ್ಲಿ ಚರ್ಚಿಸಿ ಒಪ್ಪಿಗೆ ಪಡೆದು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿಶೇಷ ಕಾಳಜಿಯಿಂದ ಇಲ್ಲಿ ಸ್ಥಾಪಿಸಲಾಗಿದೆ ಎಂದರು.

ಕಾಡಾನೆ ಸೆರೆ ವೇಳೆ ಮೃತಪಟ್ಟಿದ್ದ ಅರ್ಜುನ ಆನೆ ಪ್ರತಿಮೆಯನ್ನು 20 ಲಕ್ಷ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದ್ದು, ಮಂಗಳೂರು ಮೂಲದ ಶಿಲ್ಪಿ ಧನಂಜಯ ಎಂಬುವವರು ಪ್ರತಿಮೆಯನ್ನು ಉತ್ತಮ ರೀತಿ ತಯಾರು ಮಾಡಿದ್ದಾರೆ ಎಂದರು.

ಆದಿವಾಸಿಗಳಿಗೆ ಹಕ್ಕುಪತ್ರ ವಿತರಣೆಗೆ ಶೀಘ್ರ ಕ್ರಮ ವಹಿಸಬೇಕು. ಈ ಭಾಗದಲ್ಲಿ ಆನೆ ಹಾಗೂ ಹುಲಿ ಹಾವಳಿ ಹೆಚ್ಚಾಗಿದ್ದು, ಅದನ್ನು ತಪ್ಪಿಸಲು ಬೇಕಾದ ಯೋಜನೆ ರೂಪಿಸುವಂತೆ ಅರಣ್ಯ ಸಚಿವರಲ್ಲಿ ಮನವಿ ಮಾಡಲಾಗಿದೆ. ಅಲ್ಲದೇ ಅರಣ್ಯದಂಚಿನಲ್ಲಿ 50 ಕಿಮೀ ಬ್ಯಾರಿಕೇಡ್ ಅವಶ್ಯಕತೆ ಇದ್ದು, ಅದರ ಕಾಮಗಾರಿ ನಡೆಸುವಂತೆಯೂ ಸಹ ಮನವಿ ಮಾಡಲಾಗಿದೆ ಎಂದರು.

ಈ ವೇಳೆ ಸಿಎಫ್‌ಗಳಾದ ಮಾಲತಿ ಪ್ರಿಯ, ಸೋನಾಲ್, ಡಿಸಿಎಫ್‌ಗಳಾದ ಸೀಮಾ, ಅಭಿಶೇಕ್, ನೆಹರು, ಪ್ರಭುಗೌಡ,

> ಅರ್ಜುನ ಆನೆ ಸೌಮ್ಯ ಸ್ವಭಾವದಿಂದ ಕೂಡಿತ್ತು. ಎಲ್ಲಾ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿತ್ತು. ಕಾಡು ಪ್ರಾಣಿಗಳನ್ನು ಹಿಮ್ಮೆಟ್ಟಿ ನಿಂತು ಕಾಡಿಗೆ ಓಡಿಸುವ ವೇಳೆ ಬಲಾಢ್ಯವಾಗಿ ನಿಂತು ಕ್ಯಾಪ್ಟನ್ ಅರ್ಜುನನಾಗಿ ಹೊರಹೊಮ್ಮಿದ್ದ. ಅರ್ಜುನನ ಸಾವು ಅರಣ್ಯ ಇಲಾಖೆಗೆ ತುಂಬಲಾರದ ನಷ್ಟವಾಗಿದೆ.
> **- ಅನಿಲ್, ಶಾಸಕ**

ಎಸಿಎಫ್ ಗಳಾದ ಮಧು, ಲಕ್ಷ್ಮಿಕಾಂತ್, ಆರ್‌ಎಫ್‌ಓಗಳಾದ ಸಿದ್ದರಾಜು, ಹನುಮಂತರಾಜು, ಸುಬ್ರಹ್ಮಣಿ, ಅಭಿಷೇಕ್, ವನ್ಯಜೀವಿ ಪಶುವೈದ್ಯ ರಮೇಶ್, ಅರ್ಜುನ ಆನೆ ಮಾವುತ ವಿನು, ತಹಸೀಲ್ದಾರ್ ಶ್ರೀನಿವಾಸ್, ಇಓ ಧರಣೇಶ್, ಮುಖಂಡರಾದ ಸತೀಶ್‌ಗೌಡ, ಸೋಮೇಶ್, ಬಿ.ವಿ.ಬಸವರಾಜು, ಹೆಚ್.ಸಿ.ನರಸಿಂಹಮೂರ್ತಿ, ಸೌಮ್ಯ, ಅಜರುದ್ದೀನ್, ಸುಬ್ರಹ್ಮಣ್ಯ ಸೇರಿದಂತೆ ಇನ್ನಿತರರಿದ್ದರು.

# 20ಕ್ಕೂ ಹೆಚ್ಚು ಮಂದಿಗೆ ಬೀದಿನಾಯಿ ಕಡಿತ

ನಂಜನಗೂಡು, ಜೂ.27– ಬೀದಿ ನಾಯಿ ಕಚ್ಚಿ 20ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಹುಲ್ಲಹಳ್ಳಿಯಲ್ಲಿ ಗುರುವಾರ ನಡೆದಿದೆ.

ಸಂಜೆ 4 ಗಂಟೆ ವೇಳೆಗೆ ಮಕ್ಕಳು ಶಾಲೆಯಿಂದ ಮನೆಗೆ ತೆರಳುತ್ತಿದ್ದಾಗ ಬೀದಿ ನಾಯಿ ಏಕಾಏಕಿ ದಾಳಿ ಮಾಡಿ ಕಚ್ಚಿ ಪರಾರಿಯಾಗಿದೆ. ನಾಯಕರ ನಾಯಕರ ಬೀದಿ, ಅಂಬೇಡ್ಕರ್ ಜೋಡಿ ರಸ್ತೆ ಹಾಗೂ ಬಸ್ ನಿಲ್ದಾಣದ ಮುಂಭಾಗದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ಓರ್ವನಿಗೂ ಕಚ್ಚಿ ಆತಂಕ ಸೃಷ್ಟಿಸಿದೆ.

ಒಟ್ಟಾರೆ ಸಂಜೆ 7ರ ವೇಳೆಗೆ ಗ್ರಾಮದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಿಶ್ಚಿತ (4 ), ಅನಿತಾ(35), ವಿನೋದ (18), ಅಂಜಲಿ(12) ಧನುಷ್ (5), ರವಿಕುಮಾರ್ (12), ಅರ್ಮಾನ್ (3), ಸವಿತಾ (37), ಗಿರೀಶ್ (40), ಉಸಬ್ ಖಾನ್ (7), ಕಾಳಸ್ವಾಮಿ (36) ನಾಯಿ ಕಡಿತಕ್ಕೆ ಒಳಗಾಗಿ ಚಿಕಿತ್ಸೆ ಪಡೆದಿದ್ದು, 10ಕ್ಕೂ ಹೆಚ್ಚು ಮಂದಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎನ್ನಲಾಗಿದೆ.

ಶಾಲಾ ಮಕ್ಕಳಿಂದ ಹಿಡಿದು ವಯಸ್ಕರ ವರೆಗೂ ಕೈ–ಕಾಲು, ಬೆನ್ನು, ತೊಡೆ ಭಾಗಗಳಿಗೆ ನಾಯಿ ಕಚ್ಚಿದೆ. ರಸ್ತೆಯಲ್ಲಿ ಸಿಕ್ಕ ಸಿಕ್ಕವರ ಮೇಲೆ ಎರಗಲು ಯತ್ನಿಸಿದ ನಾಯಿಯನ್ನು ಹಿಡಿಯಲು ಗ್ರಾಪಂ ಸಿಬ್ಬಂದಿಗಳೊಡಗೂಡಿ ಗ್ರಾಮಸ್ಥರು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಹೀಗಾಗಿ ಗ್ರಾಮದಲ್ಲಿ ಬೀದಿ ನಾಯಿ ಹಾವಳಿ ಹೆಚ್ಚಾಗಿದ್ದು, ಸಿಕ್ಕ ಸಿಕ್ಕವರನ್ನು ಕಚ್ಚುತ್ತಿರುವ ಬೀದಿ ನಾಯಿಯನ್ನು ತಕ್ಷಣ ಸೆರೆ ಹಿಡಿಯುವಂತೆ ಒತ್ತಾಯಿಸಿದ್ದಾರೆ. ಇನ್ನು ಗುರುವಾರ ಒಂದೇ ದಿನ ಗ್ರಾಮದ ಸರ್ಕಾರಿ ಆಸ್ಪತ್ರೆಯಲ್ಲಿ 11 ಮಂದಿ ರೋಗಿಗಳಿಗೆ ರೆಬಿಸ್ ಕಾಯಿಲೆ ತಡೆ ಚುಚ್ಚು ಮದ್ದು ಚಿಕಿತ್ಸೆ ಕೊಡಲಾಗಿದೆ ಎಂದು ಹುಲ್ಲಹಳ್ಳಿ ಸರ್ಕಾರಿ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

## ಡಾ.ಯತೀಂದ್ರ ಹುಟ್ಟುಹಬ್ಬ ಆಚರಣೆ



ವರುಣ ಕ್ಷೇತ್ರದ ಗೋಪಾಲಪುರದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಗೋಪಾಲಪುರ ಮಹೇಶ್ ನೇತೃತ್ವದಲ್ಲಿ ಕೇಕ್ ಕಟ್ ಮಾಡಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಮಾಜಿ ಪುರಸಭಾ ಸದಸ್ಯ ಸಿ.ಮಹದೇವ, ಡಿಸಿಸಿ ಸದಸ್ಯ ಶಿವಕುಮಾರ್, ಮಹದೇವ, (ದೇವು) ಹುಣಸೂರು ರಾಜಪ್ಪ, ರಾಮಚಂದ್ರ, ಬಿ.ರೇವಣ್ಣ ಮತ್ತಿತರಿದ್ದರು.

# ಕೆಂಪೇಗೌಡರ ಜಾತ್ಯಾತೀತ ಮನೋಭಾವ ಎಲ್ಲರೂ ಸ್ಮರಿಸಿ



ಕಾರ್ಯಕ್ರಮವನ್ನು ತಹಸೀಲ್ದಾರ್ ಮೋಹನಕುಮಾರಿ ಉದ್ಘಾಟಿಸಿದರು.

ಸರಗೂರು, ಜೂ.27– ನಾಡಪ್ರಭು ಕೆಂಪೇಗೌಡರ ಜಾತ್ಯಾತೀತ ಮನೋಭಾವ ಎಲ್ಲರು ಸ್ಮರಿಸುವಂತದ್ದು ಎಂದು ತಹಸೀಲ್ದಾರ್ ಮೋಹನ ಕುಮಾರಿ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಕೆಂಪೇಗೌಡ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಸುಬಿಗೆ ತಕ್ಕಂತೆ ಪೇಟೆ, ಪಂಥಗಳಿಗೆ ತಕ್ಕಂತೆ ಗುಡಿಗೋಪುರ, ವಸತಿಗೆ ತಕ್ಕಂತೆ ಕೆರೆ–ಕುಂಟೆಗಳನ್ನು ನಿರ್ಮಿಸಿ ಮಾದರಿ ನಗರ ನಿರ್ಮಾಣಕ್ಕೆ ಕಾರಣರಾದ ನಾಡಪ್ರಭು ಕೆಂಪೇಗೌಡರ ಜಾತ್ಯತೀತ ಮನೋಭಾವ ಎಲ್ಲರೂ ಸ್ಮರಿಸುವಂತದ್ದು. ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರನ್ನು ಕಟ್ಟಿದರು. ಎಲ್ಲಾ ಸಮುದಾಯದವರು ಸಹಬಾಳ್ವೆಯಿಂದ ಜೀವನ ನಡೆಸುವಂತೆ ಮಾಡಿದ್ದಾರೆ. ಧಾರ್ಮಿಕ, ಸಾಂಸ್ಕೃತಿಕ, ಜಾನಪದ ಕಲೆಗಳ ಬೆಳೆವಣಿಗೆ ಜೊತೆಗೆ ಎಲ್ಲಾ ಸಮುದಾಯದವರಿಗೆ ಅಧಿಕಾರ, ಶಿಕ್ಷಣ, ಸವಲತ್ತನ್ನು ನಾಡಪ್ರಭು ಕೆಂಪೇಗೌಡರು ನೀಡಿದ್ದರು ಎಂದರು.

ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಸುಧೀರ್ ಮಾತನಾಡಿ, ಕೆಂಪೇಗೌಡರು ದಕ್ಷ ಹಾಗೂ ದೂರದೃಷ್ಟಿಯುಳ್ಳ ಆಡಳಿತಗಾರನಾಗಿದ್ದು, ಕೆರೆಗಳ ನಿರ್ಮಾಣಗಳ ಮೂಲಕ ಕೃಷಿ ಹಾಗೂ ಅಂತರ್ಜಲದ ವೃದ್ಧಿಗೆ ಶ್ರಮಿಸಿದವರು. ಪ್ರಕೃತಿ ಸಮತೋಲನ, ನಿಸರ್ಗ ಸಂರಕ್ಷಣೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ಎಂದರು. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಹಾಲಪ್ಪ ಮಾತನಾಡಿದರು. ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯ ಶ್ರೀನಿವಾಸ, ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಲಯನ್ಸ್ ಮುಖಂಡರಾದ ಗಂಗಾಧರ್, ಶಿವಕುಮಾರ್, ಜ್ಯೋತಿ, ಮಾಜಿ ಗ್ರಾಪಂ ಸದಸ್ಯರಾದ ಶಿವರಾಜು, ಅಶೋಕ್ ಕುಮಾರ್, ಕಾಳಪ್ಪ, ರವಿ, ಶಿವಲಿಂಗೇ ಗೌಡ, ಭುವನೇಶ್, ಇಓ ಪ್ರೇಮ್ ಕುಮಾರ್, ಸಿಪಿಐ ಪ್ರಸನ್ನ ಕುಮಾರ್, ಮುಖಂಡರಾದ ಮಹೇಂದ್ರ, ಬೆಟ್ಟಸ್ವಾಮಿ, ಜಯರಾಂ, ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಎಎಸ್‌ಐ ನಾರಾಯಣ್, ಶಿವರಾಜು, ಸುರೇಶ್, ನಾಗೇಂದ್ರ ವೆಂಕಟೇಶ್, ರೈತ ಸಂಘದ ಕುಮಾರ್‌ಗೌಡ ಇನ್ನಿತರರಿದ್ದರು.

ಮೊದಲ ಆಷಾಡ ಶುಕ್ರವಾರ

# ಚಾಮುಂಡೇಶ್ವರಿ ದೇಗುಲಕ್ಕೆ ಹರಿದು ಬಂದ ಭಕ್ತಸಾಗರ



ಭಕ್ತರು ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು.

ನಂಜನಗೂಡು, ಜೂ.27– ಮೊದಲ ಆಷಾಢ ಶುಕ್ರವಾರದ ಪ್ರಯುಕ್ತ ನಗರದ ಕಪಿಲಾ ನದಿ ತೀರದಲ್ಲಿರುವ ಶ್ರೀಚಾಮುಂಡೇಶ್ವರಿ ದೇವಾಲಯಕ್ಕೆ ತಾಲೂಕಿನ ವಿವಿಧೆಡೆಯಿಂದ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದರು.

ಮುಂಜಾನೆಯಿಂದಲೇ ಅಮ್ಮನವರಿಗೆ ಹಾಲು, ಮೊಸರು, ಜೇನುತುಪ್ಪ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಿ, ಮಹಾ ಮಂಗಳಾರತಿ ನೆರವೇರಿಸಿದ ನಂತರ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ದೇವಾಲಯದ ಸುತ್ತಮುತ್ತ ಹಾಗೂ ದೇವಾಲಯದಲ್ಲಿರುವ ಚಾಮುಂಡೇಶ್ವರಿ ಅಮ್ಮನವರ ಮೂರ್ತಿಗೆ ವಿಶೇಷ ಹೂಗಳಿಂದ ಅಲಂಕಾರ ಮಾಡಲಾಗಿತ್ತು. ಭಕ್ತರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ, ಹರಕೆ ಕಟ್ಟಿ ಧನ್ಯತಾ ಭಾವದಿಂದ ಭಾವ ಪರವಶರಾದರು. ಮುಂಜಾನೆಯಿಂದಲೇ ಭಕ್ತರು ಅಮ್ಮನ ದರ್ಶನ ಪಡೆಯಲು ಉದ್ದನೆಯ ಸರತಿ ಸಾಲಿನಲ್ಲಿ ನಿಂತು ದೇವಾಲಯದ ಆವರಣದಲ್ಲಿ ನಿಂಬೆಹಣ್ಣಿನ ದೀಪದ ಆರತಿ ಮಾಡಿ ಹರಕೆ ತೀರಿಸಿ, ಮುತ್ತೈದೆಯರು ಬನ್ನಿ ಮರ ಪ್ರದಕ್ಷಿಣೆ ಹಾಡಿ ಮುತ್ತೈದೆಯರಿಗೆ ಬಳೆ ಅರಿಸಿನ ಕುಂಕುಮ ಬಾಗೀನ ನೀಡಿ, ಮದುವೆ ಯಾಗದ ಮಹಿಳೆಯರು ಕಂಕಣ ಭಾಗ್ಯ ಕೂಡಿ ಬರಲಿ ಎಂದು ದೀಪ ಹಚ್ಚಿದರೆ ಮದುವೆಯಾದವರು ಮಕ್ಕಳ ಭಾಗ್ಯ ದೊರಕಿಸುವಂತೆ ಹರಕೆ ಕಟ್ಟುವ ದೃಶ್ಯ ಸಾಮಾನ್ಯವಾಗಿತ್ತು. ವಿವಿಧ ಸಂಘ ಸಂಸ್ಥೆಗಳವರು ಪ್ರಸಾದ ವಿನಿಯೋಗ ಮಾಡಿದರು.

ಚಾಮುಂಡೇಶ್ವರಿ ದೇಗುಲದಲ್ಲಿ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಶ್ರೀಕಂಠೇಶ್ವರಸ್ವಾಮಿ ದೇಗುಲದ ಇಓ ಜಗದೀಶ್ ನೇತೃತ್ವದಲ್ಲಿ ಸುಗಮ ವ್ಯವಸ್ಥೆ ಮಾಡಲಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಯಿತು.

# ಚಲಿಸುತ್ತಿದ್ದ ಬಸ್‌ನಲ್ಲಿ ನಿರ್ವಾಹಕನ ಹುಟ್ಟುಹಬ್ಬ ಆಚರಣೆ



ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್

ನಂಜನಗೂಡು, ಜೂ.27– ಚಲಿಸುತ್ತಿರುವ ಸಾರಿಗೆ ಬಸ್‌ನಲ್ಲಿ ನಿರ್ವಾಹಕನ ಹುಟ್ಟುಹಬ್ಬ ಆಚರಿಸಿದ ಪರಿಣಾಮ ಚಾಲಕ ಗಾಬರಿಗೊಂಡು ಬಸ್ ಅಡ್ಡಾದಿಡ್ಡಿ ಚಲಿಸಿದ್ದರಿಂದ ಪ್ರಯಾಣಿಕರು ಗಾಬರಿಗೊಂಡ ಘಟನೆ ಜರುಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ.

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ, ಕಣೇನೂರು ಮಾರ್ಗವಾಗಿ ಹೆಚ್.ಡಿ.ಕೋಟೆಯ ಕಾರಪುರಕ್ಕೆ ತೆರಳುತ್ತಿದ್ದ (ಕೆಎ.09, ಎಫ್.5074) ಸಾರಿಗೆ ಬಸ್‌ನಲ್ಲಿದ್ದ ಮಹಿಳಾ ಪ್ರಯಾಣಿಕರು ಬಸ್‌ನ ಇಂಜಿನ್ ಮೇಲೆ ಕೇಕ್ ಇಟ್ಟು ಕತ್ತರಿಸಿ ಕಂಡಕ್ಟರ್ ಮಧುಸೂದನ್ ಅವರ ಹುಟ್ಟುಹಬ್ಬವನ್ನು ಆಚರಿಸಿದರು. ಈ ವೇಳೆ ಫ್ಲವರ್ ಬ್ಲಾಸ್ಟ್‌ನಿಂದಾಗಿ ಚಾಲಕನ ಗಮನ ಆಚರಣೆ ಕಡೆಗೆ ವಾಲಿದ್ದು, ನಿಯಂತ್ರಣ ಕಳೆದುಕೊಂಡ ಬಸ್ ಅಡ್ಡಾದಿದ್ದಿಯಾಗಿ ಚಲಿಸಿದೆ. ಈ ವೇಳೆ ಪ್ರಯಾಣಿಕರು ಗಾಬರಿಗೊಂಡಿದ್ದಾರೆ. ನಿರ್ವಾಹಕ ಮತ್ತು ಚಾಲಕನ ಹುಚ್ಚಾಟಕ್ಕೆ ಪ್ರಯಾಣಿಕರು ಬೆಚ್ಚಿಬಿದ್ದು ಸರಿಯಾಗಿ ಓಡಿಸಪ್ಪ ಎಂದು ಕೂಗಾಡಿದ್ದಾರೆ. ಪ್ರಯಾಣಿಕರೊಬ್ಬರು ಈ ವಿಡಿಯೋವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ. ಬಸ್ ನಿರ್ವಾಹಕ ಮತ್ತು ಚಾಲಕನ ವಿರುದ್ಧ ನೆಟ್ಟಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



## ವಿದ್ಯಾರ್ಥಿಗಳಿಗೆ ಸನ್ಮಾನ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಮುಖ್ಯ ಶಿಕ್ಷಕಿ ಸುಮಾರಾಣಿ, ಶಿಕ್ಷಕರಾದ ಹೇಮಪ್ರಸಾದ್, ಲೋಕೇಶ್, ಕುಬೇರ, ದೈಹಿಕ ಶಿಕ್ಷಕ ಮಂಜುನಾಥ್, ಡೇವಿಡ್ ರತ್ನಪುರಿ, ಸೋಮಯ್ಯ, ಕಲಾವಿದ ಹನುಮಯ್ಯ, ಶಾಲೆಯ ನೌಕರರು ಇತರರಿದ್ದರು.

# ಸಮಾಜಮುಖಿ ಕಾರ್ಯಗಳೊಂದಿಗೆ ಎಂಎಲ್ಸಿ ಡಾ.ಯತೀಂದ್ರ ಹುಟ್ಟುಹಬ್ಬ

**• ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ • ಶಾಲಾ ಮಕ್ಕಳಿಗೆ ನೋಟ್‌ಬುಕ್, ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು ವಿತರಣೆ**



ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ವರುಣ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ತಿ.ನರಸೀಪುರದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ತಿ.ನರಸೀಪುರ, ಜೂ.27– ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಶಾಲಾ ಮಕ್ಕಳಿಗೆ ಪುಸ್ತಕ ಹಾಗೂ ಉಪಹಾರ, ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸುವ ಮೂಲಕ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ವರುಣ ಕ್ಷೇತ್ರದ ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರ 46ನೇ ಹುಟ್ಟುಹಬ್ಬದ ಅಂಗವಾಗಿ ವರುಣ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ವಿವಿಧ ಸಮಾಜಮುಖಿ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಯತೀಂದ್ರರಿಗೆ ಮತ್ತಷ್ಟು ಉನ್ನತ ಹುದ್ದೆ ಸಿಗಲೆಂದು ಪ್ರಾರ್ಥನೆ ಸಲ್ಲಿಸಿದರು. ಮೊದಲಿಗೆ ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿದ ಕಾರ್ಯಕರ್ತರು ಡಾ.ಯತೀಂದ್ರ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಮೂಳೆ ಮತ್ತು ಕೀಲು ತಜ್ಞವೈದ್ಯ ಡಾ.ದಯಾನಂದ್ ಬಾಬು ಸಮ್ಮುಖದಲ್ಲಿ ರೋಗಿಗಳಿಗೆ ಹಣ್ಣು–ಬ್ರೆಡ್ ವಿತರಿಸಿದರು. ಬಳಿಕ ಕನಕ ಪ್ರಾಥಮಿಕ ಶಾಲೆಗೆ ತೆರಳಿ ಡಾ.ಯತೀಂದ್ರ ಭಾವಚಿತ್ರವಿದ್ದ ಬೃಹತ್ ಕೇಕ್ ಕತ್ತರಿಸುವ ಮೂಲಕ ಶಾಸಕರಿಗೆ ಹುಟ್ಟುಹಬ್ಬದ ಶುಭ ಕೋರಿದರು. ಇದೇ ವೇಳೆ ಶಾಲಾ ಮಕ್ಕಳಿಗೆ ಬುಕ್ ಮತ್ತು ಪರಿಕರಗಳನ್ನು ವಿತರಿಸಿದರು.

ಜಿಪಂ ಮಾಜಿ ಸದಸ್ಯ ಕೆ.ಮಹದೇವು ಮಾತನಾಡಿ, ಯತೀಂದ್ರ ಅವರು ವಿಧಾನ ಸಭಾ ಸದಸ್ಯರು ಹಾಗೂ ಮುಖ್ಯಮಂತ್ರಿಗಳ ಪುತ್ರರಾಗಿದ್ದರೂ, ಸಾಮಾನ್ಯ ಕಾರ್ಯಕರ್ತರಂತೆ ಎಲ್ಲರೊಂದಿಗೆ ಬೆರೆತು ಕಾರ್ಯಕರ್ತರ ಮತ್ತು ಶ್ರೀಸಾಮಾನ್ಯರ ಸಮಸ್ಯೆಗಳಿಗೆ ಧ್ವನಿಯಾಗಿದ್ದಾರೆ. ಹೀಗಾಗಿ ಹೃದಯವಂತ ನಾಯಕನಾಗಿರುವ ಅವರಿಗೆ ಮುಂದಿನ ದಿನಗಳಲ್ಲಿ ಮತ್ತಷ್ಟು ಉನ್ನತ ಸ್ಥಾನಮಾನ ಸಿಗಲಿ. ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಯತ್ತ ಚಿತ್ತ ಹರಿಸಿರುವ ಡಾ.ಯತೀಂದ್ರ ಅವರಿಗೆ ಮತ್ತಷ್ಟು ಹೆಚ್ಚಿನ ಆಯುಸ್ಸು ಶಕ್ತಿಯನ್ನು ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದರು.

ತಾಲೂಕು ಕುರುಬರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್‌ಬಾಬು ಮಾತನಾಡಿ, ಡಾ.ಯತೀಂದ್ರ ಅವರು ಸರ್ಕಾರದಿಂದ ವಿಶೇಷ ಅನುದಾನ ತರುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಅಲ್ಲದೇ ಶಿಕ್ಷಣ, ಕ್ರೀಡೆ, ಸೇರಿದಂತೆ ಸಂಕಷ್ಟದಲ್ಲಿರುವವರಿಗೆ ವೈಯಕ್ತಿಕ ನೆರವು ನೀಡುವ ಮೂಲಕ ಸೇವಾ ಕಾರ್ಯ ಗಳನ್ನು ಮಾಡಿಕೊಂಡು ಬರುತ್ತಿದ್ದು, ಸ್ಥಳೀಯ ಮಟ್ಟದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದಾರೆ ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ತಾಲೂಕು ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್, ತಾಪಂ ಮಾಜಿ ಸದಸ್ಯ ಎಂ.ರಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಮಹದೇಶ್ವರ ಬೆಟ್ಟದ ಪ್ರಾಧಿಕಾರದ ನಿರ್ದೇಶಕಿ ಭಾಗ್ಯಮ್ಮ, ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಕಿರಗಸೂರು ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಮ್ಮ, ನಿಂಗರಾಜು, ಪುರಸಭಾ ಸದಸ್ಯ ಗಣೇಶ್, ಕೆಡಿಪಿ ಮಾಜಿ ಸದಸ್ಯ ಮಿಥುನ್, ಯುವ ಘಟಕದ ಅಧ್ಯಕ್ಷ ಅಮಾಸೇಗೌಡ, ಉಪಾಧ್ಯಕ್ಷ ಪುರಿ ನಟರಾಜು, ಫೈನಾನ್ಸ್ ಕಾಂತರಾಜು, ಬೋರ್‌ವೆಲ್ ಪರಶಿವ, ಹುಣಸೂರು ನಾಗರಾಜು, ವಸಂತ, ಗೋಪಾಲ್ ರಾಜು, ಎಲ್‌ಐಸಿ ನಿಂಗರಾಜು, ಸೋಮಣ್ಣ ನಾಯಕ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ನಿರ್ದೇಶಕ ಮಸ್ತೋರು, ತುಂಬಲ ಗ್ರಾಪಂ ಮಾಜಿ ಉಪಾಧ್ಯಕ್ಷ ಶೇಖರ್, ನಿರ್ದೇಶಕ ಕಂಬಯ್ಯ, ಚಂದ್ರಶೇಖರ್ ಮತ್ತಿತರರಿದ್ದರು.

## ಡಾ.ಯತೀಂದ್ರ ರಾಜಕೀಯದಲ್ಲಿ ಮತ್ತಷ್ಟು ಉತ್ತುಂಗಕ್ಕೇರಲಿ

**ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಹಾರೈಕೆ**



ಎಂಎಲ್‌ಸಿ ಡಾ.ಯತೀಂದ್ರ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಅನ್ನಸಂತರ್ಪಣೆಗೆ ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಚಾಲನೆ ನೀಡಿದರು.

ತಿ.ನರಸೀಪುರ, ಜೂ.27– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಧಣಿವರಿಯದ ನಾಯಕರಾಗಿದ್ದು, ಅವರು ರಾಜಕೀಯದಲ್ಲಿ ಮತ್ತಷ್ಟು ಉತ್ತುಂಗಕ್ಕೇರಲಿ ಎಂದು ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು ಹಾರೈಸಿದರು.

ಎಂಎಲ್‌ಸಿ ಡಾ.ಯತೀಂದ್ರ ಅವರ 46ನೇ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ದಾಸೋಹ ಭವನದಲ್ಲಿ ಆಯೋಜಿಸಿದ್ದ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ಊಟ ಬಡಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿರುವ ಡಾ.ಯತೀಂದ್ರ ಅವರು ತಾವು ಮುಖ್ಯಮಂತ್ರಿಗಳ ಮಗ ಎಂದು ಎಲ್ಲೂ ಯಾರೊಂದಿಗೂ ಹಮ್ಮಿನಿಂದ ಮಾತನಾಡಿಲ್ಲ. ಸಾರ್ವಜನಿಕರೊಂದಿಗೆ ಸಾಮಾನ್ಯ ಪ್ರಜೆಯಂತೆ ಬೆರೆತು ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡುವ ಮೂಲಕ ರಾಜ್ಯಕ್ಕೇ ಮಾದರಿ ಶಾಸಕರಾಗಿದ್ದಾರೆ. ಅವರು ಇಂದು 46ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದು, ಕ್ಷೇತ್ರದ ಕಾರ್ಯಕರ್ತರು ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ಅರ್ಥಪೂರ್ಣವಾಗಿ ಜನ್ಮದಿನ ಆಚರಿಸುತ್ತಿದ್ದೇವೆ. ಡಾ.ಯತೀಂದ್ರ ಅವರು ಯಾವಾಗಲೂ ಕ್ಷೇತ್ರದ ಹಾಗೂ ಕ್ಷೇತ್ರದ ಜನರ ಅಭಿವೃದ್ಧಿಯತ್ತಲೇ ಚಿತ್ತಹರಿಸುವ ಜನ ಸೇವಕರಂತೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಅವರಿಗೆ ದೇವರು ಮತ್ತಷ್ಟು ಅಭಿವೃದ್ಧಿ ಕೆಲಸ ಮಾಡಲು ಆಯಸ್ಸು ಆರೋಗ್ಯ ನೀಡಲಿ, ಆ ಮೂಲಕ ಕ್ಷೇತ್ರವು ಸಮಗ್ರ ಅಭಿವೃದ್ಧಿಯತ್ತ ಸಾಗಲಿ ಎಂದರು.

ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಮಾತನಾಡಿ, ವರುಣ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನ ತಂದು ಕ್ಷೇತ್ರದ ಜನರಿಗೆ ಬೇಕಾದ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ ಜನಸೇವೆಯನ್ನೇ ತಮ್ಮ ಕಾಯಕ ಮಾಡಿಕೊಂಡಿರುವ ಯತೀಂದ್ರರಿಗೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಧಿಕಾರದೊಂದಿಗೆ ಆರೋಗ್ಯವೂ ದೊರಕಲಿ ಎಂದು ಆಶಿಸಿದರು.

ಮಾಜಿ ಜಿಪಂ ಸದಸ್ಯ ಕೆ.ಮಹದೇವ್, ಪುರಸಭೆ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್, ಸದಸ್ಯರಾದ ಬಾದಾಮಿ ಮಂಜು, ಎಲ್.ಮಂಜುನಾಥ್, ಗುರುಸ್ವಾಮಿ, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ ಸದಸ್ಯ ಹೇಮಂತ್ ಕುಮಾರ್, ಗುತ್ತಿಗೆದಾರ ಕೆಂಪಯ್ಯನಹುಂಡಿ ಮಾಧು, ಆರ್ಯ ಈಡಿಗರ ಸಂಘದ ಮಾಜಿ ಅಧ್ಯಕ್ಷ ವಾಸು, ಶ್ರೀರಾಂಪುರ ಮೂರ್ತಿ, ಅರ್ಜುನ್, ಮಾದೇಶ್, ತಿರುಮಕೂಡಲು ಲಕ್ಷ್ಮಣ, ರಾಜಣ್ಣ ಮತ್ತಿತರರಿದ್ದರು.

# ಕೊಡವ ಹಾಕಿ ಪ್ರೀಮಿಯರ್ ಲೀಗ್ ಆರಂಭ

## ಕೂರ್ಗ್ ಟೈಟಾನ್ಸ್, ಕನೆಕ್ಟಿಂಗ್ ಕೊಡವಾಸ್, ಎಂಟಿಬಿ ರಾಯಲ್ಸ್, ಅಂಜಿಗೇರಿ ನಾಡ್, ಪಾಲೆ ತಾಲೂಕು, ಕೊಡವ ವಾರಿಯರ್ಸ್‌ಗೆ ಗೆಲುವು

ಮೈಸೂರು, ಜೂ.27(ಜಿಎ)– ಕೊಡವ ಸಮಾಜ ಯುವ ವಿಭಾಗ ಮೈಸೂರು, ಕೊಡವ ಸಮಾಜ ಮೈಸೂರು ಮತ್ತು ಹಾಕಿ ಮೈಸೂರು ಸಹಯೋಗದಲ್ಲಿ ಮೈಸೂರಿನ ಚಾಮುಂಡಿ ವಿಹಾರ್ ಹಾಕಿ ಮೈದಾನದಲ್ಲಿ ಮೂರು ದಿನಗಳ ಕೊಡವ ಹಾಕಿ ಪ್ರೀಮಿಯರ್ ಲೀಗ್ (ಕೆಎಚ್‌ಪಿಎಲ್) ಆರಂಭಗೊಂಡಿದ್ದು, ಮೊದಲ ದಿನವೇ ರೋಚಕ ಪಂದ್ಯಗಳಿಗೆ ಸಾಕ್ಷಿಯಾಗಿದೆ.

ಪಂದ್ಯಾವಳಿಯಲ್ಲಿ ಕೂರ್ಗ್ ಯುನೈಟೆಡ್, ಕೊಡವು ವಾರಿಯರ್ಸ್, ಪಾಲೆ ತಾಲೂಕು, ಸೌತ್ ಸೈಡ್ ರೇಂಜರ್ಸ್, ಟೀಮ್ ಕೊಡವ ಟ್ರೈಬ್, ಕನೆಕ್ಟಿಂಗ್ ಕೊಡವಸ್, ಅಂಜಿಗೇರಿ ನಾಡ್, ಕೂರ್ಗ್ ಟೈಟಾನ್ಸ್, ಕಾಕೋಟ್ ಸ್ಟ್ರೈಕರ್ಸ್ ಮತ್ತು ಎಂಟಿಬಿ ರಾಯಲ್ಸ್ ಸೇರಿದಂತೆ ಒಟ್ಟು 10 ತಂಡಗಳು ಪಾಲ್ಗೊಂಡಿದ್ದು ಪ್ರತಿ ಪಂದ್ಯಕ್ಕೆ 34 ನಿಮಿಷಗಳನ್ನು ನಿಗದಿಪಡಿಸಲಾಗಿದ್ದು, ತಲಾ 17 ನಿಮಿಷಗಳ ಎರಡು ತಂಡಗಳಿಗೂ ಮೀಸಲಿಡಲಾಗಿದೆ. ಎಲ್ಲಾ ತಂಡಗಳು ಕಪ್‌ಗಾಗಿ ಸೆಣಸಾಟ ಆರಂಭಿಸಿವೆ.

ಪ್ರತಿ ತಂಡದಲ್ಲಿಯೂ ಒಬ್ಬ ಮಹಿಳಾ ಆಟಗಾರ್ತಿ ಮತ್ತು 18 ವರ್ಷದೊಳಗಿನ ಇಬ್ಬರು ಉದಯೋನ್ಮುಖ ಆಟಗಾರ್ತಿಯರನ್ನು ಆಯ್ಕೆ ಮಾಡಿಕೊಂಡಿದ್ದು, ಕೊಡವ ಹಾಕಿ ವೇದಿಕೆಯಲ್ಲಿ 10 ಮಹಿಳೆಯರು ಮತ್ತು 20 ಯುವ ಪ್ರತಿಭೆಗಳು ಮಿಂಚುತ್ತಿದ್ದಾರೆ. ಈ ಪಂದ್ಯಾವಳಿಯು ಯುವ ಸಬಲೀಕರಣವನ್ನು ಸಹಕಾರವಾಗಲಿದೆ.

ಉದ್ಘಾಟನ ಪಂದ್ಯದಲ್ಲಿ ಕೂರ್ಗ್ ಯುನೈಟೆಡ್ ತಂಡವು ಕೂರ್ಗ್ ಟೈಟಾನ್ಸ್ ತಂಡವನ್ನು ಎದುರಿಸುವುದರೊಂದಿಗೆ ಅದ್ಧೂರಿಯಾಗಿ ಆರಂಭವಾಯಿತು. ಉದ್ಘಾಟನಾ ಪಂದ್ಯದಲ್ಲಿ, ಕೂರ್ಗ್ ಟೈಟಾನ್ಸ್ ಕೂರ್ಗ್ ಯುನೈಟೆಡ್ ತಂಡವನ್ನು 1–0 ಗೋಲುಗಳಿಂದ ಸೋಲಿಸಿತು. ಟೈಟಾನ್ಸ್ ಪರವಾಗಿ ಕುಟ್ಟಿಮಾಡ ಭುವನ್ ಪೊನ್ನಣ್ಣ ಪಂದ್ಯದ ಏಕೈಕ ಗೋಲು ಗಳಿಸಿದರು. ಇನ್ನೊಂದು ಪಂದ್ಯದಲ್ಲಿ, ಕನೆಕ್ಟಿಂಗ್ ಕೊಡವಾಸ್ ಕಾಕೋಟ್ ಸ್ಟ್ರೈಕರ್ಸ್ ಅನ್ನು 1–0 ಗೋಲುಗಳಿಂದ ಸೋಲಿಸಿತು. ಕನೆಕ್ಟಿಂಗ್ ಕೊಡವಾಸ್ ಪರ ಮುಕ್ಕಾಟಿರ ಪೂಣಚ್ಚ ಗೋಲು ಗಳಿಸಿದರು. ಮೂರನೇ ಪಂದ್ಯದಲ್ಲಿ ಎಂಟಿಬಿ ರಾಯಲ್ಸ್ ತಂಡ ಕೊಡವ ಟ್ರೈಬ್ ಅನ್ನು ಸೋಲಿಸಿತು. ಚೆಕ್ಕೇರ ವರುಣ್ ಮಾದಪ್ಪ ರಾಯಲ್ಸ್ ಪರ ಪಂದ್ಯದ ಏಕೈಕ ಗೋಲು ಗಳಿಸಿದರು.

ನಾಲ್ಕನೇ ಪಂದ್ಯದಲ್ಲಿ ಅಂಜಿಗೇರಿ ನಾಡ್ ಮತ್ತು ಕೊಡವು ವಾರಿಯರ್ಸ್ ನಡುವೇ ಗೆಲುವಿಗಾಗಿ ಸೆಣಸಾಟ ನಡೆಯಿತು. ಆದರೆ, ಎರಡು ತಂಡಗಳು ಯಾವುದೇ ಗೋಲು ಪಡೆದುಕೊಳ್ಳಲಿಲ್ಲ. ನಂತರ ಪೆನಾಲ್ಟಿ ಶೂಟ್‌ನಲ್ಲಿ ಅಂಜಿಗೇರಿ ನಾಡ್ ಗೆಲುವು ಪಡೆದುಕೊಂಡಿತು. 5ನೇ ಪಂದ್ಯದಲ್ಲಿ ಕಾಕೋಟ್ ಸ್ಟ್ರೈಕರ್ಸ್ ವಿರುದ್ಧ ಪಾಲೆ ತಾಲ್ಲೂಕು ತಂಡವು ಎರಡು ಗೋಲು ಗಳಿಸಿಕೊಂಡಿತು. ಇಂದಿನ ಕಡೇ ಪಂದ್ಯದಲ್ಲಿ ಕೊಡವ ವಾರಿಯರ್ಸ್ ತಂಡವು ಕನೆಕ್ಟಿಂಗ್ ಕೊಡವಸ್ ವಿರುದ್ಧ ಒಂದು ಗೋಲು ಬಾರಿಸುವ ಮೂಲಕ ಗೆಲುವು ತಮ್ಮದಾಗಿಸಿಕೊಂಡಿತ್ತು.

ಪಂದ್ಯಾವಳಿಗಳನ್ನು ವೀಕ್ಷಿಸಲು ಕೊಡವ ಸಂಸ್ಕೃತಿ ಪ್ರತಿ ಬಿಂಬಿಸುವ ಉಡುಗೆ ತೊಡುಗೆಗಳನ್ನು ಧರಿಸಿಕೊಂಡು ಬಂದು ಕ್ರೀಡಾಪಟುಗಳಿಗೆ ಪ್ರೇರೇಪಿಸಿದರು. ಈ ಸಂದರ್ಭದಲ್ಲಿ ಹಾಕಿ ಕರ್ನಾಟಕ ಕಾರ್ಯದರ್ಶಿ ಹಾಗೂ ಮಾಜಿ ಒಲಿಂಪಿಯನ್ ಅಂಜಪರ್ವಂಡ ಸುಬ್ಬಯ್ಯ, ಶಾಸಕ ಟಿ.ಎಸ್.ಶ್ರೀವತ್ಸ, ಹಾಕಿ ಮೈಸೂರು ಅಧ್ಯಕ್ಷ ಕೊಂಗಂಡ ದಿಲೀಪ್ ಬಿದ್ದಪ್ಪ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ಹಾಕಿ ಮೈಸೂರು ಉಪಾಧ್ಯಕ್ಷ ಕೋಟೇರ ಮುದ್ದಯ್ಯ, ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಸ್ಪೋರ್ಟ್ಸ್ ಕ್ಲಬ್ ಮಾಜಿ ಅಧ್ಯಕ್ಷ ಕುಟ್ಟಿಮಾಡ ಯುವ ಅಧ್ಯಕ್ಷ ಡಿ.ಫೀಲ್ಡ್ ಮಾರ್ಷಲ್ ಕೆಎಂ.ಕಾರ್ಯಪ್ಪ ಅಸೋಸಿಯೇಷನ್ ಅಧ್ಯಕ್ಷ ನ್ಯಾಂಡ ತಿಮ್ಮಯ್ಯ ಮತ್ತಿತರರು ಪಾಲ್ಗೊಂಡಿದರು.



ಮೈಸೂರಿನ ಚಾಮುಂಡಿ ವಿಹಾರ ಹಾಕಿ ಮೈದಾನದಲ್ಲಿ ಕೊಡವ ಸಮಾಜ ಯುವ ವಿಭಾಗ ಮೈಸೂರು, ಕೊಡವ ಸಮಾಜ ಮೈಸೂರು ಮತ್ತು ಹಾಕಿ ಮೈಸೂರು ಸಹಯೋಗದಲ್ಲಿ ಏರ್ಪಡಿಸಿರುವ ಕೊಡವ ಹಾಕಿ ಪ್ರೀಮಿಯರ್ ಲೀಗ್ (ಕೆಎಚ್‌ಪಿಎಲ್)ನಲ್ಲಿ ಕೂರ್ಗ್ ಯುನೈಟೆಡ್ ಮತ್ತು ಪಾಲೆ ತಾಲೂಕು ತಂಡಗಳ ಸೆಣಸಾಟ ನಡೆಯುತ್ತಿರುವ ದೃಶ್ಯ

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಾರ್ಗನ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಮಾದೇವ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಕುಬೇರಾ (ಹಿಂ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| ಮಾದೇವ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮಾದೇವ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಕಣ್ಣಪ್ಪ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಕುಬೇರನ್(ತ) + ಕುಬೇರಾ (ಕ) | 2+2 ಪ್ರದರ್ಶನಗಳು |
| **ಲಿಡೋ** | |
| ರಾಜರತ್ನಾಕರ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3) | 3+1 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | 28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ. |
| ಸ್ಕ್ರೀನ್ 2 | ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ. |
| ಸ್ಕ್ರೀನ್ 3 | ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ. |
| ಸ್ಕ್ರೀನ್ 3 | ಯುದ್ಧಕಾಂಡ 2 (ಕ): ಸಂ.6.50ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಜಾನ್‌ಸನ್ ಎಂಡಿಎ ಕಾರ್ಯದರ್ಶಿ

ಮೈಸೂರು, ಜೂ.27(ಆರ್‌ಕೆ)– ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (MIMS) ಮುಖ್ಯ ಆಡಳಿತಾಧಿಕಾರಿ (ಕಿರಿಯ ಶ್ರೇಣಿ ಕೆಎಎಸ್ ಅಧಿಕಾರಿ) ಕೆ.ಜಾನ್‌ಸನ್ ಅವರನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (MDA) ಕಾರ್ಯದರ್ಶಿಯನ್ನಾಗಿ ನಿಯೋಜಿಸಲಾಗಿದೆ.



ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಹೆಚ್.ಕೇಶವಪ್ರಸಾದ್ ಅವರು ಇಂದು ಅಧಿಸೂಚನೆ ಹೊರಡಿಸಿದ್ದು, ಎಂಡಿಎ ಕಾರ್ಯದರ್ಶಿಯಾಗಿದ್ದ ವಿ.ಕೆ.ಪ್ರಸನ್ನ ಕುಮಾರ್ ಅವರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಕಾರ್ಯ ವರದಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಜಾನ್‌ಸನ್ ಅವರು ಇಂದು (ಶುಕ್ರವಾರ) ಸಂಜೆ ಎಂಡಿಎ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದರು.

## ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.27– ಜೂನ್ 28ರಿಂದ ಜೂನ್ 30 ರವರೆಗೆ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ವರಕೋಡು ಗೇಟ್, ಬ್ಲೂ ಓಸಿಯನ್, ವರುಣ ವುಡ್ ಬಡಾವಣೆ, ಅಕ್ಷಯ ವುಡ್ ಬಡಾವಣೆ, ಶಿಕ್ಷಾ ಶಾಲೆ, ಪಿಲ್ಲಹಳ್ಳಿ ರಸ್ತೆ ಹಾಗೂ ಶಿವರಾಂಪೇಟೆ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



# ಶ್ರೋತೃಗಳ ರಂಜಿಸಿದ ಚಿತ್ರಗೀತೆಗಳ ಗಾಯನ

## ವಿಶೇಷ ಮಕ್ಕಳಿಗೆ ಸಹಾಯಧನ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜೂ.27(ಪಿಎಂ)– ನಾದಬ್ರಹ್ಮ ಸಂಗೀತ ಸಭಾದಲ್ಲಿ ಪಾತಿ ಫೌಂಡೇಷನ್ ವತಿಯಿಂದ 125ನೇ ಕಾರ್ಯಕ್ರಮವಾಗಿ ನಡೆದ ವಿಷ್ಣುವರ್ಧನ್, ಅನಂತ್‌ನಾಗ್, ಶ್ರೀನಾಥ್ ಮತ್ತು ಶಂಕರ್‌ನಾಗ್ ಅವರ ಸಿನಿಮಾಗಳ ಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಶ್ರೋತೃಗಳನ್ನು ರಂಜಿಸಿತು.

ಇದೇ ವೇಳೆ ಮೈತ್ರಿ ಚಾರಿಟಬಲ್ ಟ್ರಸ್ಟ್‌ನ ವಿಶೇಷ ಶಾಲೆಯ ಮಕ್ಕಳಿಗೆ ಸೌಲಭ್ಯ ಕಲ್ಪಿಸುವ ಸಲುವಾಗಿ ಟ್ರಸ್ಟ್‌ಗೆ ಸಹಾಯಧನ ನೀಡಲಾಯಿತು. ಅಲ್ಲದೆ, ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಾದ ಧನುಷ್, ಮೋಕ್ಷಾ, ಭುವನ, ತೇಜಸ್ವಿನಿ, ದ್ವಿತೀಯ ಪಿಯುಸಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಸೌರವ್ ಗಜ್, ಚೇತನಾ, ರೀಚಾ ಹಾಗೂ ಅನನ್ಯ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜೊತೆಗೆ ವಿದ್ಯಾಭ್ಯಾಸಕ್ಕಾಗಿ 9ನೇ ತರಗತಿಯ ಕುಮಾರ್ ಮಹಾಬಲ ಎಂಬ ವಿದ್ಯಾರ್ಥಿಗೆ ಸಹಾಯಧನ ನೀಡಲಾ ಯಿತು. ಇದೇ ವೇಳೆ ಕುಸ್ತಿ ಕ್ಷೇತ್ರಕ್ಕೆ ನೀಡಿ ರುವ ಕೊಡುಗೆಗಾಗಿ ಕೆಎಸ್‌ಆರ್‌ಟಿಸಿ ಅಧಿಕಾರಿ ಪೈಲ್ವಾನ್ ಕೆಂಪೇಗೌಡ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಪಾತಿ ಫೌಂಡೇಶನ್ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ ಅವರು ಪಾಲಿಕೆ ಸದಸ್ಯರಾಗಿದ್ದವರು. ಅವರು ತಾವು ದುಡಿದಿರುವುದರಲ್ಲಿ ಸಮಾಜ ಮುಖಿ ಕಾರ್ಯಗಳಿಗೂ ವಿನಿಯೋಗಿಸುತ್ತಿದ್ದಾರೆ. ಇದು ಶ್ಲಾಘನೀಯ ಎಂದರು.

ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡಿದರೆ ಹೆಚ್ಚಿನ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪ್ರಸ್ತುತ ಮೈಸೂರಿನ ಇಬ್ಬರು ಬಾಲ ಪ್ರತಿಭೆಗಳು ವಿಶ್ವ ದಾಖಲೆ ಮಾಡಿದ್ದಾರೆ. ಒಬ್ಬ ಏಳನೇ ತರಗತಿ ಬಾಲಕ ಭಾಷಣ ಸ್ಪರ್ಧೆಯಲ್ಲಿ ಸ್ವಾಮಿ ವಿವೇಕಾನಂದರ ಕುರಿತು 14 ಗಂಟೆ 4 ನಿಮಿಷ ನಿರರ್ಗಳವಾಗಿ ಮಾತನಾಡಿದ್ದರೆ, ಮತ್ತೊಬ್ಬ 11 ಗಂಟೆ ಕಾಲ ಕೀ ಬೋರ್ಡ್ ನುಡಿಸಿ ದಾಖಲೆ ಮಾಡಿದ್ದು, ಆ ಮೂಲಕ ಮೈಸೂರಿಗೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದರು.

ಗಾಯಕರಾದ ಮಹೇಂದ್ರ, ಕೃಷ್ಣಮೂರ್ತಿ, ದಿವ್ಯ, ಎಂ.ಡಿ.ಪಾರ್ಥಸಾರಥಿ, ಲಕ್ಷ್ಮಿ, ಮಂಜು, ಬಸವರಾಜು, ಸುಧೀಂದ್ರ ಹಾಗೂ ನಟರಾಜು ಗೀತೆಗಳನ್ನು ಸಾದರಪಡಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ.ಬೈರಿ, ಚಲನಚಿತ್ರ ನಿರ್ಮಾಪಕ ಎಸ್.ಎ.ಶ್ರೀನಿವಾಸ್, ಕೆಆರ್ ಬ್ಯಾಂಕ್ ಅಧ್ಯಕ್ಷ ಬಸವರಾಜು (ಬಸಪ್ಪ), ಮುಖಂಡ ವಿಕ್ರಂಅಯ್ಯಂಗಾರ್ ಅತಿಥಿಗಳಾಗಿ ಭಾಗವಹಿಸಿದ್ದರು. ಪಾತಿ ಫೌಂಡೇಶನ್ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ, ಮುಖಂಡರಾದ ಜೋಗಿ ಮಂಜು, ಸಂತೋಷ್, ಎಸ್.ಎನ್.ರಾಜೇಶ್, ಮನೋಜ್, ಹೇಮಂತ್, ಅಭಿ, ಲಕ್ಷ್ಮಣ್, ಯೋಗೇಂದ್ರ, ಪುರುಷೋತ್ತಮ್, ಮಂಜುನಾಥ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗುರುವಾರ ನಡೆದ ಸಂಗೀತ ಕಾರ್ಯಕ್ರಮದಲ್ಲಿ ವಿಶೇಷ ಶಾಲೆಗೆ ಸಹಾಯಧನ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

## ನೋಟ್‌ಬುಕ್ ಹಾಗೂ ಸಿಹಿ ವಿತರಣೆ



ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಜನ್ಮದಿನದ ಪ್ರಯುಕ್ತ ಮಾನಸ ಗಂಗೋತ್ರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಸಿಹಿ ವಿತರಣೆ ಮಾಡಲಾಯಿತು. ಈ ವೇಳೆ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಂ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಾದೇಶ್, ಡಾ.ನಟರಾಜ್ ಶಿವಣ್ಣ, ರವೀನಂದನ್, ಹರೀಶ್ ಮೊಗ್ಗಣ್ಣ, ಮರಳ್ಳಿ ಮಹೇಶ್ ಇನ್ನಿತರರಿದ್ದಾರೆ.

# ಕೆಆರ್‌ಎಸ್ ಬಳಿ ಕಾವೇರಿ ಆರತಿ: ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ಜಾರಿ

ಬೆಂಗಳೂರು, ಜೂ.27– ಕೃಷ್ಣರಾಜ ಸಾಗರ(ಕೆಆರ್‌ಎಸ್) ಜಲಾಶಯದ ಬಳಿ ಉದ್ದೇಶಿತ ಕಾವೇರಿ ಆರತಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಶುಕ್ರವಾರ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಅರ್ಜಿದಾರರಾದ ರೈತ ನಾಯಕಿ ಸುನಂದಾ ಜಯರಾಮ್ ಪರವಾಗಿ ಹಾಜರಾದ ವಕೀಲ ಆರ್.ರಾಜಣ್ಣ ಅವರ ಪ್ರಾಥಮಿಕ ವಾದಗಳನ್ನು ಪರಿಗಣಿಸಿದ ನಂತರ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಮತ್ತು ನ್ಯಾಯಮೂರ್ತಿ ಸಿ.ಎಂ. ಜೋಶಿ ನೇತೃತ್ವದ ವಿಭಾಗೀಯ ಪೀಠ, ಎಲ್ಲಾ ಪ್ರತಿವಾದಿಗಳು ಎರಡು ವಾರಗಳಲ್ಲಿ ತಮ್ಮ ಉತ್ತರಗಳನ್ನು ಸಲ್ಲಿಸುವಂತೆ ನಿರ್ದೇಶಿಸಿದೆ.

ಡ್ಯಾಮ್ ಬಳಿ 120 ಅಡಿಯ ಕಾವೇರಿ ವಿಗ್ರಹ ಸ್ಥಾಪಿಸಲಾಗುತ್ತಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದ್ದು, ಅದರ ಕಾಮಗಾರಿಗೆ ಯಂತ್ರಗಳನ್ನು ಉಪಯೋಗಿಸಿರುವ ಫೋಟೊ ಸಹ ಸಲ್ಲಿಕೆ ಮಾಡಲಾಗಿದೆ. ಕಾಮಗಾರಿಗೆ ಅಗೆಯುವುದರಿಂದ ಡ್ಯಾಂಗೆ ಹಾನಿಯಾಗುವುದಿಲ್ಲವೇ? ಜಲಾಶಯದ ಸುರಕ್ಷತೆ ಸಮಿತಿಯ ಅನುಮತಿ ಏಕೆ ಪಡೆದಿಲ್ಲ? ಮನರಂಜನಾ ಪಾರ್ಕ್ ಕಾಮಗಾರಿಗೆ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆಯೇ? ಕಾವೇರಿ ಪ್ರತಿಮೆ ಸ್ಥಾಪಿಸುವಾಗ ತಜ್ಞರ ಸಲಹೆ ಪಾಲಿಸಲಾಗಿದೆಯೇ ಎಂದು ಸರ್ಕಾರವನ್ನು ಹಾಗೂ ಕಾವೇರಿ ನೀರಾವರಿ ನಿಗಮವನ್ನು ಹೈಕೋರ್ಟ್ ಪ್ರಶ್ನಿಸಿದೆ.



ಇದಕ್ಕೆ ಉತ್ತರಿಸಿದ ಸರ್ಕಾರದ ಪರ ವಕೀಲರು, ಸದ್ಯಕ್ಕೆ ಕಾವೇರಿ ಪ್ರತಿಮೆ ಮಾತ್ರ ಸ್ಥಾಪಿಸಲು ಟೆಂಡರ್ ನೀಡಲಾಗಿದೆ. ಕಾವೇರಿ ಪ್ರತಿಮೆ ಸ್ಥಾಪನೆಗೆ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆ. ಮನರಂಜನಾ ಪಾರ್ಕ್ ಟೆಂಡರ್ ಪೂರ್ಣಗೊಂಡಿಲ್ಲವೆಂದು ಹೈಕೋರ್ಟ್‌ಗೆ ತಿಳಿಸಿದರು.

# ಕನ್ನಡ ನೆಲ ಸರ್ವಸಮಾನತೆಯನ್ನು ಸಾರಿದ ಪುಣ್ಯಭೂಮಿ

## ನಾಡೋಜ ಡಾ. ಚಂದ್ರಶೇಖರ ಕಂಬಾರ ಅಭಿಮತ

ಮೈಸೂರು, ಜೂ.27– ಕನ್ನಡ ನಾಡಿನ ಹಿರಿಮೆ ಗರಿಮೆಗಳ ಹಿಂದೆ ಐತಿಹಾಸಿಕ ಸತ್ಯಗಳು ಇವೆ. ಕನ್ನಡದ ಪೂರ್ವಾಚಾರ್ಯರು, ಪಂಡಿತರು, ವಿದ್ವಾಂಸರು ನಾಡಿನ ಸಾಂಸ್ಕೃತಿಕ, ಸಾಹಿತ್ಯಕ ಪರಂಪರೆಯ ಶ್ರೀಮಂತಿಕೆಯನ್ನು ಹಾಡಿ ಹೊಗಳಿದ್ದಾರೆ. ಇದು ಕನ್ನಡ ನಾಡಿಗೆ ಶ್ರೀಮಂತವಾದ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಹಿನ್ನೆಲೆ ಇರುವುದನ್ನು ಸಾಕ್ಷೀಕರಿಸುತ್ತದೆ. ಕನ್ನಡ ನೆಲ ಪ್ರಾಚೀನ ಕಾಲದಿಂದಲೂ ಸಾಹಿತ್ಯದೊಂದಿಗೆ ಸರ್ವಸಮಾನತೆಯನ್ನು ಸಾರಿದ ಪುಣ್ಯಭೂಮಿ ಎಂದು ನಾಡಿನ ಹೆಸರಾಂತ ಸಾಹಿತಿಗಳಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಾಡೋಜ ಡಾ. ಚಂದ್ರಶೇಖರ ಕಂಬಾರರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ವತಿಯಿಂದ 'ಕವಿರಾಜಮಾರ್ಗ–ಕನ್ನಡ, ಕನ್ನಡಿಗ ಮತ್ತು ಕರ್ನಾಟಕ' ಎಂಬ ವಿಷಯದ ಮೇಲೆ ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಭಾಷೆಗೆ ಆಧಾರ ಸಹಿತವಾದ ಪ್ರಾಚೀನತೆ ಬಹಳ ಹಿಂದಿನಿಂದಲೂ ಇದೆ. ಕನ್ನಡೇತರ ಸಾಹಿತ್ಯದ ಕೃತಿಗಳಿಂದಲೂ ನಾಡಿನ ಇತಿಹಾಸದ ಕುರುಹುಗಳು ದೊರೆತಿರುವುದು ಕನ್ನಡ ಭಾಷೆಯ ಚರಿತ್ರೆಯನ್ನು ಬಲ್ಲವರಿಗೆ ತಿಳಿದಿದೆ. ನಮ್ಮ ನಾಡಿನ ಶ್ರೀಮಂತ ಪರಂಪರೆಯನ್ನು ನಮ್ಮ ಪುರಾಣ ಕಾವ್ಯಗಳು ಪ್ರಸ್ತಾಪಿಸಿರುವುದು ಇದಕ್ಕೆ ಸಾಕ್ಷಿ. ಮಹಾಭಾರತ, ಗ್ರೀಕ್ ಸಾಹಿತ್ಯಗಳಲ್ಲಿಯೂ ಈ ಭಾಷೆಯ ಕುರಿತ ಕುರುಹುಗಳು ನಮ್ಮ ಭಾಷೆಯ ಬಗೆಗೆ ನಾವು ಹೆಮ್ಮೆಪಡುವಂತೆ ಮಾಡಿವೆ ಎಂದು ನುಡಿದರು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಈ ರೀತಿಯ ವಿಚಾರ ಸಂಕಿರಣಗಳು ನಾಡಿನ ವಿದ್ಯಾರ್ಥಿ ಸಮುದಾಯಕ್ಕೆ ತುಂಬಾ ಉಪಯುಕ್ತವಾದವು. ಕನ್ನಡ ಸಾಹಿತ್ಯ ಎಲ್ಲ ರೀತಿಯ ಸಾಹಿತ್ಯ ಪ್ರಕಾರಗಳಲ್ಲಿ ತನ್ನ ಅಭೂತಪೂರ್ವ ಸಾಧನೆಯನ್ನು ಮಾಡಿದೆ. ಜಗತ್ತಿನ ಪ್ರಮುಖ ಭಾಷೆಗಳ ಸಾಲಿನಲ್ಲಿ ಕನ್ನಡವು ಒಂದಾಗಿದೆ. ಹಾಗಾಗಿ ನಮ್ಮ ಸಾಹಿತ್ಯದ ಹಾಗೂ ಸಂಸ್ಕೃತಿಯ ಶ್ರೀಮಂತ ಪರಂಪರೆಯ ಪುನರ್ ಮನನವು ಬಹಳ ಮುಖ್ಯವಾದುದು. ಕವಿರಾಜ ಮಾರ್ಗದ ಅಧ್ಯಯನ ಮತ್ತು ಓದಿನಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಶಾಲತೆಯನ್ನು ಅರಿಯಬಹುದು. ಕಾಲೇಜುಗಳು ಹಳೆಗನ್ನಡ ಸಾಹಿತ್ಯ ಕುರಿತು ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು ಪ್ರಶಂಸನೀಯವಾದುದು. ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಪ್ರಧಾನ್ ಗುರುದತ್ ಮಾತನಾಡಿ, ಇಂತಹ ವಿಚಾರ ಸಂಕಿರಣಗಳು ಒಂದು ಅರ್ಥದಲ್ಲಿ ಉದಾತ್ತ ಅಧ್ಯಯನಗಳು. ಕವಿರಾಜಮಾರ್ಗವು ನಾಡಿನ ಪ್ರಾಚೀನ ಇತಿಹಾಸವನ್ನು, ಕನ್ನಡಿಗರ ಹಾಗೂ ಕನ್ನಡ ನಾಡಿನ ವೈಶಿಷ್ಟ್ಯವನ್ನು ಬಿಂಬಿಸುವ ಮೌಲಿಕ ಕೃತಿಯಾಗಿದೆ. ಇದನ್ನು ಕೇವಲ ಅಲಂಕಾರ ಗ್ರಂಥವೆಂದಾಗಲೀ, ಶಾಸ್ತ್ರಕೃತಿ ಎಂದಾಗಲಿ ಗಣಿಸಲು ಸಾಧ್ಯವಿಲ್ಲ. ಇದು ಧರ್ಮ ಸಮನ್ವಯತೆ, ಪರಧರ್ಮ ಸಹಿಷ್ಣುತೆ, ಪರರ ವಿಚಾರಗಳಿಗೆ ಸ್ಪಂದಿಸುವ ಸೌಜನ್ಯಶೀಲತೆಯನ್ನು ಕೂಡ ತಿಳಿಸುತ್ತದೆ. ಅಲ್ಲದೆ ಈ ಕೃತಿಯಲ್ಲಿ ಭಾಷಾವಿಜ್ಞಾನದ ಕುರುಹುಗಳು, ತಿರುಳ್ಗನ್ನಡ ಸೀಮೆಯ ಕುರಿತ ಪ್ರಸ್ತಾಪಗಳು, ಶಬ್ದ ಅರ್ಥಗಳ ಗ್ರಹಿಕೆ ಎಲ್ಲವೂ ಪ್ರಸ್ತಾಪವಾಗಿವೆ. ಅಲಂಕಾರ ಮತ್ತು ಶಾಸ್ತ್ರ ವಿಚಾರಗಳ ಜೊತೆ ಸಾಹಿತ್ಯದ ವಿಚಾರಗಳ ಸಮನ್ವಯವು ಸೂಕ್ಷ್ಮವಾಗಿ ಗ್ರಂಥವನ್ನು ಅಧ್ಯಯನ ಮಾಡಿದರೆ ಅರಿವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜ್ ಮಾತನಾಡಿ, ಸಾಹಿತ್ಯದ ಮೂಲ ಪ್ರೇರಣೆಯನ್ನು ನಾಡಿನ ಸಾಹಿತ್ಯದ ವಿದ್ಯಾರ್ಥಿಗಳು, ಸಾಹಿತ್ಯಾಸಕ್ತರು ಅರಿಯಬೇಕಾದ ಅನಿವಾರ್ಯತೆ ಇರುವುದರಿಂದ ಪ್ರಸ್ತುತ ಕಾಲಮಾನದಲ್ಲಿ ಇಂತಹ ವಿಚಾರ ಸಂಕಿರಣಗಳು ಅರ್ಥಪೂರ್ಣವೆನಿಸುತ್ತವೆ. ಕವಿರಾಜಮಾರ್ಗಕಾರ ಒಂದು ಅರ್ಥದಲ್ಲಿ ಕನ್ನಡ ಸಾಹಿತ್ಯದ ಇತಿಹಾಸವನ್ನು ಆರಂಭಿಕವಾಗಿ ಗುರುತಿಸಿದ ಶಾಸ್ತ್ರಕಾರ. ಆತನ ದೇಶೀಯತೆ, ಕನ್ನಡಿಗರ ಸಹೃದಯತೆ ಕುರಿತ ಅವನ ದೃಷ್ಟಿಕೋನಗಳು, ಕನ್ನಡನಾಡಿನ ಭೌಗೋಳಿಕ ವ್ಯಾಪ್ತಿ ಬಗೆಗಿನ ಅವನ ನಿಲುವು ಈ ಎಲ್ಲವೂ ಅವನ ಕೃತಿಯನ್ನು ನಾವು ಹೆಮ್ಮೆಯ ಪ್ರತೀಕವೆಂದು ನೋಡುವಂತೆ ಮಾಡಿವೆ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಸ್ವಾಗತಿಸಿ ದರು. ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಪ್ರಭು ವಂದಿಸಿದರು. ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿಗಳು ಮತ್ತು ಕನ್ನಡ ಸ್ನಾತಕೋತ್ತರ ವಿಭಾಗದ ಅಧ್ಯಾಪಕರಾದ ಡಾ. ಬಿ. ಪ್ರಭುಸ್ವಾಮಿ ನಿರೂಪಿಸಿದರು. ಕು. ಸುಶ್ಮಿತಾ ಮತ್ತು ತಂಡದವರು ಪ್ರಾರ್ಥಿಸಿದರು. ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್. ಸುದೀಪ್ ಉಪಸ್ಥಿತರಿದ್ದರು.

ಉದ್ಘಾಟನೆಯ ನಂತರದ ಗೋಷ್ಠಿಗಳಲ್ಲಿ ಸಹ ಪ್ರಾಧ್ಯಾಪಕ ಜಯಶಂಕರ ಹಲಗೂರು, ಕವಿರಾಜ ಮಾರ್ಗ–ಕನ್ನಡ ವಿಷಯವಾಗಿ ಪ್ರೊ. ಸಿ.ಪಿ. ಸಿದ್ಧಾಶ್ರಮ ಅಧ್ಯಕ್ಷತೆಯಲ್ಲಿ, ಪ್ರಾಧ್ಯಾಪಕ ಡಾ. ರತ್ನಾಕರ ಮಲ್ಲನಮೂಲೆ ಕವಿರಾಜಮಾರ್ಗ–ಕನ್ನಡಿಗ ವಿಷಯವಾಗಿ ಡಾ. ಎಂ.ಜಿ ಮಂಜುನಾಥ ಅಧ್ಯಕ್ಷತೆಯಲ್ಲಿ, ಪ್ರಾಧ್ಯಾಪಕರಾದ ಡಾ. ಎಸ್.ಡಿ. ಶಶಿಕಲಾರವರು ಕವಿರಾಜಮಾರ್ಗ–ಕರ್ನಾಟಕ ಎಂಬ ವಿಷಯವಾಗಿ ಪ್ರಾಧ್ಯಾಪಕ ಡಾ. ಕವಿತಾ ರೈ ಅಧ್ಯಕ್ಷತೆಯಲ್ಲಿ ವಿಚಾರ ಮಂಡಿಸಿದರು. ಪ್ರಬಂಧ ಮಂಡನಾ ಗೋಷ್ಠಿಯು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ ಮೊರಬದ ಮಲ್ಲಿಕಾರ್ಜುನರವರ ಅಧ್ಯಕ್ಷತೆಯಲ್ಲಿ ಜರುಗಿತು. ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಎಚ್.ಟಿ ಶೈಲಜ ಅವರು ಪ್ರಬಂಧ ಮಂಡನಾ ಗೋಷ್ಠಿಯ ಸಂವಾದದಲ್ಲಿ ಪಾಲ್ಗೊಂಡಿದ್ದರು. ವಿವಿಧ ಕಾಲೇಜುಗಳ ಅಧ್ಯಾಪಕರು ಹಾಗೂ ಸಂಶೋಧಕರು ಪ್ರಬಂಧಗಳನ್ನು ಮಂಡಿಸಿದರು.




ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ನಾಡೋಜ ಡಾ. ಚಂದ್ರಶೇಖರ ಕಂಬಾರರು ಗುರುವಾರ ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ 'ಕವಿರಾಜ ಮಾರ್ಗ–ಕನ್ನಡ, ಕನ್ನಡಿಗ ಮತ್ತು ಕರ್ನಾಟಕ' ವಿಷಯದ ಮೇಲಿನ ರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಈ ವೇಳೆ ಸುತ್ತೂರು ಶ್ರೀಗಳು ಸೇರಿ ಇತರರು ಉಪಸ್ಥಿತರಿದ್ದರು.

## ಕೆಂಪೇಗೌಡ ಜಯಂತಿ



ಮೈಸೂರಿನ ಕಳಸ್ತವಾಡಿ ಗ್ರಾಮದಲ್ಲಿ ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲಾಯಿತು

## 4ನೇ ವರ್ಷದ ಪುಣ್ಯಸ್ಮರಣೆ



### ಶ್ರೀ ಯ॥ ಬಿ.ನಾರಾಯಣರವರು

ಮಾಲೀಕರು, ಚಂದ್ರಿಕ ಬ್ರಿಕ್ಸ್ ಇಂಡಸ್ಟ್ರಿ, ಶ್ರೀ ಲಕ್ಷ್ಮೀನಾರಾಯಣ ಫ್ಯೂಯಲ್ ಸ್ಟೇಷನ್

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನಿಮ್ಮ ನೆನಪು ನಮ್ಮಲ್ಲಿ ಚಿರಸ್ಥಾಯಿಯಾಗಿದೆ. ನೀವು ತೋರಿದ ಪ್ರೀತಿ, ಆತ್ಮವಿಶ್ವಾಸ, ಆದರ್ಶ ಮಾರ್ಗದಲ್ಲೇ ಅನುದಿನವೂ ಸಾಗುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದದೊಂದಿಗೆ ಬದುಕು ಸಾಗಿಸುತ್ತಿರುವ

ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮನಾರಾಯಣಪ್ಪ,
ಮಗ, ಸೊಸೆ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು,
ಕುಟುಂಬವರ್ಗ ಹಾಗೂ ಹೂಟಗಳ್ಳಿ ಗ್ರಾಮಸ್ಥರು

## ನಿಧನ




### ಶ್ರೀ ಚೌಡಪ್ಪ

(ಚಿಕ್ಕಲಿಂಗೇ ಮದ್ದೇಗೌಡ ಹಾಗೂ ಸಕ್ಕಲಮ್ಮನ ಮಗ)

ಇವರು ದಿನಾಂಕ: 27.06.2025 ಶುಕ್ರವಾರ ದೈವಾಧೀನರಾಗಿದ್ದು. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 28.06.2025 ಶನಿವಾರ ಬೆಳಗ್ಗೆ 11 ಗಂಟೆಗೆ ಕಾವೇರಿ ಶಾಲೆ ಹತ್ತಿರ, ಕನ್ನೇಗೌಡ ಕೊಪ್ಪಲು ಇಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

## ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ



### ಶ್ರೀ ಸಿದ್ದೇಗೌಡರು

(ಲೇ॥ ಮಾಜಿ ಛೇರ್ಮನ್ ಶ್ರೀ ವೆಂಕಟಗೌಡರವರ ಮಗ)

ಇವರು ದಿನಾಂಕ 18.06.2025ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 28.06.2025ನೇ ಶನಿವಾರ ಬೆಳಗ್ಗೆ 11.00 ರಿಂದ 12.30 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ #830, ಕುಂಟಮ್ಮನ ದೇವಸ್ಥಾನದ ಎದುರು, ಬಿಜಿಎಸ್ ಲೇಔಟ್, ಹೂಟಗಳ್ಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಆಗಮನದ ನಿರೀಕ್ಷೆಯಲ್ಲಿ : ಮೃತರ ಧರ್ಮಪತ್ನಿ ಜಯಮ್ಮ, ಮಕ್ಕಳು ಹಾಗೂ ಕುಟುಂಬವರ್ಗ

ದುಃಖತಪ್ತರು: ರವಿ.ಎಸ್.ದಿಲ್ದಾರ್, ಹೂಟಗಳ್ಳಿ. ಬಗರ್ ಹುಕುಂ ಸಾಗುವಳಿ ಸಕ್ರಮಣ ಸಮಿತಿಯ ಮಾಜಿ ಸದಸ್ಯರು, ಮೈಸೂರು

ಭೋಜನ: ಮಧ್ಯಾಹ್ನ 1 ಗಂಟೆಗೆ,

ಹರಿಕಥೆ : ರಾತ್ರಿ 8 ಗಂಟೆಗೆ
ರಾಜು ವಿ. ಶಿಕ್ಷಕರು ಮತ್ತು ತಂಡದವರಿಂದ, ಬಿಳಿಕೆರೆ

## ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಯೊಂದಕ್ಕೆ

**4 ವೀಲರ್ ಚಾಲಕರು ಬೇಕಾಗಿದ್ದಾರೆ**

ವಯೋಮಿತಿ : 20 ರಿಂದ 30

ಕನಿಷ್ಠ ಎರಡು ವರ್ಷ ಅನುಭವವಿರುವವರಿಗೆ ಆದ್ಯತೆ

ಆಕರ್ಷಕ ವೇತನ ಸೌಲಭ್ಯವಿದೆ.

ಆಸಕ್ತರು ಈ ಕೂಡಲೇ ಕೆಳಕಂಡ ದೂರವಾಣಿಗೆ ಸಂಪರ್ಕಿಸಿ. ☎ 9606008447

**NOT GETTING YOUR STAR OF MYSORE & ಮೈಸೂರು ಮಿತ್ರ**

Call: 98452-96447 / 99003-82840

**FAME**
FAROOKH ACADEMY OF MEDICAL EDUCATION
Nurturing Knowledge, Delivering Care

**FAROOKH ACADEMY OF MEDICAL EDUCATION HOSPITAL AND RESEARCH INSTITUTE**

Mysore-Madikeri Road, Near Yelwala, Hunsur Taluk, Mysore District-571103

**RECRUITMENT NOTICE**

We are looking for dedicated professionals to join our team in the following roles:

1. **Project Managers** - Civil / Electrical.
2. **Civil Engineers**
3. **Electrical Engineers**
4. **Site Supervisors** - Civil / Electrical
5. **Drivers** - Car, Ambulance & Bus (Valid License Mandatory)
6. **Housekeeping Managers** - Experience in hospital or hospitality preferred.

Interested candidates please send your resume to :
**rizwan@groupaccession.com**
**Contact: 9739588055**

**NEWLY LAUNCHED PROJECT IN YELWALA**
**"PARISARA SIRI" - MYSORE**
**RESIDENTIAL PLOTS**
**@ JUST Rs. 675/- Sqft.,**
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
**DIMENSION**
"30x40" "30x50" "40x60"
Contact: 9740391228

## ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸಲು ನಿವೃತ್ತ ಗ್ರಾಮ ಲೆಕ್ಕಾಧಿಕಾರಿಗಳು ಅಥವಾ ನಿವೃತ್ತ ರಾಜಸ್ವ ನಿರೀಕ್ಷಕರು ಬೇಕಾಗಿದ್ದಾರೆ.

ಸಂಪರ್ಕಿಸಿ: ರವಿಕುಮಾರ್
**Mob: 98456 40725**

**SEMI COMMERCIAL & RESIDENTIAL**
**BUILDING FOR SALE**
**40x60** Ground Floor / First Floor / Second Floor
**Commercial Shop -1 No.**
**2 BHK House - 4 Nos. & 1 BHK House - 2 Nos.**
**Total Houses - 6 Nos.**
Nanjumalige Circle, Chamundipuram
Main Road, Hosabandikeri 1st Cross,
near Mysore Palace, Heart of the City.
Call : 70265 79565

## ನಿರ್ಮಲ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್

# 1004/963, ಡಾಕ್ಟರ್ಸ್ ಲೇಔಟ್ ಪಕ್ಕದಲ್ಲಿ, ರಿಂಗ್ ರಸ್ತೆ, ಆಲನಹಳ್ಳಿ, ಮೈಸೂರು–570028.

ನಿರ್ಮಲ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಕ್ಲಿನಿಕಲ್ ತರಬೇತಿ ನೀಡಲಾಗುವುದು.
ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪಾಸಾದವರಿಗೆ,
ಪರಿಣಿತ ವೈದ್ಯರಿಂದ ಮತ್ತು ಶ್ರೇಷ್ಠ ತಂತ್ರಜ್ಞರಿಂದ ಬೋಧನೆ.

ಪ್ರವೇಶಾತಿ ಆರಂಭ, ತ್ವರೆಮಾಡಿ.

- DOT & AT- ಡಿಪ್ಲೊಮಾ ಇನ್ ಆಪರೇಷನ್ ಮತ್ತು ಅನಸ್ಥಿಷ್ಯಾ ಟೆಕ್ನಾಲಜಿ
- DMLT- ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ
- DMIT- ಡಿಪ್ಲೊಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ

ಸಂಪರ್ಕಿಸಿ: 9606010107, 7348855779

## ಹುಟ್ಟುಹಬ್ಬದ ಶುಭಾಶಯಗಳು



### ಶ್ರೀ ಮಂಜುನಾಥ್ ಸಾಹೇಬರಿಗೆ

ಮೈಸೂರು ನಿರ್ಮಿತಿ ಕೇಂದ್ರ, ಯೋಜನಾಧಿಕಾರಿ
ರಿಟೈಡ್ ಆಫೀಸರ್, ಊರು ಮಿರ್ಲೆ ಗ್ರಾಮ
ಹಾಲಿವಾಸ ಮೈಸೂರು, ಫೋನ್ ನಂಬರ್
94482 87525

ಇವರ ಸಮಸ್ತ ಕುಟುಂಬದವರಿಗೆ ತಾಯಿ ಚಾಮುಂಡೇಶ್ವರಿ ಆಯಸ್ಸು – ಆರೋಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಶುಭಕೋರುವವರು: ಎಸ್.ತೇಜಸ್ವಿನಿ

**NOT GETTING YOUR STAR OF MYSORE & ಮೈಸೂರು ಮಿತ್ರ**

Call: 98452-96447 / 99003-82840

**100% TEAK WOOD**
FACTORY FINISH DOORS & FRAMES
@ FACTORY DEPOT RATES



10 YEARS WARRANTY
9845426862
9901291267

**ಹಸಿರು ನಮ್ಮ ಉಸಿರು**

## ಬೇಕಾಗಿದ್ದಾರೆ

ಮೈಸೂರಿನ ಕಾವೇರಿ ಸಮೂಹ ಸಂಸ್ಥೆಯ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳ ಅವಶ್ಯಕತೆ ಇರುತ್ತದೆ

1. ಸೈಟ್ ಇಂಜಿನಿಯರ್ : 2 ಸಂಖ್ಯೆ – ವಿದ್ಯಾರ್ಹತೆ ಡಿಪ್ಲೋಮೋ ಸಿವಿಲ್, ಅನುಭವ ಕನಿಷ್ಠ 3–5 ವರ್ಷ
2. ವಸತಿ ನಿಯಮಗಳ ಮೇಲ್ವಿಚಾರಕರು (ಮಹಿಳೆ) : 2 ಸಂಖ್ಯೆ, ವಿದ್ಯಾರ್ಹತೆ ಪಿಯುಸಿ, ಅನುಭವ ಕನಿಷ್ಠ 2 ವರ್ಷ
3. ಡ್ರೈವರ್ಸ್ : 4 ಸಂಖ್ಯೆ ವಿದ್ಯಾರ್ಹತೆ ಎಸ್ಎಸ್ಎಲ್ಸಿ, ಅನುಭವ ಕನಿಷ್ಠ 2 ವರ್ಷ

ಸಂಪರ್ಕಿಸಿ : 9538825061

## ಫರ್ನಿಚರ್ ಎಕ್ಸ್‌ಪೋ 2025




— DIRECT FACTORY SALE —
**@ SAMRAT KALYAN BHAVAN**
#1/s.m.t Udayaravi Road, Kuvempunagar,
Mysore-570023

FOR MORE DETAILS
+91 90359 36695

ಸಮಯ
ಬೆಳಗ್ಗೆ 10.30
ಸಂಜೆ 8.30

27TH JUNE TO 6TH JULY ONLY 10 DAYS

**KERALA NILAMBUR TEAK WOOD FURNITURES**

ಜೆಎಸ್ಎಸ್ ಮಹಾವಿದ್ಯಾಪೀಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ – 326

28 ಜೂನ್ 2025 * ಶನಿವಾರ * ಸಂಜೆ 5.00
ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್ಎಸ್ ಆಸ್ಪತ್ರೆ ಆವರಣ, ಮೈಸೂರು

ದಿವ್ಯಾಶೀರ್ವಾದ
**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಸಮ್ಮುಖ

**ಶ್ರೀ ಗುರುಶಾಂತ ಸ್ವಾಮಿಗಳು**
ಶ್ರೀ ಕುದೇರು ಮಠ
ಮೈಸೂರು

**ಶ್ರೀ ಶ್ರೀಕಂಠ ಸ್ವಾಮಿಗಳು**
ಶ್ರೀ ವಿರಕ್ತಮಠ, ಮುಡಿಗುಂಡ
ಶ್ರೀ ಅರಮನೆ ಪಂಚಗವಿಮಠ, ಮೈಸೂರು

ಅಧ್ಯಕ್ಷತೆ
**ಪ್ರೊ. ಚಂದ್ರಶೇಖರಯ್ಯ**
ವಿಶ್ರಾಂತ ಪ್ರಾಂಶುಪಾಲರು

ಉದ್ಘಾಟನೆ
**ಪ್ರೊ. ಎಂ. ಕೃಷ್ಣೇಗೌಡ**
ವಿಶ್ರಾಂತ ಪ್ರಾಂಶುಪಾಲರು

ಉಪನ್ಯಾಸ
**ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ**
ಅಧ್ಯಕ್ಷರು, ಕದಳಿ ಮಹಿಳಾ ವೇದಿಕೆ
ವಿಷಯ: ಅಕ್ಕನ ವಚನಗಳಲ್ಲಿ ವೈಚಾರಿಕ ಚಿಂತನೆಗಳು

ಆಶಯ ನುಡಿ
**ಶ್ರೀ ಎಂ. ಚಂದ್ರಶೇಖರ್**
ಅಧ್ಯಕ್ಷರು, ಕನ್ನಡ ಸಾಹಿತ್ಯ ಕಲಾಕೂಟ
ಮೈಸೂರು


ವಚನ ಗಾಯನ
**ಶ್ರೀ ಆನಂದಕುಮಾರ್ ಕಂಬಳಿಹಾಳ್**

ಸ್ವಾಗತ
**ಶ್ರೀ ಎ.ಪಿ. ವಿರೂಪಾಕ್ಷ**
ಕಾರ್ಯನಿರ್ವಾಹಕ ನಿರ್ದೇಶಕ, ಅ.ಭಾ.ವೀ.ಲಿಂ.ಮ.

ನಿರೂಪಣೆ
**ಶ್ರೀ ಬಿ.ಆರ್. ಶಿವಕುಮಾರ್**
ಶಿಕ್ಷಕರು

ಪ್ರಾಯೋಜಕರು
**ಲೇಟ್ ಶ್ರೀಮತಿ ಸರ್ವಮಂಗಳಮ್ಮ W/o ಲೇಟ್ ಶ್ರೀ ಕೆ.ಎನ್. ವೀರಭದ್ರಪ್ಪ**
ನಿವೃತ್ತ ಶಿಕ್ಷಕರು, ಕೆರೆಗೋಡು, ಮಂಡ್ಯ ತಾ., ಮಂಡ್ಯ ಜಿಲ್ಲೆ
ಮಕ್ಕಳು ಹಾಗೂ ಕುಟುಂಬ ವರ್ಗದವರು





ತಮಗೆ ಆದರದ ಸ್ವಾಗತ

ಪ್ರಕಟಣೆ
**ಕೆ.ವಿ. ಮಲ್ಲೇಶ್**
ಸಂಸ್ಥಾಪಕ ನಿರ್ದೇಶಕರು, ವೀರಶೈವ ಸ್ನೇಹ ಬಳಗ, ಕುವೆಂಪುನಗರ
ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ । ಅಧ್ಯಕ್ಷರು, ಅನಿಕೇತನ ಸೇವಾ ಟ್ರಸ್ಟ್